ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫೪

**ಪಟ್ಟಿ – ೧೬**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಮುಂದುವರೆದ ಅಧಿವೇಶನ**

**ಗುರುವಾರ, ದಿನಾಂಕ : ೨೬ನೇ ಮಾರ್ಚ್, ೨೦೨೬**

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಉಪ ಮುಖ್ಯಮಂತ್ರಿಗಳು

೩. ಗೃಹ ಸಚಿವರು

೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಅಬಕಾರಿ ಸಚಿವರು

೬. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

## ಸಾರ್ವಜನಿಕ ಉದ್ಯಾನವನಗಳ ನಿರ್ವಹಣೆ ಕುರಿತು

**ಡಾ|| ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿದವರು) :–**

೧೮೯೬ (೨೨೮೮) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಸಾರ್ವಜನಿಕ ಉದ್ಯಾನವನಗಳು ವಿಶೇಷವಾಗಿ ಬಿಬಿಎಂಪಿ (BBMP)/GBA ವ್ಯಾಪ್ತಿಯಲ್ಲಿನ ಉದ್ಯಾನವನಗಳು ಹಾಗೂ ವ್ಯಾಯಾಮ ಪರಿಕರಗಳ ನಿರ್ವಹಣೆಗೆ ಪ್ರತಿವರ್ಷ ವಿನಿಯೋಗಿಸುತ್ತಿರುವ ಮೊತ್ತವೆಷ್ಟು; ಅದರಲ್ಲಿ ಪದ್ಮನಾಭನಗರ ವ್ಯಾಪ್ತಿಯ ಆರ್.ಕೆ.ಪಾರ್ಕ್‌ಗೆ ೨೦೨೫–೨೬ನೇ ಸಾಲಿನಲ್ಲಿ ನಿರ್ವಹಣೆಗಾಗಿ ಮೀಸಲಿರಿಸಿ ವ್ಯಯಿಸಿರುವ ಮೊತ್ತವೆಷ್ಟು; ಹಾಗೇ ಮೀಸಲಿರಿಸಿದ್ದಲ್ಲಿ, ನಿರ್ವಹಣೆ ಮಾಡದಿರುವುದಕ್ಕೆ ಕಾರಣಗಳೇನು ;

(ಆ) ಬಿಬಿಎಂಪಿ (BBMP)/GBA ವ್ಯಾಪ್ತಿಯ ಹೆಚ್ಚಿನ ಉದ್ಯಾನವನಗಳಲ್ಲಿ ಕಸದ ವಿಲೇವಾರಿ ಸಮರ್ಪಕವಾಗಿಲ್ಲದಿರುವುದು ಸ್ವಚ್ಛತೆಯ ಕಳಪೆ ನಿರ್ವಹಣೆಯ ಅಶುಚಿತ್ವ ಮತ್ತು ಹಾನಿಗೊಳಗಾಗಿ ದುಸ್ಥಿತಿಯನ್ನು ತಲುಪುತ್ತಿರುವುದಕ್ಕೆ ಕಾರಣಗಳೇನು; ಈ ಉದ್ಯಾನವನಗಳ ನಿರ್ವಹಣೆ ಪಡೆದ ಗುತ್ತಿಗೆದಾರರು ಅಸಮರ್ಪಕ ನಿರ್ವಹಣೆಗೆ ತೆಗೆದುಕೊಂಡ/ತೆಗೆದುಕೊಳ್ಳುತ್ತಿರುವ ಕ್ರಮಗಳೇನು; ಹಾಗೆ ಗುರುತಿಸಲ್ಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಪ್ರಾಧಿಕಾರ ಕ್ರಮ ಕೈಗೊಳ್ಳಲಿದೆಯೇ ?

## ಎತ್ತಿನಹೊಳೆ ಯೋಜನೆಯ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೯೭ (೨೨೧೯) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಎತ್ತಿನಹೊಳೆ ಯೋಜನೆಯ ಧ್ಯೇಯೋದ್ದೇಶವೇನು ; ಸದರಿ ಯೋಜನೆಯು ಯಾವ ವರ್ಷದಲ್ಲಿ ಪ್ರಾರಂಭವಾಯಿತು ಹಾಗೂ ಯಾವ ವರ್ಷದಲ್ಲಿ ಈ ಯೋಜನೆಯನ್ನು ಸಂಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಂಡಿತ್ತು ; ಸದರಿ ಯೋಜನೆಯ ಅಂದಾಜು ವೆಚ್ಚವೆಷ್ಟು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಎತ್ತಿನಹೊಳೆ ಯೋಜನೆಯಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳು ಯಾವುವು; ಕಾಮಗಾರಿಯು ಯಾವ ಹಂತದಲ್ಲಿದೆ ; (ವಿಸ್ಕೃತವಾದ ಮಾಹಿತಿ ನೀಡುವುದು)

(ಇ) ಎತ್ತಿನಹೊಳೆ ಯೋಜನೆಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿಯ ವಿವರ ನೀಡುವುದು ; ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿದೆ ; ಈ ಕಾಮಗಾರಿಗಳಿಗಾಗಿ ಇಲ್ಲಿಯವರೆಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ಕಾಮಗಾರಿವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ಈ ಯೋಜನೆಯ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ; (ವಿವರ ನೀಡುವುದು)

(ಉ) ಎತ್ತಿನಹೊಳೆ ಯೋಜನೆಗೆ ಅಂದಾಜು ವೆಚ್ಚಕ್ಕಿಂತ ಹೆಚ್ಚಿನ ಅನುದಾನ ಬೇಕಾಗಿರುವುದರಿಂದ ಈವರೆಗೂ ಎಷ್ಟು ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ ; ಸದರಿ ಯೋಜನೆಗೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿದ್ದರೂ ಸಹ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಜೈಲುಗಳಲ್ಲಿ ಭದ್ರತಾ ಲೋಪಗಳು ಹಾಗೂ ನಿರ್ವಹಣಾ ದೌರ್ಬಲ್ಯದ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೯೮ (೨೨೮೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಜೈಲುಗಳಲ್ಲಿ ನಿಷೇಧಿತ ವಸ್ತುಗಳು (ಮೊಬೈಲ್, ಮಾದಕ ವಸ್ತುಗಳು ಮುಂತಾದವು) ಪತ್ತೆಯಾಗುತ್ತಿರುವ ಪ್ರಕರಣಗಳ ಸಂಖ್ಯೆ ಎಷ್ಟು ; ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಜೈಲುಗಳಲ್ಲಿ ಸಿಬ್ಬಂದಿ ಕೊರತೆ, ಭದ್ರತಾ ಲೋಪಗಳು ಹಾಗೂ ನಿರ್ವಹಣಾ ದೌರ್ಬಲ್ಯಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವುಗಳನ್ನು ಸರಿಪಡಿಸಲು ಯಾವ ಕ್ರಮಗಳನ್ನು, ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಇ) ಜೈಲುಗಳಲ್ಲಿ ಸಿಸಿಟಿವಿ ವ್ಯವಸ್ಥೆ ಸ್ಕ್ಯಾನರ್‌ಗಳು ಹಾಗೂ ಇತರೆ ಭದ್ರತಾ ತಂತ್ರಜ್ಞಾನಗಳನ್ನು ಅಳವಡಿಸುವ ಬಗ್ಗೆ ಸರ್ಕಾರದ ಯೋಜನೆ ಏನು; ಈಗಾಗಲೇ ಎಷ್ಟು ಜೈಲುಗಳಲ್ಲಿ ಈ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಉಳಿದ ಜೈಲುಗಳಲ್ಲಿ ಅವುಗಳನ್ನು ಯಾವಾಗ ಜಾರಿಗೆ ತರಲಾಗುವುದು ? (ವಿವರ ನೀಡುವುದು)

## ಪ್ರೇಮದ ಮೂಲಕ ಬಲವಂತದ ಮತಾಂತರ ಪ್ರಕರಣದ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೯೯ (೨೨೮೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಪ್ರೇಮದ ಮೂಲಕ ಧರ್ಮಾಂತರ ಆರೋಪಗಳು (ಲವ್ ಜಿಹಾದ್) ಸಂಬಂಧಿತವಾಗಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ; ಜಿಲ್ಲಾವಾರು ವಿವರ ಹಾಗೂ ಪ್ರಕರಣಗಳ ಪ್ರಸ್ತುತ ಸ್ಥಿತಿ (ಮೇಲ್ವಿಚಾರಣೆ ಹಂತ, ಶಿಕ್ಷೆ ಹಾಗೂ ಖುಲಾಸೆ) ಕುರಿತು ಸಂಪೂರ್ಣ ಮಾಹಿತಿ ನೀಡುವುದು ;

(ಆ) ಇಂತಹ ಪ್ರಕರಣಗಳಲ್ಲಿ ಬಲವಂತದ ಮತಾಂತರ ಮರುಳುಗೊಳಿಸಿ ವಿವಾಹ, ಅಪ್ರಾಪ್ತೆಯರ ಸಂಪರ್ಕ ಮೊದಲಾದ ಅಂಶಗಳು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ, ಇವುಗಳನ್ನು ತಡೆಯಲು ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಅನಧಿಕೃತ ಅಥವಾ ಬಲವಂತದ ಮತಾಂತರ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಜಾರಿಗೊಂಡಿರುವ Karnataka Protection of Right to Freedom of Religion Act, ೨೦೨೨ ಅಡಿಯಲ್ಲಿ ಇದುವರೆಗೆ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ಅದರಲ್ಲಿ ಎಷ್ಟು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಸಾಮಾಜಿಕ ಜಾಲತಾಣಗಳ ಮೂಲಕ ಯುವತಿಯರನ್ನು ಗುರಿಯಾಗಿಸಿಕೊಂಡು ಪ್ರಲೋಭನೆ, ಬೆದರಿಕೆ ಅಥವಾ ಮರುಳು ಮಾಡುವ ಸಂಘಟಿತ ಜಾಲಗಳು ಕಾರ್ಯನಿರ್ವಹಿಸುತ್ತಿವೆ ಎಂಬ ವರದಿಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಇಂತಹ ಜಾಲಗಳನ್ನು ಪತ್ತೆಹಚ್ಚಲು ವಿಶೇಷ ದಳ ರಚಿಸುವ ಕುರಿತು ಸರ್ಕಾರದ ಯೋಜನೆ ಇದೆಯೇ ?

# KAT ಯಲ್ಲಿ ಹಲವಾರು ವರ್ಷಗಳಿಂದ ಬಾಕಿ ಇರುವ ಪ್ರಕರಣಗಳ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೧೯೦೦ (೨೨೬೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) KAT ಯಲ್ಲಿ ಕಳೆದ ಹಲವಾರು ವರ್ಷಗಳಿಂದ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; (ವರ್ಷವಾರು ಮಾಹಿತಿ ಒದಗಿಸುವುದು)

(ಆ) ಸದರಿ ಪ್ರಕರಣದಲ್ಲಿ ವಿವಿಧ ಹಂತದ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳ ತಪ್ಪಿನಿಂದ ಪ್ರಕರಣಗಳ ಸಂಖ್ಯೆ ಈ ಪ್ರಮಾಣಕ್ಕೆ ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ತಪ್ಪು ನಿರ್ಧಾರಗಳನ್ನು ಕೈಗೊಂಡ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಸದರಿ ಪ್ರಮಾಣದಲ್ಲಿ ಪ್ರಕರಣಗಳ ಸಂಖ್ಯೆ ಹಿಗ್ಗುತ್ತಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ರೀತಿ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ ; (ವಿವರ ಒದಗಿಸುವುದು)

(ಈ) KAT ಯಿಂದ ವಕೀಲರನ್ನು ಹೊರಗಿರಿಸಿ ಕೇವಲ ಅರ್ಜಿದಾರರಿಂದ ಪ್ರಕರಣದ ವಿವರಣೆಯನ್ನು ಪಡೆಯುವಂತೆ ಸೂಕ್ತ ವ್ಯವಸ್ಥೆ ನಿರ್ಮಿಸಲು ಸರ್ಕಾರದ ಮುಂದಿರುವ ತೊಡಕುಗಳೇನು ; ಸರ್ಕಾರಿ ನೌಕರರಿಗೆ ಮತ್ತು ಅಧಿಕಾರಿಗಳಿಗೆ ಸೇವಾ ನಿಯಮಗಳ ಕುರಿತು ಕಾಲಕಾಲಕ್ಕೆ ಇಲ್ಲಿಯವರೆಗೆ ಕಾರ್ಯನಿರ್ವಹಿಸಿರುವ KAT ಸದಸ್ಯೆ ಅಧಿಕಾರಿಯಿಂದ

ಶಿಬಿರಗಳನ್ನು ಆಯೋಜಿಸಿ ಅಗತ್ಯ ಮಾಹಿತಿಗಳನ್ನು ಕಾಲಕಾಲಕ್ಕೆ ಒದಗಿಸುವಂತೆ ಅಗತ್ಯ ಮಾರ್ಪಾಡುಗಳನ್ನು ಸರ್ಕಾರಿ ವ್ಯವಸ್ಥೆಯಲ್ಲಿ ರೂಪಿಸಲು ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ ;

(ಉ) ಮೇಲಿನ ಪ್ರಕರಣಗಳಲ್ಲಿ ಸರ್ಕಾರಿ ನೌಕರರ ಸಂಘ, ವಿವಿಧ ಸರ್ಕಾರಿ ಅಧಿಕಾರಿಗಳ ಸಂಘಗಳು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವುದಕ್ಕೆ ಅಗತ್ಯ ನಿಯಮಾವಳಿಗಳನ್ನು ಕಾನೂನು ಇಲಾಖೆ ರಚಿಸುವುದೇ ?

## ರಾಜ್ಯದಲ್ಲಿರುವ ಜೈಲುಗಳ ಸುಧಾರಣೆ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೧೯೦೧ (೨೨೭೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜೈಲುಗಳ ಸುಧಾರಣೆ ಕುರಿತಂತೆ ಸರ್ಕಾರ ಇಲ್ಲಿಯವರೆಗೆ ಯಾವ ವರದಿಗಳನ್ನು ಯಾವಾಗ ಪಡೆಯಲಾಗಿದೆ ; (ಈ ಕುರಿತು ಪ್ರಮುಖ ಅಂಶಗಳು ಅಥವಾ ವರದಿಗಳ ಪ್ರತಿಗಳನ್ನು ಒದಗಿಸುವುದು)

(ಆ) ಜೈಲುಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್‌ಗಳ ವಿಚಾರಣಾಧೀನ ಖೈದಿಗಳಿಗೆ ಪ್ರತ್ಯೇಕ ಜೈಲುಗಳನ್ನು ಸ್ಥಾಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ ;

(ಇ) ೩ ಕ್ರಿಮಿನಲ್ ಅಧಿಕಾರಿಗಳಿಗೆ ಪ್ರತ್ಯೇಕ ಜೈಲು ಸ್ಥಾಪಿಸುವುದರ ಅಗತ್ಯ ಸರ್ಕಾರಕ್ಕೆ ತಿಳಿದು ಬಂದಿದೆಯೇ ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರದ ಕ್ರಮ ಮತ್ತು ಯೋಜನೆಗಳೇನು ;

(ಈ) ಪ್ರಸ್ತುತ ಜೈಲಿನ ವ್ಯವಸ್ಥೆಯನ್ನು ಎಲ್ಲಾ ರೀತಿಯ ಆರೋಪಿಗಳು ಮತ್ತು ಅಪರಾಧಿಗಳು ಒಟ್ಟಿಗೆ ಇರುವುದರಿಂದ ಬಿಡುಗಡೆಗೊಂಡವರು ಸಮಾಜದೊಂದಿಗೆ Negative ಆಗಿ

ಪ್ರಭಾವಿತರಾಗಿ ಸಮಾಜದ ಮೇಲೆ ದುಷ್ಪರಿಣಾಮಗಳು ಉಂಟಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ದಾಖಲಾಗಿರುವ ಪ್ರಕರಣಗಳ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೧೯೦೨ (೨೨೭೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ತರಹದ ನ್ಯಾಯಾಲಯಗಳಲ್ಲಿ ಸರ್ಕಾರದ ಪರ ಮತ್ತು ವಿರುದ್ಧ ದಾಖಲಾಗಿರುವ ಪ್ರಕರಣಗಳು ಎಷ್ಟು ; (ವಿವರ ಒದಗಿಸುವುದು)

(ಆ) ಸರ್ಕಾರದ ಪರ ಮತ್ತು ವಿರುದ್ಧ ದಾಖಲಾಗಿರುವ ಪ್ರಕರಣಗಳು ಅತಿ ಗರಿಷ್ಠ ಸಮಯ ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ರೀತಿಯು ಪ್ರಕರಣಗಳನ್ನು ಅನುಭವಿ ಸರ್ಕಾರದ ಅಧಿಕಾರಿಗಳನ್ನು ನೇಮಿಸಿ ಪ್ರಕರಣಗಳನ್ನು ನ್ಯಾಯಾಲಯದಿಂದ ಹೊರಗೆ ಕಾಲಮಿತಿಯಲ್ಲಿ ಇತ್ಯರ್ಥ ಪಡಿಸಲು Onetime ವ್ಯವಸ್ಥೆಯನ್ನು ರೂಪಿಸಲು ಸರ್ಕಾರಕ್ಕೆ ಇರುವ ತೊಡಕುಗಳೇನು ; (ಮಾಹಿತಿ ಒದಗಿಸುವುದು)

(ಈ) ಪ್ರಕರಣಗಳ ಪರ ಮತ್ತು ವಿರುದ್ಧ ಅಭಿಯೋಜಕರು ಮತ್ತು ವಕೀಲರುಗಳ ಹೊಂದಾಣಿಕೆಯಿಂದ ಶಾಮೀಲಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ತಪ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

## ಸ್ತ್ರೀ ಶಕ್ತಿ ಸ್ವ–ಸಹಾಯ ಗುಂಪುಗಳ ಸಾಲದ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೦೩ (೨೨೧೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನಲ್ಲಿ ರಾಜ್ಯದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಎಷ್ಟು ಸ್ತ್ರೀ ಶಕ್ತಿ ಸ್ವ–ಸಹಾಯ ಗುಂಪುಗಳು ಸಾಲ ಪಡೆದಿವೆ ; ಪಡೆದಿರುವ ಸಾಲದ ಮೊತ್ತ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಇದರಲ್ಲಿ ಎಷ್ಟು ಅಲ್ಪಸಂಖ್ಯಾತ ಸ್ತ್ರೀ ಶಕ್ತಿ ಸ್ವ–ಸಹಾಯ ಗುಂಪುಗಳು ಸಾಲ ಪಡೆದಿವೆ; ಪಡೆದಿರುವ ಸಾಲದ ಮೊತ್ತ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ೨೦೨೫ರ ಡಿಸೆಂಬರ್ ಅಂತ್ಯಕ್ಕೆ ವಸೂಲಾಗಿರುವ ಸಾಲ ಮತ್ತು ಬಡ್ಡಿ ಮೊತ್ತ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಸ್ತ್ರೀ ಶಕ್ತಿ ಸ್ವ –ಸಹಾಯ ಗುಂಪುಗಳು ಪಡೆದಿರುವ ಎಲ್ಲಾ ರೀತಿಯ ಸಾಲವನ್ನು ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಈ ಕುರಿತು ಸರ್ಕಾರದ ನಿಲುವೇನು ?

## ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರದ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೦೪ (೨೨೧೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು ;

(ಆ) ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರವು ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ ;

(ಇ) ಸರ್ಕಾರವು ಸಹಕಾರ ಸಂಘಗಳ ಮೂಲಕ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿಯನ್ನು ನೀಡುತ್ತಿದೆಯೇ ; (ಸಂಪೂರ್ಣ ವಿವರ ಒದಗಿಸುವುದು) ಇಲ್ಲದಿದ್ದಲ್ಲಿ, ಭವಿಷ್ಯದಲ್ಲಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಕೌಶಲ್ಯ ಅಭಿವೃದ್ಧಿಯನ್ನು ಪರಿಗಣಿಸಿ ಸರ್ಕಾರವು ಕ್ರಮ ಕೈಗೊಳ್ಳುವುದೇ ?

## ಕಲ್ಯಾಣ ಕರ್ನಾಟಕ ವೃಂದದ ವೈರ್‌ಲೆಸ್ ಘಟಕದ ಪೊಲೀಸ್ ಸಿಬ್ಬಂದಿಗಳ ಮುಂಬಡ್ತಿ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೦೫ (೨೨೦೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೩೭೧ (ಜೆ) ಅಧಿನಿಯಮ–೨೦೧೪ರ ಪ್ರಕಾರ ೨೦೧೪ನೇ ಜನವರಿ–೨೦೨೬ನೇ ಸಾಲಿನ ಅಂತ್ಯಕ್ಕೆ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವೈರ್‌ಲೆಸ್ ಘಟಕದ ಕಲ್ಯಾಣ ಕರ್ನಾಟಕ ಮೀಸಲಾತಿಯ ಪಿಸಿ ಹುದ್ದೆಯಿಂದ ಡಿಎಸ್‌ಪಿ ಹುದ್ದೆಯವರೆಗೆ ಮಂಜೂರಾತಿ ಬಲ ಮತ್ತು ಖಾಲಿ ಹುದ್ದೆಗಳೆಷ್ಟು ;

(ಆ) ೩೭೧ (ಜೆ) ಅಧಿನಿಯಮ–೨೦೧೪ರ ಪ್ರಕಾರ ೨೦೧೪ನೇ ಸಾಲಿನಿಂದ ಜನವರಿ–೨೦೨೬ನೇ ಸಾಲಿನ ಅಂತ್ಯಕ್ಕೆ ವೈರ್‌ಲೆಸ್ ಘಟಕದ ಕಲ್ಯಾಣ ಕರ್ನಾಟಕ ಮೀಸಲಾತಿಯ ಪಿಸಿ ಹುದ್ದೆಯಿಂದ ಡಿಎಸ್‌ಪಿ ಹುದ್ದೆಯುವರೆಗೆ ನಿವೃತ್ತಿ ಹಾಗೂ ಮುಂಬಡ್ತಿ ಹೊಂದಿದವರು ಎಷ್ಟು ; (ಹೆಸರು, ಹುದ್ದೆ ಹಾಗೂ ದಿನಾಂಕವನ್ನು ನೀಡುವುದು)

(ಇ) ಪ್ರಸ್ತುತ ವೈರ್‌ಲೆಸ್ ಘಟಕದ ಕಲ್ಯಾಣ ಕರ್ನಾಟಕ ಮೀಸಲಾತಿ ಹಾಗೂ ರಾಜ್ಯ ಉಳಿಕೆ ವೃಂದದಲ್ಲಿ ಎಷ್ಟು ಜನ ಹೆಚ್.ಸಿ ಹುದ್ದೆಯಿಂದ ಎ.ಎಸ್.ಐ ಹುದ್ದೆಗೆ ಮುಂಬಡ್ತಿಗೆ ಅರ್ಹರಿದ್ದಾರೆ ಹಾಗೂ ಅರ್ಹರಿಗೆ ಮುಂಬಡ್ತಿ ನೀಡದಿರಲು ಕಾರಣವೇನು ;

(ಈ) ವೈರ್‌ಲೆಸ್ ಘಟಕದ ಕಲ್ಯಾಣ ಕರ್ನಾಟಕ ಮೀಸಲಾತಿಯ ನೌಕರರಿಗೆ ಮುಂಬಡ್ತಿಯಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರದಿಂದ ಯಾವ ಕ್ರಮವಹಿಸಲಾಗಿದೆ ?

## ಕರ್ನಾಟಕ ರಾಜ್ಯ ವೈರ್‌ಲೆಸ್ ಘಟಕದಲ್ಲಿನ ಪೊಲೀಸ್ ಸಿಬ್ಬಂದಿಗಳ ವರ್ಗಾವಣೆ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೦೬ (೨೨೦೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಪೊಲೀಸ್ ವೈರ್‌ಲೆಸ್ ಘಟಕದಲ್ಲಿನ ಅಧಿಕಾರಿ/ ಸಿಬ್ಬಂದಿಗಳಿಗೆ ಸಾರ್ವತ್ರಿಕ ವರ್ಗಾವಣೆ ೨೦೧೭ನೇ ಸಾಲಿನಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮವಹಿಸಲಾಗಿದೆ ;

(ಆ) ರಾಜ್ಯ ವೈರ್‌ಲೆಸ್ ಘಟಕದಲ್ಲಿ ಡಿವೈಎಸ್.ಪಿ/ಪಿ.ಐ/ಪಿ.ಎಸ್.ಐ/ ಎ.ಎಸ್.ಐ/ಹೆಚ್.ಸಿ/ಪಿ.ಸಿ ಹುದ್ದೆಯಲ್ಲಿ ಒಂದೇ ಸ್ಥಳದಲ್ಲಿ ೧೦ ವರ್ಷಗಳಿಗೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ;

(ಇ) ೨೦೨೫-೨೬ನೇ ಸಾಲಿನಲ್ಲಿ ರಾಜ್ಯ ಪೊಲೀಸ್ ವೈರ್‌ಲೆಸ್ ಘಟಕದಲ್ಲಿ ಸಾರ್ವತ್ರಿಕ ವರ್ಗಾವಣೆ ಕೋರಿ ಎಷ್ಟು ಮನವಿ ಸಲ್ಲಿಕೆಯಾಗಿವೆ ; ಎಷ್ಟು ಜನರಿಗೆ ವರ್ಗಾವಣೆ ಮಾಡಲಾಗಿದೆ ;

(ಈ) ರಾಜ್ಯ ಪೊಲೀಸ್ ವೈರ್‌ಲೆಸ್ ಘಟಕದಲ್ಲಿ ನಿಯೋಜನೆ/ಅನ್ಯ ಕರ್ತವ್ಯದ ಮೇಲೆ ಎಷ್ಟು ಜನ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ?

## ಸಿಂಧನೂರು ತಾಲ್ಲೂಕನ್ನು ನೂತನ 'ಜಿಲ್ಲಾ ಕೇಂದ್ರ'ವನ್ನಾಗಿ ಘೋಷಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೯೦೭ (೨೨೦೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸುಮಾರು ೫ ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಮುಂದುವರೆಯುತ್ತಿದ್ದು, ರಾಯಚೂರು ಜಿಲ್ಲಾ ಕೇಂದ್ರದಿಂದ ಸುಮಾರು ೯೧ ಕಿ.ಮೀ ದೂರದಲ್ಲಿದ್ದು, ಜನರು ಜಿಲ್ಲಾ ಕೇಂದ್ರಕ್ಕೆ ಅಲೆದಾಡುವುದು ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ತುರವಿಹಾಳ (ಪ್ರಸ್ತಾಪಿತ ನೂತನ ತಾಲ್ಲೂಕು), ಮಸ್ಕಿ, ಸಿರಗುಪ್ಪ, ಕಾರಟಗಿ ತಾಲ್ಲೂಕುಗಳು ಸಿಂಧನೂರು ತಾಲ್ಲೂಕು ಕೇಂದ್ರದಿಂದ ಕೇವಲ ೫೦ ಕಿ.ಮೀ ಗಿಂತಲೂ ಕಡಿಮೆ ದೂರದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಸಿಂಧನೂರು ತಾಲ್ಲೂಕು ಕೇಂದ್ರವನ್ನು ನೂತನ ಜಿಲ್ಲಾ ಕೇಂದ್ರವನ್ನಾಗಿ ಮಾಡುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ ;

(ಈ) ಯಾವ ಕಾಲಮಿತಿಯೊಳಗೆ ತುರವಿಹಾಳ (ಪ್ರಸ್ತಾಪಿತ ನೂತನ ತಾಲ್ಲೂಕು), ಮಸ್ಕಿ, ಸಿರಗುಪ್ಪ, ಕಾರಟಗಿ ತಾಲ್ಲೂಕುಗಳು ಒಳಗೊಂಡಂತೆ ಸಿಂಧನೂರು ತಾಲ್ಲೂಕನ್ನು ನೂತನ ಜಿಲ್ಲಾ ಕೇಂದ್ರವನ್ನಾಗಿ ಘೋಷಣೆ ಮಾಡಲಾಗುವುದು ?

## ಸಿಂಧನೂರು ತಾಲ್ಲೂಕಿನ ನ್ಯಾಯಾಲಯಕ್ಕೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೦೮ (೨೨೦೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನ ನ್ಯಾಯಾಲಯದಲ್ಲಿ ೦೫ ಕೋರ್ಟ್ ಬೆಂಚುಗಳು ಕಾರ್ಯನಿರ್ವಹಿಸುತ್ತಿದ್ದು, ಅಗತ್ಯ ಕೋರ್ಟ್ ಹಾಲ್‌ಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒಟ್ಟು ಐದು ನ್ಯಾಯಾಧೀಶರು ಕರ್ತವ್ಯ ನಿರ್ವಹಿಸುತ್ತಿದ್ದು, ಕೇವಲ ೦೨ ವಸತಿ ಗೃಹಗಳು ಮಾತ್ರ ಇರುವುದು ಸರ್ಕಾರದ ಗಮನದಲ್ಲಿದೆಯೇ ;

(ಇ) ನ್ಯಾಯಾಲಯದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದಿಂದ ಈ ಸಂಬಂಧ ಯಾವ ಕ್ರಮ ವಹಿಸಲಾಗಿದೆ ; (ತಿಳಿಸುವುದು)

(ಈ) ಯಾವ ಕಾಲಮಿತಿಯೊಳಗೆ ಸದರಿ ನ್ಯಾಯಾಲಯದಲ್ಲಿ ಅಗತ್ಯ ಕೋರ್ಟ್ ಹಾಲ್‌ಗಳ ನಿರ್ಮಾಣ, ಎಲ್ಲಾ ನ್ಯಾಯಾಧೀಶರುಗಳಿಗೆ ಅಗತ್ಯ ವಸತಿ ಗೃಹಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಸರ್ಕಾರದಿಂದ ಕಲ್ಪಿಸಲಾಗುವುದು ?

## ಸಿಂಧನೂರು ತಾಲ್ಲೂಕಿನ 'PAC' ಗಳಿಂದ ನೀಡಲಾಗುವ ಸಾಲದ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೦೯ (೨೩೦೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಎಷ್ಟು ;

(ಆ) ಕಳೆದ ೩ ವರ್ಷದಿಂದ ಎಷ್ಟು PACಗಳು ಲಾಭದಲ್ಲಿವೆ ಹಾಗೂ ಎಷ್ಟು PACಗಳು ನಷ್ಟದಲ್ಲಿವೆ ;

(ಇ) ರೈತರಿಗೆ ೨೦೨೫–೨೬ರಲ್ಲಿ ನೀಡಲಾಗಿರುವ ಬೆಳೆ ಸಾಲದ ಮೊತ್ತ ಎಷ್ಟು ;

(ಈ) ಶೂನ್ಯ ಬಡ್ಡಿದರ/ಸಬ್ಸಿಡಿ ಸಾಲ ಯೋಜನೆಯ ಪ್ರಯೋಜನ ಪಡೆದ ರೈತರ ಸಂಖ್ಯೆ ಎಷ್ಟು ?

## ರಾಜ್ಯದಲ್ಲಿ ಖಾಲಿಯಿರುವ ಸರ್ಕಾರಿ ನೌಕರರ ಹುದ್ದೆಗಳ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ ) :–**

೧೯೧೦ (೨೨೨೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಂಜೂರಾಗಿರುವ ಒಟ್ಟು ಸರ್ಕಾರಿ ನೌಕರರ ಹುದ್ದೆಗಳ ಸಂಖ್ಯೆ ಎಷ್ಟು ; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು : ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; (ಇಲಾಖಾವಾರು ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ನಿವೃತ್ತರಾದ ನೌಕರರ ಸಂಖ್ಯೆ ಎಷ್ಟು ; (ವರ್ಷವಾರು ಇಲಾಖಾವಾರು ವಿವರ ನೀಡುವುದು)

(ಇ) ಲಕ್ಷಾಂತರ ಹುದ್ದೆಗಳು ಖಾಲಿಯಿದ್ದರೂ ಸಹ ನೇಮಕಾತಿ ಮಾಡಿಕೊಳ್ಳದೆ ಇರಲು ಕಾರಣಗಳೇನು ; ಯಾವ ಕಾಲಮಿತಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿಮಾಡಲಾಗುವುದು ;

(ಈ) ಸರ್ಕಾರಿ ನೌಕರರಿಗೆ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಲು ಇರುವ ಮಾರ್ಗಸೂಚಿಗಳು ಏನು ; ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ವಾರ್ಷಿಕ ಜ್ಯೇಷ್ಠತಾ ಪಟ್ಟಿ ಪ್ರಕಟಿಸಿರುವ ಇಲಾಖೆಗಳು ಯಾವುವು ; ಜ್ಯೇಷ್ಠತಾ ಪಟ್ಟಿ ಪ್ರಕಟಿಸದ ಇಲಾಖೆಗಳು ಯಾವುವು ; (ಇಲಾಖಾವಾರು ಸಂಪೂರ್ಣ ವಿವರ ನೀಡುವುದು)

(ಉ) ಕಳೆದ ಮೂರು ವರ್ಷಗಳಿಂದ ಬಡ್ತಿಗಾಗಿ ಹುದ್ದೆಗಳು ಖಾಲಿಯಿದ್ದರೂ ಬಡ್ತಿ ನೀಡದೆ ಇರುವ ಇಲಾಖೆಗಳು ಯಾವುವು ; (ಇಲಾಖಾವಾರು ಹುದ್ದೆವಾರು ಸಂಪೂರ್ಣ ವಿವರ ನೀಡುವುದು)

(ಊ) ಪ್ರತಿವರ್ಷ ಜ್ಯೇಷ್ಠತಾ ಪಟ್ಟಿ ಪ್ರಕಟಿಸದೆ ಬಡ್ತಿ ನೀಡದೆ ನಿರ್ಲಕ್ಷ್ಯವಹಿಸುವ ಇಲಾಖಾ ಮುಖ್ಯಸ್ಥರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು ; ಕ್ರಮ ಕೈಗೊಳ್ಳದೆ ಇದ್ದರೆ ಕೈಗೊಳ್ಳದಿರಲು ಕಾರಣಗಳೇನು ;

(ಋ) ಜ್ಯೇಷ್ಠತಾ ಪಟ್ಟಿ ಪ್ರಕಟಣೆ ಮತ್ತು ಬಡ್ತಿ ನೀಡುವಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪಾತ್ರವೇನು ?

## ಬಿ.ಡಿ.ಎ ವತಿಯಿಂದ ಅಭಿವೃದ್ಧಿ ಶುಲ್ಕ ವಿಧಿಸುತ್ತಿರುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೧೯೧೧ (೨೨೨೧) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ದಿನಾಂಕ:೨೨.೦೨.೨೦೨೬ ರಂದು ಅಭಿವೃದ್ಧಿ ಶುಲ್ಕ ಮೌಲ್ಯವರ್ಧಿತ ಸಕ್ರಮ ಆಸ್ತಿ ಹೊಂದುವ ಅವಕಾಶ ಎಂದು ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿ ಯಾವ

ಬಡಾವಣೆಗಳಿಗೆ ಅಭಿವೃದ್ಧಿ ಶುಲ್ಕ ಪಾವತಿಸಲು ತಿಳಿಸಿದೆ ; ಎಲ್ಲಾ ಬಡಾವಣೆಗಳು ಪ್ರಾರಂಭಕ್ಕೆ ಅಧಿಸೂಚನೆ ಹೊರಡಿಸಿದ ದಿನಾಂಕ ಮತ್ತು ಬಡಾವಣೆಗಳು ಪೂರ್ಣಗೊಂಡ ದಿನಾಂಕದ ಸಂಪೂರ್ಣ ವಿವರ ನೀಡುವುದು ;

(ಆ) ಪ್ರಾರಂಭಿಕ ಅಧಿಸೂಚನೆಯಲ್ಲಿದ್ದು ನಂತರ ಯಾವ ಕಾರಣಗಳಿಗಾಗಿ ಸದರಿ ಸ್ವತ್ತಿನ ಭೂ ಸ್ವಾಧೀನವನ್ನು ಕೈಬಿಡಲಾಗಿರುತ್ತದೆ ;

(ಇ) ಅಭಿವೃದ್ಧಿ ಶುಲ್ಕವನ್ನು ಯಾವ ಉದ್ದೇಶಕ್ಕಾಗಿ ವಿಧಿಸಲಾಗುತ್ತದೆ ; ಬಡಾವಣೆ ಪ್ರಾರಂಭವಾದ ಅಥವಾ ಮುಕ್ತಾಯವಾದ ಎಷ್ಟು ದಿನಗಳಲ್ಲಿ/ತಿಂಗಳಲ್ಲಿ ವಿಧಿಸಬೇಕಾಗಿರುತ್ತದೆ ;

(ಈ) ಬಡಾವಣೆಗಳು ಪೂರ್ಣಗೊಂಡು ನಿವೇಶನಗಳು ಹಂಚಿಕೆಯಾಗಿ ದಶಕಗಳೇ ಕಳೆದ ನಂತರ ಈಗ ಅಭಿವೃದ್ಧಿ ಶುಲ್ಕ ವಿಧಿಸಲು ಕಾರಣಗಳೇನು ; ಇಲ್ಲಿಯವರೆಗೂ ಅಭಿವೃದ್ಧಿ ಶುಲ್ಕ ವಿಧಿಸದೆ ಇರಲು ಕಾರಣವೇನು ;

(ಉ) ಅಭಿವೃದ್ಧಿ ಶುಲ್ಕ ವಿಧಿಸುವಲ್ಲಿ ಕೆಲವೊಂದು ಬಡಾವಣೆಯಲ್ಲಿ ಅತೀ ಕಡಿಮೆ ವಿಧಿಸಿ ಕೆಲವೊಂದು ಬಡಾವಣೆಗೆ ಹೆಚ್ಚಾಗಿ ವಿಧಿಸಲು ಕಾರಣಗಳೇನು ?

## ಡಾ॥ ಕೆ. ಶಿವರಾಮ ಕಾರಂತ ಬಡಾವಣೆಯಲ್ಲಿ ರೈತರಿಗೆ ಅಭಿವೃದ್ಧಿ ಶುಲ್ಕ ವಿಧಿಸಿರುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೧೯೧೨ (೨೨೨೨) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡಾ॥ ಕೆ. ಶಿವರಾಮ ಕಾರಂತ ಬಡಾವಣೆಯ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ನೀಡುವುದು ;

(ಆ) ಬಿ.ಡಿ.ಎ ಭೂ ಸ್ವಾಧೀನಕ್ಕೆ ಪೂರ್ವದಲ್ಲಿ ರೈತರು ತಮ್ಮ ಜಮೀನಿನಲ್ಲಿ ನಿರ್ಮಿಸಿರುವ ಮನೆಗಳ ವಿಸ್ತೀರ್ಣವನ್ನು ಅವರಿಗೆ ಕೊಡುವ ಶೇ.೪೦ ರ ಪರಿಹಾರದಲ್ಲಿ ಕಳೆಯಲಾಗುವುದೇ ಇಲ್ಲದೆ ಇದ್ದರೆ ಇದನ್ನು ಯಾವ ರೀತಿಯಲ್ಲಿ ಲೆಕ್ಕ ಮಾಡಲಾಗುವುದು ;

(ಇ) ರೈತರು ತಮ್ಮ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡಗಳಿಗೂ ಅಭಿವೃದ್ಧಿ ಶುಲ್ಕ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದು ರೈತರಿಗೆ ಮಾಡುವ ಅನ್ಯಾಯವಲ್ಲವೇ ; ರೈತರಿಗೆ ಅಭಿವೃದ್ಧಿ ಪಡಿಸಿದ ನಿವೇಶನದಲ್ಲಿ ಶೇ.೪೦ ರ ಪರಿಹಾರ ನೀಡುವುದರಲ್ಲಿ ಸದರಿ ನಿವೇಶನ ಅಳತೆಯುನ್ನು ಪರಿಗಣಿಸುವುದಾದರೆ ಅಭಿವೃದ್ಧಿ ಶುಲ್ಕದಿಂದ ರೈತರಿಗೆ ಅನ್ಯಾಯವಾಗಲಿದ್ದು ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು ;

(ಈ) ರೈತರ ಜಮೀನು. ಮನೆಯ ಪಕ್ಕದಲ್ಲಿ ಉಳಿಯುವ ಶೇ.೪೦ ಕ್ಕೂ ಹೆಚ್ಚು ವಿಸ್ತೀರ್ಣದಲ್ಲಿ ಬರುವ ಜಾಗವನ್ನು ರೈತರಿಗೆ ಸದರಿ ಜಾಗವನ್ನು ಬಿಡುವಾಗ ಅವರಿಗೆ ಎಷ್ಟು ದರ ವಿಧಿಸಲಾಗುವುದು ?

## ಬಿ.ಡಿ.ಎ ಬಡಾವಣೆ ವ್ಯಾಪ್ತಿಯಲ್ಲಿ ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೧೯೧೩ (೨೨೨೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣವಾಗಿರುವ ಬಡಾವಣೆ ವ್ಯಾಪ್ತಿಯಲ್ಲಿ ಬಡಾವಣೆ ನಿರ್ಮಾಣಕ್ಕೂ ಮುನ್ನ ಬಡಾವಣೆ ನಿರ್ಮಾಣದ ನಂತರ ಅಧಿಸೂಚನೆಯಿಂದ ಹೊರಗುಳಿದ ಭೂಮಿಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಉದ್ದೇಶಕ್ಕೆ ಬಳಕೆ ಮಾಡಲು ಇರುವ ನಿಬಂಧನೆಗಳು ಯಾವುವು ;

(ಆ) ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ–೧, ಅಂಜನಾಪುರ ಗ್ರಾಮದ ಸರ್ವೆ ನಂ ೪೯, ೮೨ ಮತ್ತು ೮೬ ಬಿಡಿಎ ಭೂ ಸ್ವಾಧೀನದಿಂದ ಕೈಬಿಡಲಾಗಿದೆಯೇ ; ಕೈಬಿಡಲಾಗಿದ್ದರೆ, ಸದರಿ ಭೂಮಿಯು ಯಾವ ವಲಯದಲ್ಲಿದೆ ; ಸದರಿ ಭೂಮಿಯನ್ನು ಯಾವ ಉದ್ದೇಶಕ್ಕೆ ಉಪಯೋಗಿಸಲಾಗುತ್ತಿದೆ ;

(ಇ) ವಸತಿ ಪ್ರದೇಶದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ವಾಣಿಜ್ಯ ಚಟುವಟಿಕೆ ನಡೆಸಲು ಅವಕಾಶವಿದೆಯೇ ; ಇದ್ದರೆ ಯಾವ ನಿಯಮಗಳಡಿಯಲ್ಲಿ ಅವಕಾಶವಿದೆ ; (ನಿಯಮದ ಪ್ರತಿಯನ್ನು ನೀಡುವುದು)

(ಈ) ಸದರಿ ಸರ್ವೆ ನಂ ಗಳನ್ನು ವಾಣಿಜ್ಯ ಚಟುವಟಿಕೆ ಉಪಯೋಗಿಸಲು ಅನುಮತಿ ನೀಡಿದ್ದರೆ ಅನುಮತಿ ಪತ್ರದ ಪ್ರತಿಯನ್ನು ನೀಡುವುದು ;

(ಉ) ಸದರಿ ಸರ್ವೆ ನಂ ಮಾಲೀಕರು ವಾಣಿಜ್ಯ ಚಟುವಟಿಕೆ ನಡೆಸುತ್ತಿರುವುದಕ್ಕೆ ಸರ್ಕಾರಕ್ಕೆ ವಾರ್ಷಿಕವಾಗಿ ಪಾವತಿಸುತ್ತಿರುವ ತೆರಿಗೆ ಎಷ್ಟು ?

## ರಾಜ್ಯದ ರೈಲ್ವೆ ಯೋಜನೆಗಳಿಗೆ ಭೂ ಸ್ವಾಧೀನ ಹಾಗೂ ಬಾಕಿ ಯೋಜನೆಗಳ ಬಿಡುಗಡೆ ಮಾಡುವ ಕುರಿತು

**ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) :–**

೧೯೧೪ (೨೩೦೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ರೈಲ್ವೆ ಯೋಜನೆಗಳು ಯಾವುವು ; ಈ ಯೋಜನೆಗಳ ಒಟ್ಟು ಮೊತ್ತ ಎಷ್ಟು ; (ಯೋಜನೆವಾರು ವಿವರ ನೀಡುವುದು)

(ಆ) ಸದರಿ ಯೋಜನೆಗಳಿಗೆ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಪಾಲಿನ ಮೊತ್ತ ಎಷ್ಟು : ರಾಜ್ಯ ಸರ್ಕಾರದ ಪಾಲಿನ ಹಣವನ್ನು

ಬಿಡುಗಡೆ ಮಾಡಿದೆಯೇ ; ಯಾವಾಗ ಎಷ್ಟು ಹಣ ಬಿಡುಗಡೆ ಮಾಡಿದೆ ; (ಯೋಜನೆವಾರು ವಿವರ ನೀಡುವುದು)

(ಇ) ಪ್ರಗತಿಯಲ್ಲಿರುವ ಮತ್ತು ಉದ್ದೇಶಿತ ರೈಲ್ವೆ ಯೋಜನೆಗಳಿಗೆ ಅಗತ್ಯವಿರುವ ಭೂ ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ ; (ಯೋಜನೆವಾರು ವಿವರ ನೀಡುವುದು)

(ಈ) ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಯಾವ ಕಾಲಮಿತಿಯೊಳಗೆ ರೈಲ್ವೆ ಇಲಾಖೆಗೆ ಹಸ್ತಾಂತರ ಮಾಡಲಾಗುವುದು; ಭೂ ಸ್ವಾಧೀನಕ್ಕೆ ಅಗತ್ಯವಿರುವ ಹಣ ಎಷ್ಟು ;

(ಉ) ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ಯಾವಾಗ ಬಿಡುಗಡೆ ಮಾಡಲಿದೆ ?

## ರಾಜ್ಯ ಅಪೆಕ್ಸ್ ಬ್ಯಾಂಕ್‌ನ ವಿವಿಧ ನೇಮಕಾತಿಗಳಿಗೆ ಸಂಬಂಧಿಸಿದಂತೆ

**ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) :–**

೧೯೧೫ (೨೩೦೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಅಪೆಕ್ಸ್ ಬ್ಯಾಂಕ್‌ಗಳಲ್ಲಿನ ವಿವಿಧ ನೇಮಕಾತಿಗಳಿಗೆ ಸಂಬಂಧಿಸಿದಂತೆ ಅನೇಕ ವರ್ಷಗಳಿಂದ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಿವಿಧ ನೇಮಕಾತಿಗಳ ಪ್ರಸ್ತುತ ಪ್ರಗತಿಯೇನು ; (ಕಳೆದ ೩ ವರ್ಷಗಳ ವಿವರ ನೀಡುವುದು)

(ಇ) ಅಪೆಕ್ಸ್ ಬ್ಯಾಂಕ್‌ನ ಸಹಾಯಕ ಹುದ್ದೆಗಳಿಗೆ ೨೦೨೪ರಲ್ಲಿ ಅಧಿಸೂಚನೆ ಹೊರಡಿಸಿ. ಪರೀಕ್ಷೆ ನಡೆದು

೨೬.೧೦.೨೦೨೪ರಲ್ಲಿಯೇ ಕಿ ಆನ್ಸರ್ (Key answer) ಬಿಡುಗಡೆ ಮಾಡಲಾಗಿದ್ದರೂ ಇಲ್ಲಿಯವರೆಗೆ ನೇಮಕಾತಿ ಪೂರ್ಣಗೊಳಿಸದಿರಲು ಕಾರಣಗಳೇನು ;

(ಈ) ಸದರಿ ನೇಮಕಾತಿಯನ್ನು ಪೂರ್ಣಗೊಳಿಸಿ, ಅರ್ಹರಿಗೆ ಯಾವಾಗ ಉದ್ಯೋಗದ ಆದೇಶಗಳನ್ನು ನೀಡಲಾಗುವುದು ? (ವಿವರ ಒದಗಿಸುವುದು)

## ಬೆಂಗಳೂರು ಜಿಲ್ಲೆಯ ನಗರೋತ್ಥಾನ ಯೋಜನೆ ಕುರಿತು

**ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೧೬ (೨೨೧೮) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ನಗರೋತ್ಥಾನ ಯೋಜನೆಯ ಅನ್ವಯ, ನಗರಸಭೆ ಮತ್ತು ಪುರಸಭೆಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ನಗರಸಭೆ ಮತ್ತು ಪುರಸಭೆವಾರು ವಿವರ ನೀಡುವುದು)

(ಆ) ಕಳೆದ ೨ ವರ್ಷಗಳಲ್ಲಿ ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯ ಅನ್ವಯ ಎಷ್ಟು ಪೌರ ಕಾರ್ಮಿಕರಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ ? (ವಿವರ ನೀಡುವುದು)

## B.B.M.P (GBA) ಯಿಂದ ಸಂಗ್ರಹಿಸಿರುವ ಸೆಸ್ ಹಣವನ್ನು ಬಾಕಿ ಉಳಿಸಿಕೊಂಡಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೧೭ (೨೧೫೦) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೭ ರಿಂದ ೨೦೨೨ ರವರೆಗೂ ಬಿಬಿಎಂಪಿ ಯಿಂದ ಸಂಗ್ರಹಿಸಲಾಗಿರುವ ಆರೋಗ್ಯ ಉಪಕರ, ಗ್ರಂಥಾಲಯ ಉಪಕರ ಮತ್ತು ಭಿಕ್ಷಾಟನಾ ಉಪಕರಗಳ ಹಣವೆಷ್ಟು ; (ವರ್ಷವಾರು ವಿವರ ನೀಡುವುದು)

(ಆ) ಸಂಗ್ರಹಿಸಲಾಗಿರುವ ಸೆಸ್ ಹಣವನ್ನು ಸಂಬಂಧಪಟ್ಟ ಇಲಾಖೆಗಳಿಗೆ ವರ್ಗಾಯಿಸಲಾಗಿದೆಯೇ ; (ಇದರ ಪೂರ್ಣ ವಿವರ ಒದಗಿಸುವುದು)

(ಇ) ಈ ರೀತಿ ಸಂಗ್ರಹಿಸಲಾದ ಉಪಕರವನ್ನು ಯಾವ ಯಾವ ಕಾರ್ಯಗಳಿಗೆ ಎಷ್ಟೆಷ್ಟು ಮೊತ್ತವನ್ನು ಬಳಕೆ ಮಾಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಈ) ಬಿಬಿಎಂಪಿಯು ರೂ.೧,೨೭೫.೦೦ ಕೋಟಿ ಆರೋಗ್ಯ ಸೆಸ್ ರೂ.೨೫೬.೦೦ ಕೋಟಿ ಗ್ರಂಥಾಲಯ ಸೆಸ್ ಮತ್ತು ರೂ.೩೧.೪೮ ಕೋಟಿ ಭಿಕ್ಷಾಟನಾ ಉಪಕರವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಪಾವತಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಇದರ ಬಗ್ಗೆ ತೆಗೆದುಕೊಂಡ ಕ್ರಮವೇನು; ಹಾಗೂ ಇದು ಕೆಎಂಸಿ ಕಾಯ್ದೆಯ ನಿಬಂಧನೆಗಳ ಉಲ್ಲಂಘನೆಯಾಗುವುದಿಲ್ಲವೇ ?

## ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತರಿಗೆ ಪರಿಹಾರ ಬಾಕಿ ಇರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೧೮ (೨೧೫೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷದ ಅವಧಿಯಲ್ಲಿ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಕೊಲೆ (ಅಮಾಯಕ ವ್ಯಕ್ತಿ), ಆಸಿಡ್ ದಾಳಿ ಸೇರಿ ಕೆಲ ಗಂಭೀರ

ಅಪರಾಧ ಪ್ರಕರಣಗಳಲ್ಲಿ ಸಂತ್ರಸ್ತರು ಅಥವಾ ಅವರ ಕುಟುಂಬದ ಸದಸ್ಯರಿಗೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ನೀಡಲಾಗಿರುವ ಪರಿಹಾರ ಹಣದ ಮೊತ್ತವೆಷ್ಟು ;

(ಆ) ಕಳೆದ ೩ ವರ್ಷದಿಂದ ಇಲ್ಲಿಯುವರೆಗೂ ಪ್ರಾಧಿಕಾರಕ್ಕೆ ದಾಖಲಾಗಿರುವ ಎಲ್ಲಾ ಪ್ರಕರಣಗಳಿಗೂ ಪರಿಹಾರ ನೀಡಲಾಗಿದೆಯೇ ;

(ಇ) ಪ್ರತಿಯೊಂದು ಪ್ರಕರಣಗಳಿಗೆ ಸರ್ಕಾರ ನಿಗದಿಪಡಿಸಿರುವ ಪರಿಹಾರಧನದ ಮೊತ್ತವೆಷ್ಟು ; ರಾಜ್ಯದಲ್ಲಿ ಕಳೆದ ೩ ವರ್ಷದಿಂದ ಇಲ್ಲಿಯವರೆಗೂ ದೌರ್ಜನ್ಯಕ್ಕೊಳಗಾದ ಪ್ರಕರಣಗಳ ಸಂಖ್ಯೆ ಎಷ್ಟು; ಇದರಲ್ಲಿ ಇತ್ಯರ್ಥವಾದ ಪ್ರಕರಣಗಳ ಮತ್ತು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಈ) ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆಯಡಿಯಲ್ಲಿ ಯಾವ ಯಾವ ಪ್ರಕರಣಗಳಿಗೆ ಪರಿಹಾರ ನೀಡಲಾಗುವುದು ; ಕಳೆದ ೩ ವರ್ಷದಿಂದ ಪರಿಹಾರ ವಿತರಣೆಗಾಗಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು ;

(ಉ) ದೌರ್ಜನ್ಯಕ್ಕೊಳಗಾದವರಿಗೆ ನೀಡುವ ಸಂತ್ರಸ್ತ ಪರಿಹಾರ ಯೋಜನೆ ನೆನೆಗುದಿಗೆ ಬಿದ್ದಿದ್ದು. ರೂ. ೪೫ ಕೋಟಿ ಗೆ ಬೇಡಿಕೆ ಸಲ್ಲಿಸಿದರೆ, ಸರ್ಕಾರ ಕೇವಲ ರೂ. ೧೦ ಕೋಟಿ ಮಾತ್ರ ಬಿಡುಗಡೆ ಮಾಡಿರುವುದು ನಿಜವೇ ; ಹಾಗಿದ್ದಲ್ಲಿ, ಸತಂತ್ರಸ್ತರಿಗೆ ಪರಿಹಾರ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

## ಮಾಸ್ಟರ್ ಪ್ಲಾನ್ (Master Plan) ಸಿದ್ಧಪಡಿಸುವಾಗ ಅನುಸರಿಸಲಾಗುವ ಮಾನದಂಡಗಳ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೧೯ (೨೧೫೨) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರಾಭಿವೃದ್ಧಿ ಇಲಾಖೆಯಲ್ಲಿ ಮಾಸ್ಟರ್ ಪ್ಲಾನ್ (Master Plan) ಅನ್ನು ಎಷ್ಟು ವರ್ಷಗಳಿಗೊಮ್ಮೆ ಪರಿಷ್ಕರಣೆ (Revise) ಮಾಡುವ ನಿಯಮವಿದೆ ; ಇದರ ಪ್ರತಿಯನ್ನು ಒದಗಿಸುವುದು ;

(ಆ) ಮಾಸ್ಟರ್ ಪ್ಯಾನ್ ಸಿದ್ಧಪಡಿಸುವ ಸಂದರ್ಭದಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು ; ಹಾಗೂ ಮಾಸ್ಟರ್ ಪ್ಲಾನ್ ಸಿದ್ಧಪಡಿಸುವ ಸಂದರ್ಭದಲ್ಲಿ ಉಪಸ್ಥಿತರಿರುವ ಅಧಿಕಾರಿಗಳು ಯಾರ್ಯಾರು ;

(ಇ) ಕಳೆದ ೩ ವರ್ಷದಲ್ಲಿ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಮಾಸ್ಟರ್ ಪ್ಲಾನ್ ನಲ್ಲಿರುವಂತೆ ಎಷ್ಟು ಎಕರೆ ಪ್ರದೇಶವನ್ನು ಭೂ ಪರಿವರ್ತನೆ (Change of Land use) ಮಾಡಲಾಗಿದೆ ;

(ಈ) ಭೂ ಪರಿವರ್ತನೆ (Change of Land use) ಮಾಡುವಾಗ ಅನುಸರಿಸುವ ಮಾನದಂಡಗಳೇನು ; ಹಾಗೂ ಭೂ ಪರಿವರ್ತನೆ ಮಾಡುವ ಅಧಿಕಾರ ಯಾರಿಗೆ ನೀಡಲಾಗಿದೆ ?

## ಎತ್ತಿನಹೊಳೆ ಯೋಜನೆ ಪೂರ್ಣಗೊಳ್ಳದೆ ಇರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨೦ (೨೧೫೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಎತ್ತಿನಹೊಳೆ ಸಮಗ್ರ ನೀರಿನ ಯೋಜನೆ ಪ್ರಾರಂಭಗೊಂಡು ಎಷ್ಟು ವರ್ಷಗಳು ಕಳೆದಿದೆ ; ಈ ಯೋಜನೆಗೆ ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು; ಯೋಜನೆಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ ಎಷ್ಟು ;

(ಆ) ಸದರಿ ಕಾಮಗಾರಿಯನ್ನು ಎಷ್ಟು ಹಂತದಲ್ಲಿ ಕೈಗೆತ್ತಿಕೊಳ್ಳಲಾಗಿದೆ; ಇದರ ಗುತ್ತಿಗೆಯನ್ನು ಯಾವ ಯಾವ ಸಂಸ್ಥೆಗಳಿಗೆ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು) ಪ್ರತಿ ಗುತ್ತಿಗೆದಾರರಿಗೆ ಎಷ್ಟು ಕಾಮಗಾರಿಗಳನ್ನು ನೀಡಲಾಗಿದೆ ;

(ಇ) ಪ್ರಸ್ತುತ ಈ ಯೋಜನೆಯಿಂದ ಎಷ್ಟು ಜಿಲ್ಲೆಗಳಿಗೆ ನೀರನ್ನು ಒದಗಿಸಲಾಗಿದೆ ; ಇನ್ನು ಎಷ್ಟು ಜಿಲ್ಲೆಗಳು ಬಾಕಿ ಇವೆ ; ಎಷ್ಟು ಅನುದಾನದ ಅವಶ್ಯಕತೆ ಇದೆ ;

(ಈ) ಯೋಜನೆಗೆ ಬೇಕಾಗಿರುವ ಜಮೀನುಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ : ಅಥವಾ ಬಾಕಿ ಇದೆಯೇ ; ಭೂ ಮಾಲೀಕರಿಗೆ ಪರಿಹಾರ ಹಣವನ್ನು ನೀಡಲಾಗಿದೆಯೇ ; (ಪೂರ್ಣ ಮಾಹಿತಿ ನೀಡುವುದು)

(ಉ) ಎತ್ತಿನಹೊಳೆ ಸಮಗ್ರ ನೀರಿನ ಯೋಜನೆಗೆ ರೂ. ೧೫,೦೦೦ ಕೋಟಿ ವೆಚ್ಚ ಮಾಡಿದರೂ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಉದ್ದೇಶ ಈಡೇರಿರುವುದಿಲ್ಲವೆಂದು ಭಾರತ ಲೆಕ್ಕ ಪರಿಶೋಧಕರ ವರದಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದು, ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ?

## ರಾಜ್ಯದಲ್ಲಿ ಖಾಲಿ ಇರುವ ಹುದ್ದೆ ಹಾಗೂ ನಿರುದ್ಯೋಗ ಸಮಸ್ಯೆಯ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨೧ (೨೧೫೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಪ್ರಸ್ತುತ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಗ್ರೂಪ್–ಎ, ಬಿ, ಸಿ ಮತ್ತು ಡಿ ವರ್ಗದ ಹುದ್ದೆಗಳ ವಿವರ ನೀಡುವುದು ; (ಇಲಾಖಾವಾರು ಮಾಹಿತಿ ನೀಡುವುದು)

(ಆ) ಇತ್ತೀಚಿಗೆ ಧಾರವಾಡ ಮತ್ತು ಇತರೆಡೆಗಳಲ್ಲಿ ಸಾವಿರಾರು ನಿರುದ್ಯೋಗಿ ಯುವಕರು ಬೃಹತ್ ಮುಷ್ಕರ ನಡೆಸಿ, ಸರ್ಕಾರಿ

ಹುದ್ದೆಗಳ ಭರ್ತಿಗೆ ಆಗ್ರಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವರ ಬೇಡಿಕೆಗಳ ಕುರಿತು ಸರ್ಕಾರದ ನಿಲುವೇನು ;

(ಇ) ರಾಜ್ಯದಲ್ಲಿ ಒಟ್ಟು ೪ ಲಕ್ಷಕ್ಕೂ ಹೆಚ್ಚು ಹುದ್ದೆಗಳು (ನಿಗಮ-ಮಂಡಳಿ, ವಿಶ್ವವಿದ್ಯಾಲಯ ಸೇರಿ) ಖಾಲಿ ಇರುವುದು ನಿಜವೇ ; ಈ ಹುದ್ದೆಗಳನ್ನು ಭರ್ತಿ ಮಾಡಲು ಇರುವ ಆರ್ಥಿಕ ಅಡೆತಡೆಗಳೇನು ;

(ಈ) ಕಳೆದ ಮೂರು ವರ್ಷಗಳಲ್ಲಿ ಆರ್ಥಿಕ ಇಲಾಖೆಯು ಎಷ್ಟು ಹುದ್ದೆಗಳ ನೇಮಕಾತಿಗೆ ಅನುಮೋದನೆ ನೀಡಿದೆ ಮತ್ತು ಈವರೆಗೆ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ;

(ಉ) ಚುನಾವಣಾ ಪೂರ್ವದಲ್ಲಿ ಘೋಷಿಸಿದಂತೆ ಪ್ರತಿ ವರ್ಷ ೧ ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಭರವಸೆ ಈವರೆಗೆ ಈಡೇರದಿರಲು ಕಾರಣವೇನು ; ಮುಂಬರುವ ೨೦೨೬-೨೭ರ ಆಯವ್ಯಯದಲ್ಲಿ (Budget) ಹೊಸ ನೇಮಕಾತಿಗಳಿಗೆ ಎಷ್ಟು ಅನುದಾನ ಮೀಸಲಿಡಲು ಉದ್ದೇಶಿಸಲಾಗಿದೆ ?

## ಬೆಂಗಳೂರು ನಗರದ ಸಂಚಾರ ದಟ್ಟಣೆ ನಿಯಂತ್ರಣದ ಬಗ್ಗೆ

**ಡಾ॥ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೯೨೨ (೨೦೪೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಜನಸಂಖ್ಯೆ ಮತ್ತು ವಿವಿಧ ರೂಪದ ಖಾಸಗಿ ಹಾಗೂ ಸರ್ಕಾರಿ ವಾಹನಗಳ ಅಂದಾಜು ಸರ್ಕಾರಕ್ಕಿದೆಯೇ, ಹಾಗಿದ್ದಲ್ಲಿ ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಬೆಂಗಳೂರು ನಗರದ ಯಾವ ಯಾವ ಭಾಗದ ರಸ್ತೆಗಳಲ್ಲಿ ಮತ್ತು ಸಮಯಗಳಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಿರುತ್ತದೆ

ಎಂಬ ಮಾಹಿತಿ ಸರ್ಕಾರಕ್ಕಿದೆಯೇ ಹಾಗಿದ್ದಲ್ಲಿ, ಇದಕ್ಕೆ ಕಾರಣವಾದ ಅಂಶಗಳು ಮತ್ತು ಪರಿಹಾರಗಳ ಬಗ್ಗೆ ಸರ್ಕಾರದ ಯೋಜನೆಗಳ ಕುರಿತಾದ ಪ್ರತ್ಯೇಕವಾದ ಸಂಪೂರ್ಣ ಮಾಹಿತಿ ಒದಗಿಸುವುದು ;

(ಇ) ಕಳೆದ ೩ ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರ ಸೇರಿದಂತೆ ರಾಜ್ಯದಲ್ಲಿ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳು ಎಷ್ಟು; ದಂಡ ವಸೂಲಾತಿಯಿಂದ ಸಂಗ್ರಹವಾದ ಹಣವೆಷ್ಟು, ವರ್ಷವಾರು ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಈ) ಬೆಂಗಳೂರು ನಗರದ ವಾಹನ ದಟ್ಟಣೆ ತಪ್ಪಿಸುವ/ನಿಯಂತ್ರಿಸುವ ನಿಟ್ಟಿನಲ್ಲಿ ಕೈಗೊಳ್ಳಲು ಆಲೋಚಿಸಿರುವ ವಿವಿಧ ಮಾರ್ಗೋಪಾಯ/ ಯೋಜನೆಗಳು ಯಾವುವು ; ಇದಕ್ಕೆ ತಗಲುವ ವೆಚ್ಚ ಯೋಜನೆ ಪೂರ್ಣಗೊಳ್ಳುವ ದಿನಾಂಕ ಅಂದಾಜು ಸರ್ಕಾರಕ್ಕಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳು ಏನು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಬೆಂಗಳೂರು ಮಹಾನಗರದ ರಸ್ತೆಗಳ ಅಭಿವೃದ್ಧಿ ಬಗ್ಗೆ

**ಡಾ|| ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨೩ (೨೧೪೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರದ ರಸ್ತೆ ಅಭಿವೃದ್ಧಿ ಗುಂಡಿ ಮುಚ್ಚುವಿಕೆ ಸೇರಿದಂತೆ ರಸ್ತೆ ಕಾಮಗಾರಿಗಳಿಗಾಗಿ ವಿವಿಧ ಯೋಜನೆ ಶೀರ್ಷಿಕೆಯಡಿ ಒದಗಿಸಲಾದ ಅನುದಾನ ಎಷ್ಟು ; (ವರ್ಷವಾರು, ಯೋಜನವಾರು ಪ್ರದೇಶವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಸಾವಿರಾರು ಕೋಟಿ ರೂಪಾಯಿಗಳ ಅನುದಾನ ವಿನಿಯೋಗವಾಗುತ್ತಿದ್ದರೂ ಬೆಂಗಳೂರು ನಗರದ ರಸ್ತೆಗಳ ಸ್ಥಿತಿಗತಿ,

ಪ್ರಾಣಪಾಯ ತರುತ್ತಿರುವ ರಸ್ತೆ ಇನ್ನೂ ಸುಧಾರಣೆಯಾಗದಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ, ಹಾಗಿದ್ದಲ್ಲಿ, ಈ ಅವ್ಯವಸ್ಥೆಗೆ ಕಾರಣವಾದ ಅಂಶಗಳು ಪರಿಹಾರೋಪಾಯಗಳು ಯೋಜನೆಗಳ ಕುರಿತಾಗಿ ಸಂಪೂರ್ಣ ಪ್ರತ್ಯೇಕ ಮಾಹಿತಿಯನ್ನು ಒದಗಿಸುವುದು ;

(ಇ) ಕಳೆದ ೩ ವರ್ಷಗಳ ಅವಧಿಯಲ್ಲಿ ರಸ್ತೆಗಳಲ್ಲಿನ ಗುಂಡಿಗಳ ಕಾರಣದಿಂದ ಸಂಭವಿಸಿರುವ ಅಪಘಾತಗಳು ಮತ್ತು ಸಾವುಗಳ ಬಗ್ಗೆ ಸರ್ಕಾರವು ಅಂದಾಜಿಸಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಪ್ರತ್ಯೇಕ ಸಂಪೂರ್ಣ ವಿವರವನ್ನು ಒದಗಿಸುವುದು ;

(ಈ) ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವ ಮತ್ತು ರಸ್ತೆಗಳ ಉತ್ತಮ ಗುಣಮಟ್ಟ ನಿರ್ವಹಣೆಗೆ ಸರ್ಕಾರವು ಪರಿಹಾರೋಪಾಯಗಳನ್ನು ಕಂಡುಕೊಂಡಿದೆಯೇ, ಹಾಗಿದ್ದಲ್ಲಿ, ಈ ಕುರಿತಾಗಿ ಅಂದಾಜಿಸಿರುವ ಆರ್ಥಿಕ ವೆಚ್ಚ, ಯೋಜನೆ, ನಿಗದಿತ ಕಾಲಮಿತಿ ಸೇರಿದಂತೆ ಪ್ರತ್ಯೇಕವಾದ ಸಂಪೂರ್ಣ ವಿವರ ಒದಗಿಸುವುದು ?

## ಬೆಂಗಳೂರು ನಗರದ ಕೆರೆಗಳ ಪುನಃಶ್ಚೇತನದ ಬಗ್ಗೆ

**ಡಾ॥ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨೪ (೨೧೪೪) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಇರುವ ಕೆರೆಗಳ ಸಂಖ್ಯೆ ಎಷ್ಟು ; ಕೆರೆಗಳ ಹೆಸರು, ವಿಸ್ತೀರ್ಣ ಮತ್ತು ಅವುಗಳ ನೀರು ಸಂಗ್ರಹ ಸಾಮರ್ಥ್ಯ ಇವುಗಳ ಮಾಹಿತಿ ಒದಗಿಸುವುದು ;

(ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರದ ವಿವಿಧ ಕೆರೆಗಳ ಹೂಳು ತೆಗೆಯುವಿಕೆ ಸೇರಿದಂತೆ ಕೆರೆಗಳ

ಅಭಿವೃದ್ಧಿಗಾಗಿ ವಿನಿಯೋಗಿಸಲಾದ ಅನುದಾನದ ಮೊತ್ತ ಎಷ್ಟು; (ಕೆರೆಗಳವಾರು, ವರ್ಷವಾರು ಪ್ರತ್ಯೇಕವಾಗಿ ಪೂರ್ಣ ವಿವರ ಒದಗಿಸುವುದು)

(ಇ) ಮತ್ತೆ ಮತ್ತೆ ಕಲುಷಿತ ನೀರು ಕೆರೆಗಳನ್ನು ಸೇರುತ್ತಿರುವುದರಿಂದ ಪುನಃಶ್ಚೇತನಕ್ಕಾಗಿ ವಿನಿಯೋಗಿಸಲಾದ ಹಣ, ಶ್ರಮ ಇವುಗಳನ್ನು ವ್ಯರ್ಥಗೊಳಿಸುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕಂಡುಕೊಂಡ ಕಾರಣಗಳು ಪರಿಹಾರೋಪಾಯ ಕ್ರಮಗಳ ಕುರಿತು ವಿವರ ಒದಗಿಸುವುದು ;

(ಈ) ಕೆರೆಗಳ ಪುನಃಶ್ಚೇತನಕ್ಕಾಗಿ ಒದಗಿಸಲಾಗಿದ್ದ ಅನುದಾನ ಬಳಕೆಯಾಗಿದ್ದರೂ ಸಹ ನಿರೀಕ್ಷಿತ ಪ್ರಗತಿ ಕಾಣದಿರುವ ಕುರಿತಾಗಿ NGT (National green tribunal) ಗಮನಿಸಿರುವ ಅಂಶಗಳು ಏನು ; ಇದಕ್ಕೆ ಕಾರಣವಾದ ಅಂಶಗಳ ಕುರಿತಾದ ವರದಿ ಮತ್ತು ಪರಿಹಾರದ ನಿಟ್ಟಿನಲ್ಲಿ ಸರ್ಕಾರವು ಗಂಭೀರವಾಗಿ ಆಲೋಚಿಸಿದೆಯೇ, ಹಾಗಿದ್ದಲ್ಲಿ ಈ ಕುರಿತಾದ ಸಂಪೂರ್ಣ ವಿವರ ಒದಗಿಸುವುದು ?

## ಕರ್ನಾಟಕ ಸರ್ಕಾರ ೭ನೇ ವೇತನದ ಶೀಫಾರಸ್ಸನ್ನು ಜಾರಿಗೆ ತಂದಿರುವ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨೫ (೨೨೬೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ ೭ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಯಾವಾಗ ಜಾರಿಗೆ ತಂದಿತು ;

(ಆ) ವೇತನ ಆಯೋಗದ ಶಿಫಾರಸ್ಸುಗಳನ್ನು ಸಾಮಾಜಿಕ ವಿವಿಧ ಇಲಾಖೆಗಳಡಿ ಕಾರ್ಯ ನಿರ್ವಹಿಸುವ ನಿಗಮಗಳಾದ ದೇವರಾಜ ಅರಸು ನಿಗಮ, ಮಹರ್ಷಿ ವಾಲ್ಮೀಕಿ, ಪರಿಶಿಷ್ಟ ಪಂಗಡಗಳ ಅಭೀವೃದ್ಧಿ ನಿಗಮ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಸಿಬ್ಬಂದಿಗಳಿಗೆ ಅನುಷ್ಠಾನಗೊಳಸಲಾಗುವುದೇ ;

(ಇ) ಹಿಂದಿನ ಸರ್ಕಾರ ನೀಡಿರುವ ಮಧ್ಯಂತರ ಪರಿಹಾರ ೧೭% ನೀಡಲಾಗಿದ್ದು, ಪ್ರಸ್ತುತ ೭ನೇ ವೇತನ ಆಯೋಗದ ಬಾಕಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಹಣಕಾಸು ಇಲಾಖೆ ಯಾವ ಉದ್ದೇಶಕ್ಕೆ ತಡೆಯುತ್ತಿದೆ ;

(ಈ) ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳನುಸಾರ ನೇಮಕಗೊಂಡು ಈ ಹಿಂದೆ ೬ನೇ ವೇತನ ಆಯೋಗದಂತೆ ಸೌಲಭ್ಯ ನೀಡಿ ಈಗ ವಿವಿಧ ಕಾರಣ ನೀಡುತ್ತಿರುವುದೇಕೆ: ಸರ್ಕಾರದಲ್ಲಿ ಅನುದಾನದ ಕೊರತೆ ಇದೇಯೇ ;

(ಉ) ಸದರಿ ನೌಕರರಿಗೆ ಯಾವಾಗ ೭ನೇ ವೇತನ ಆಯೋಗದ ಸೌಲಭ್ಯಗಳನ್ನು ಒದಗಿಸಲಾಗುವುದು ? (ಸ್ಪಷ್ಟವಾದ ಕಾಲಾವಧಿಯನ್ನು ಒದಗಿಸುವುದು)

## ಕೊಪ್ಪಳ ಜಿಲ್ಲೆಯಲ್ಲಿನ ವಿವಿಧ ಇಲಾಖೆಗಳ ಅಡಿಯಲ್ಲಿ ಬರುವ ಕೆರೆಗಳ/ಕೊಂಡಗಳು/ಕುಂಟೆಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨೬ (೨೨೬೩) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆ, ಬೃಹತ್ ನೀರಾವರಿ ಇಲಾಖೆ, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ, ಅರಣ್ಯ ಇಲಾಖೆ/ಇತರ ಇಲಾಖೆ ಅಡಿಯಲ್ಲಿ ಒಟ್ಟು

ಎಷ್ಟು ಕೆರೆಗಳು/ಕೊಂಡಗಳು/ಕುಂಟೆಗಳು ಇವೆ ; (ಇಲಾಖಾವಾರು, ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಮೇಲ್ಕಂಡ ಇಲಾಖೆವಾರು ಪ್ರತಿ ಕೆರೆಯ ವಿಸ್ತೀರ್ಣ (ಎಕರೆ/ಹೆಕ್ಟೇರ್), ಜಲಸಂಗ್ರಹ ಸಾಮರ್ಥ್ಯ ಹಾಗೂ ನಿಗದಿತ ಬಫರ್ ವಲಯ ಎಷ್ಟು ; (ವಿವರಗಳನ್ನು ಒದಗಿಸುವುದು)

(ಇ) ಈ ಕೆರೆಗಳ ಸರ್ವೆ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗಿದೆ; ಎಷ್ಟು ಕೆರೆಗಳು ಅನಧಿಕೃತವಾಗಿ ಒತ್ತುವರಿಯಾಗಿವೆ ; (ಕೆರೆವಾರು ಒತ್ತುವರಿಯಾಗಿರುವ ವಿಸ್ತೀರ್ಣವನ್ನು ಒದಗಿಸುವುದು)

(ಈ) ಇದೇ ಅವಧಿಯಲ್ಲಿ ಎಷ್ಟು ಅಕ್ರಮ ಕಟ್ಟಡಗಳನ್ನು / ಒತ್ತುವರಿಯನ್ನು ಗುರುತಿಸಲಾಗಿದೆ ಮತ್ತು ಎಷ್ಟು ತೆರವುಗೊಳಿಸಲಾಗಿದೆ ; ಪ್ರಸ್ತುತ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಉ) ಕೆರೆ ಒತ್ತುವರಿಯುನ್ನು ಯಾವ ಕಾಲಾವಧಿಯೊಳಗೆ ತೆರವುಗೊಳಿಸಲಾಗುವುದು ; ಒತ್ತುವರಿ ಮಾಡಿರುವವರ ವಿರುದ್ಧ ಯಾವ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು ?

## ಕೊಪ್ಪಳ ಜಿಲ್ಲೆಯಲ್ಲಿ ಕೆರೆಗಳ ಬಫರ್ ವಲಯದಲ್ಲಿ ಅನುಮತಿ ನೀಡಲಾಗಿರುವ ಕಟ್ಟಡಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨೭ (೨೨೬೪) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಣ್ಣ ನೀರಾವರಿ ಇಲಾಖೆ, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ, ಅರಣ್ಯ ಇಲಾಖೆ /ಇತರೆ ಇಲಾಖೆ ಅಡಿಯಲ್ಲಿ ಇರುವ ಕೆರೆಗಳ ಪೈಕಿ ಅನಧಿಕೃತವಾಗಿ ಒತ್ತುವರಿ ಮಾಡಿರುವ ಎಷ್ಟು ಕೆರೆಗಳನ್ನು ತೆರವುಗೊಳಿಸಲಾಗಿದೆ ;

(ಆ) ಕಳೆದ ೩ ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕೆರೆಗಳ ಬಫರ್ ವಲಯದಲ್ಲಿ ಎಷ್ಟು ಕಟ್ಟಡಗಳಿಗೆ ಅನುಮತಿ ನೀಡಲಾಗಿದೆ; (ಇಲಾಖೆವಾರು ವಿವರ ಒದಗಿಸುವುದು)

(ಇ) ಇದೇ ಅವಧಿಯಲ್ಲಿ ಎಷ್ಟು ಅಕ್ರಮ ಕಟ್ಟಡಗಳನ್ನು ಗುರುತಿಸಲಾಗಿದೆ ಮತ್ತು ಎಷ್ಟು ತೆರವುಗೊಳಿಸಲಾಗಿದೆ ; ಪ್ರಸ್ತುತ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಈ) ಹೊಸ ಬಫ್‌ರ್ ವಲಯ ನಿಯಮ ಜಾರಿಗೆ ಬಂದ ನಂತರ ರಾಜ್ಯದಲ್ಲಿ ಪರಿಸರ, ನೆರೆ ಅಪಾಯ ಹಾಗೂ ಭೂಗರ್ಭ ಜಲಮಟ್ಟದ ಮೇಲೆ ಆಗುವ ಪರಿಣಾಮ ಕುರಿತು ಸರ್ಕಾರ ಯಾವುದೇ ವೈಜ್ಞಾನಿಕ ಅಧ್ಯಯನ ನಡೆಸಿದೆಯೇ ; ಇದ್ದರೆ, ಅದರ ಪ್ರತಿಯನ್ನು ಒದಗಿಸುವುದು ;

(ಉ) ಭವಿಷ್ಯದಲ್ಲಿ ಕೆರೆ ನಾಶ/ನೆರೆ ಹಾನಿ ಸಂಭವಿಸಿದಲ್ಲಿ ಹೊಣೆಗಾರಿಕೆ ನಿಗದಿ ಮಾಡುವ ಹಾಗೂ ಸಾರ್ವಜನಿಕರಿಗೆ ಪರಿಹಾರ ನೀಡುವ ಯಾವುದೇ ಜಿಲ್ಲಾ ಮಟ್ಟದ ಕಾರ್ಯಯೋಜನೆ ಸರ್ಕಾರ ರೂಪಿಸಿದೆಯೇ ?

## ರಾಜ್ಯ ಸರ್ಕಾರ ಕೆರೆಗಳ ಸಂರಕ್ಷಣೆಗೆ ಬಫರ್ ವಲಯ ನಿಯಮಗಳ ಬದಲಾವಣೆ ಮಾಡಿರುವ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨೮ (೨೨೬೫) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಕೆರೆಗಳ ಸಂರಕ್ಷಣೆಗೆ ಹಿಂದಿನಂತೆ ಇರುವ ಬಫರ್ ವಲಯ ನಿಯಮಗಳ ಬದಲಾವಣೆ ಮಾಡಲು ಕಾರಣವೇನು ; ಯಾವ ವೈಜ್ಞಾನಿಕ ಅಧ್ಯಯನ ಅಥವಾ ಸಮಿತಿಯ ಶಿಫಾರಸ್ಸು ಆಧಾರವಾಗಿದೆ ;

(ಆ) ಹೊಸ ನಿಯಮದ ಪ್ರಕಾರ ೩೦ ಮೀ. ವರೆಗೆ ಬಫರ್ ವಲಯವನ್ನು ಇಳಿಕೆ ಮಾಡುವುದರಿಂದ ಕೆರೆಗಳ ಜಲಸಂಗ್ರಹ ಸಾಮರ್ಥ್ಯ, ನೆರೆ–ಪರಿಸ್ಥಿತಿ ಹಾಗೂ ಭೂಗರ್ಭ ಜಲಮಟ್ಟದ ಮೇಲೆ ಆಗುವ ಪರಿಣಾಮಗಳ ಕುರಿತು ಪರಿಸರ ಇಲಾಖೆಯ ಮೌಲ್ಯಮಾಪನ ವರದಿ ಸರ್ಕಾರದ ಬಳಿ ಇದೆಯೇ ; (ಇದ್ದಲ್ಲಿ, ಅದರ ಪ್ರತಿಯನ್ನು ಒದಗಿಸುವುದು)

(ಇ) ಕೆರೆ ಬಫರ್ ವಲಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವುದರಿಂದ ಭವಿಷ್ಯದಲ್ಲಿ ನಗರ ಪ್ರದೇಶಗಳಲ್ಲಿ ನೆರೆ ಮತ್ತು ಪರಿಸರ ಹಾನಿ ಅಪಾಯವನ್ನು ತಪ್ಪಿಸಲು ಸರ್ಕಾರ ಯಾವ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಂಡಿದೆ ?

## ಕರಾವಳಿ ಭಾಗದಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨೯ (೨೧೪೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಿಂದ ಕರಾವಳಿ ಭಾಗದಲ್ಲಿ ಪ್ರಚೋದನಕಾರಿ ಭಾಷಣ ಮತ್ತು ಕೋಮುಗಲಭೆಯಾದವರ ಮೇಲೆ ದಾಖಲಾದ ಪ್ರಕರಣಗಳೆಷ್ಟು ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ; ಪ್ರಚೋದನಕಾರಿ ಭಾಷಣದ ಹಿಂದೆ ಇರುವವರನ್ನು ಗುರುತಿಸಲಾಗಿದೆಯೇ ಯಾವ ಉದ್ದೇಶಕ್ಕಾಗಿ ಪ್ರಚೋದನಕಾರಿ ಭಾಷಣ ಮಾಡಲಾಗುತ್ತದೆ ; (ವಿವರ ನೀಡುವುದು)

(ಆ) ಕರಾವಳಿ ಜಿಲ್ಲೆಗಳಲ್ಲಿ ಎಷ್ಟು ಜನ ರೌಡಿ ಶೀಟರ್‌ಗಳನ್ನು ಗಡಿಪಾರು ಮಾಡಲಾಗಿದೆ ; ಗಡಿಪಾರಾದವರು ಯಾವ ಜಿಲ್ಲೆಗಳಲ್ಲಿದ್ದಾರೆ ; ಯಾರೊಂದಿಗೆ ಆಶ್ರಯ ಪಡೆಯುತ್ತಿದ್ದಾರೆ ; ಗಡಿಪಾರಾದವರ ಮೇಲೆ ಯಾವ ರೀತಿ ನಿಗಾ ವಹಿಸಿಕೊಳ್ಳಲಾಗುತ್ತದೆ ; (ವಿವರ ನೀಡುವುದು)

(ಇ) ವಿಶೇಷ ತನಿಖಾ ದಳ ಯಾವ ರೀತಿ ಕೆಲಸ ಮಾಡುತ್ತದೆ; ಪ್ರಚೋದನೆ ಮತ್ತು ಕೋಮು ಗಲಭೆಯಿಂದ ದಕ್ಷಿಣ ಕನ್ನಡ ಜಿಲ್ಲೆ ನಿಯಂತ್ರಣಕ್ಕೆ ತರಲು ಸರ್ಕಾರದ ವತಿಯಿಂದ ಕೈಗೊಂಡ ಕ್ರಮಗಳೇನು ;

(ಈ) ಕರಾವಳಿ ಜಿಲ್ಲೆಯ ಅಭಿವೃದ್ಧಿಗೆ ಕೋಮುಗಲಭೆ ಮತ್ತು ಧರ್ಮಾಧಾರಿತ ವಿಚಾರಗಳಲ್ಲಿ ಹೆಚ್ಚು ಪ್ರಚೋದನಕಾರಿ ಭಾಷಣಗಳಿಂದ ಕರಾವಳಿ ಹಿನ್ನಡೆಗೆ ಕಾರಣವಾಗಿದೆ ಎಂಬ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿಯು ನಿಜವೇ ; ಇದರ ಬಗ್ಗೆ ಸರ್ಕಾರದ ವರದಿಯೇನು ;

(ಉ) ಕಳೆದ ಒಂದು ವರ್ಷದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ನಿಯಂತ್ರಣದಲ್ಲಿ ಇದ್ದು, ಈ ಬಗ್ಗೆ ಸರ್ಕಾರದ ಕೆಲಸಕ್ಕೆ ಸಾರ್ವಜನಿಕರು ಪ್ರಶಂಸೆಯನ್ನು ವ್ಯಕ್ತಪಡಿಸಿದ್ದು, ಇದನ್ನು ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಕರಾವಳಿ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಕಛೇರಿಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೩೦ (೨೧೪೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಕಛೇರಿಗಳು ಎಷ್ಟು; ಸ್ವಂತ ಕಟ್ಟಡದಲ್ಲಿ ಹಾಗೂ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಕಛೇರಿಗಳ ಸಂಖ್ಯೆ ಎಷ್ಟು;

(ಆ) ಬಾಡಿಗೆ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿಗಳಿಗೆ ಸ್ವಂತ ಕಟ್ಟಡ ಹೊಂದಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು ;

(ಇ) ಸಾರ್ವಜನಿಕರಿಗೆ ಅನುಕೂಲವಾಗುವಂತೆ ಎಲ್ಲಾ ಇಲಾಖೆಯ ಕಛೇರಿಗಳು ಒಂದೇ ಸೂರಿನಡಿಯಲ್ಲಿ ದೊರೆಯುವಂತೆ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ರಾಜ್ಯದ ಅಪ್ರಾಪ್ತರಲ್ಲಿ ಗಾಂಜಾ ಸೇವನೆ ವ್ಯಾಪಕವಾಗಿ ಹರಡುತ್ತಿರುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೩೧ (೨೧೪೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗಾಂಜಾ ಸೇವನೆ ಮಾಡಿ ಅಪ್ರಾಪ್ತರು ಅನೇಕ ಸಮಾಜ ವಿದ್ರೋಹ ಕೆಲಸಗಳಲ್ಲಿ ತೊಡಗಿಸಿಕೊಂಡು ಅಮಾಯಕರ ಪ್ರಾಣ ಹಾನಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ಒಂದು ವರ್ಷದಿಂದ ಇಂತಹ ಕೃತ್ಯದಿಂದ ಎಷ್ಟು ಜನ ಅಮಾಯಕರ ಪ್ರಾಣ ಹಾನಿಯಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಅಪ್ರಾಪ್ತರು ಗಾಂಜಾ ಸೇವನೆಯಿಂದ ಇಂತಹ ಕೃತ್ಯ ಮಾಡುತ್ತಿರುವುದನ್ನು ಶಾಶ್ವತವಾಗಿ ತಪ್ಪಿಸಲು ಸರ್ಕಾರ ಯಾವ ಕಠಿಣ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಸಣ್ಣ ನೀರಾವರಿ ಇಲಾಖೆಗೆ ಮಂಜೂರಾದ ಹುದ್ದೆಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೩೨ (೨೧೪೮) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಮಂಜೂರಾದ ಹುದ್ದೆಗಳೆಷ್ಟು, ಭರ್ತಿ ಮಾಡಲಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಹೆಚ್ಚಿನ ಹುದ್ದೆಗಳು ಖಾಲಿ ಇರುವುದರಿಂದ ಇಲಾಖೆಯ ಕೆಲಸವು ಮಂದಗತಿಯಿಂದ ನಡೆಯುತ್ತಿದೆ ಎಂಬ ದೂರುಗಳಿರುವುದು ನಿಜವೇ ;

(ಇ) ಶೀಘ್ರವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ ?

## ಸಣ್ಣ ನೀರಾವರಿ ಇಲಾಖೆಯಿಂದ ಯೋಜನೆಗಳ ಪ್ರಾರಂಭಿಸುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೩೩ (೨೧೪೯) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ಪ್ರಾರಂಭಿಸಲಾಗಿದೆ ; ಈ ಯೋಜನೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ವಿವರ ನೀಡುವುದು)

(ಆ) ಈ ಯೋಜನೆಗಳು ಯಾವ ಹಂತದಲ್ಲಿದೆ; ಎಷ್ಟು ಪೂರ್ಣಗೊಂಡಿದೆ; ಎಷ್ಟು ಅನುದಾನ ವೆಚ್ಚ ಮಾಡಲಾಗಿದೆ ; (ವಿವರ ನೀಡುವುದು)

(ಇ) ಬಾಕಿ ಇರುವ ಯೋಜನೆಗಳಿಗೆ ಎಷ್ಟು ಅನುದಾನ ಬೇಡಿಕೆ ಇದೆ; ಅರ್ಧದಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಮಂಡಳಿಗೆ ಸ್ವಂತ ಕಟ್ಟಡ ಒದಗಿಸುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೩೪ (೨೩೧೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಮಂಡಳಿಗೆ ಸ್ವಂತ ಕಟ್ಟಡ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಬೇಕಾಗಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಪಾತ್ರವೇನು ; (ವಿವರ ನೀಡುವುದು)

(ಈ) ಪ್ರವಾಸೋದ್ಯಮ ಮೂಲಕ ಉದ್ಯೋಗ ಒದಗಿಸಿಕೊಡಲು ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಮಂಡಳಿ ಹಮ್ಮಿಕೊಂಡಿರುವ ಯೋಜನೆಗಳಾವುವು ; (ವಿವರ ನೀಡುವುದು)

(ಉ) ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಕರಾವಳಿ ಭಾಗದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ? (ವಿವರ ನೀಡುವುದು)

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆ ಸಹಕಾರ ವ್ಯವಸಾಯ ಸಂಘ (SC/ST Tenary Co-Operative Society) ಅಧೀನದಲ್ಲಿರುವ ಭೂಮಿ ಮತ್ತು ಸದಸ್ಯರ ಹಕ್ಕುಗಳ ಬಗ್ಗೆ

**ಶ್ರೀ ಎಫ್. ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) :–**

೧೯೩೫ (೨೨೯೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆ ಸಹಕಾರ ಬೇಸಾಯ ಸಂಘಗಳ ಅಧೀನದಲ್ಲಿ ಪ್ರಸ್ತುತ ಒಟ್ಟು ಎಷ್ಟು ಎಕರೆ ಜಮೀನು ಲಭ್ಯವಿದೆ ; ಈ ಪೈಕಿ ಎಷ್ಟು ಸಂಘಗಳು ಪ್ರಸ್ತುತ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ ಮತ್ತು ಎಷ್ಟು ಸಂಘಗಳು ಸಮಾಪನೆಗೊಂಡಿವೆ ; (Closed/

Liquidated) (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಇಂತಹ ಸಹಕಾರ ಸಂಘಗಳು ಕಾರ್ಯನಿರ್ವಹಿಸದೆ ಸ್ಥಗಿತೊಂಡಿದ್ದರೆ ಅಥವಾ ಕ್ಲೋಸ್ ಆಗಿದ್ದರೆ ಆ ಸಂಘಗಳ ಹೆಸರಿನಲ್ಲಿದ್ದ ಭೂಮಿಯನ್ನು ಸರ್ಕಾರವು ವಾಪಸ್ ಪಡೆದಿದೆಯೇ ಅಥವಾ ಮೂಲ ಸದಸ್ಯರಿಗೆ ಹಂಚಿಕೆ ಮಾಡಲಾಗಿದೆಯೇ ;

(ಇ) ಸದರಿ ಸಂಘಸಂಸ್ಥೆಗಳು ಕ್ಲೋಸ್ ಆಗಿರುವ ಸಂದರ್ಭದಲ್ಲಿ ಆ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ಸದಸ್ಯರಿಗೆ ಕಂದಾಯ ಇಲಾಖೆಯ ಫಾರಂ ನಂಬರ್ ೫೭ (ಅಕ್ರಮ–ಸಕ್ರಮ) ಅಡಿಯಲ್ಲಿ ಜಮೀನನ್ನು ಮಂಜೂರು ಮಾಡಲು ಅವಕಾಶವಿದೆಯೇ ; ಈ ಸಂಬಂಧ ಸರ್ಕಾರಕ್ಕೆ ಬಂದಿರುವ ಅರ್ಜಿಗಳೆಷ್ಟು ಮತ್ತು ಕೈಗೊಂಡ ಕ್ರಮಗಳೇನು ;

(ಈ) ಕಳೆದ ಐದು ವರ್ಷಗಳಲ್ಲಿ ಈ ಸಂಘಗಳ ಅಡಿಯಲ್ಲಿರುವ ಭೂಮಿಯನ್ನು ಫಾರಂ ನಂಬರ್ ೫೦, ೫೩ ಅಥವಾ ೫೭ರ ಅಡಿಯಲ್ಲಿ ಎಷ್ಟು ಜನ ಸದಸ್ಯರಿಗೆ ವೈಯಕ್ತಿಕವಾಗಿ ಮಂಜೂರು ಮಾಡಲಾಗಿದೆ ; (ಜಿಲ್ಲಾವಾರು ಮತ್ತು ಸದಸ್ಯರ ಸಂಖ್ಯೆಯ ವಿವರ ನೀಡುವುದು)

(ಉ) ದಶಕಗಳಿಂದ ಸಂಘದ ಹೆಸರಿನಲ್ಲಿ ಭೂಮಿ ಸಾಗುವಳಿ ಮಾಡುತ್ತಿರುವ SC/ST ಸಮುದಾಯದ ಬಡ ರೈತರಿಗೆ ವೈಯಕ್ತಿಕವಾಗಿ ಪಹಣಿ (RTC) ಒದಗಿಸಲು ಸರ್ಕಾರವು ವಿಶೇಷ ನಿಯುವಮಾವಳಿ ರೂಪಿಸಲು ಅಥವಾ ಹಾಲಿ ಇರುವ ಕಾನೂನುಗಳಿಗೆ ತಿದ್ದುಪಡಿ ತರಲು ಸರ್ಕಾರ ಉದೇಶಿಸಿದೆಯೇ ?

## ಅಗ್ನಿಶಾಮಕ ಠಾಣೆಗಳ ಸ್ಥಾಪನೆ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೩೬ (೨೨೬೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿಯೂ ಅಗ್ನಿಶಾಮಕ ಠಾಣೆಗಳು ಇವೆಯೇ ; ಯಾವ ಯಾವ ತಾಲ್ಲೂಕುಗಳಲ್ಲಿ ಇನ್ನೂ ಸ್ಥಾಪಿಸಿಲ್ಲ ; ಸರ್ಕಾರ ಈ ಬಗ್ಗೆ ಕ್ರಮ ವಹಿಸದಿರಲು ಕಾರಣವೇನು ;

(ಆ) ರಾಜ್ಯದಲ್ಲಿ ಇರುವ ಒಟ್ಟು ಅಗ್ನಿಶಾಮಕ ಠಾಣೆಗಳು ಎಷ್ಟು ; ಅವುಗಳಿಗೆ ಮಂಜೂರಾದ, ಭರ್ತಿಯಾದ ಮತ್ತು ಖಾಲಿಯಿರುವ ವಿವಿಧ ಹುದ್ದೆಗಳು ಎಷ್ಟು ; (ಪ್ರತಿ ಠಾಣಾವಾರು ಮಾಹಿತಿ ನೀಡುವುದು) ಖಾಲಿ ಹುದ್ದೆಗಳನ್ನು ಭರ್ತಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಇ) ರಾಷ್ಟ್ರೀಯ ಅಗ್ನಿಶಾಮಕ ಸಲಹಾ ಮಂಡಳಿಯು ನೀಡಿರುವ ಶಿಫಾರಸ್ಸುಗಳು ಏನೇನು ; (ಶಿಫಾರಸ್ಸಿನ ಪ್ರತಿ ನೀಡುವುದು)

(ಈ) ಅಗ್ನಿಶಾಮಕ ಠಾಣೆಗಳಲ್ಲಿರುವ ೧೫ ವರ್ಷಕ್ಕಿಂತ ಹೆಚ್ಚು ಹಳೆಯದಾದ ವಾಹನಗಳು ಎಷ್ಟು ; ಅವುಗಳಲ್ಲಿ ಚಾಲನೆಯಲ್ಲಿರುವ ವಾಹನಗಳು ಎಷ್ಟು ; ಹೊಸ ವಾಹನಗಳ ಖರೀದಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ ; ಅಗ್ನಿಶಾಮಕ ಠಾಣೆಗಳನ್ನು ಆಧುನಿಕರಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು ಏನು ;

(ಉ) ದಕ್ಷಿಣ ಕನ್ನಡ ಜಿಲ್ಲೆಯ ಕಡಬ ಮತ್ತು ಮುಲ್ಕಿ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪನೆ ಯಾವ ಹಂತದಲ್ಲಿದೆ ; ಅಗ್ನಿಶಾಮಕ ಠಾಣೆ ಸ್ಥಾಪಿಸಲು ಜಾಗ ಗುರುತಿಸಲಾಗಿದೆಯೇ: ಮೀಸಲಿಡಲಾದ ಅನುದಾನ ಎಷ್ಟು ; ಪ್ರಸ್ತುತ ಮಂಜೂರು ಮಾಡಿರುವ ಅನುದಾನದಲ್ಲಿ ಸುಸಜ್ಜಿತ ಠಾಣೆ ನಿರ್ಮಿಸಲು ಸಾಧ್ಯವೇ: ಯಾವ ಕಾಲಮಿತಿಯೊಳಗೆ ಅಗ್ನಿಶಾಮಕ ಠಾಣೆ ಸ್ಥಾಪಿಸಲಾಗುವುದು ?

## ರಾಜ್ಯದ ಒಟ್ಟು ಸಾಲದ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೩೭ (೨೨೫೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೨೩-೨೪, ೨೦೨೪-೨೫ ಹಾಗೂ ೨೦೨೫-೨೬ರಲ್ಲಿ ಸರ್ಕಾರವು ಒಟ್ಟು ಎಷ್ಟು ಸಾಲವನ್ನು ಪಡೆದಿದೆ ; (ವರ್ಷವಾರು ವಿವರವನ್ನು ನೀಡುವುದು) ಸದರಿ ಸಾಲದಲ್ಲಿ ಒಳಗೊಂಡಿರುವ ಬಾಹ್ಯ ಸಾಲ, ಆಂತರಿಕ ಸಾಲ (Internal Debt)ಕೇಂದ್ರ ಸರ್ಕಾರದಿಂದ ಪಡೆದ ಸಾಲ, ಮಾರುಕಟ್ಟೆ ಸಾಲ (Market Borrowings), ವಿಶೇಷ ಉದ್ದೇಶ ಸಾಲಗಳು (Special Purpose Loans) ಹಾಗೂ ಇತರ ಬಾಧ್ಯತೆಗಳ ಸಾಲ ಎಷ್ಟು ; (ಪ್ರತ್ಯೇಕ ವಿವರವನ್ನು ನೀಡುವುದು)

(ಆ) ಪ್ರತಿ ವರ್ಷ ರಾಜ್ಯದ ವಿತ್ತೀಯ ಕೊರತೆ ಎಷ್ಟು; ಅದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (GSDP) ಎಷ್ಟು ಶೇಕಡಾವಾರು ಆಗಿದೆ ;

(ಇ) Fiscal Responsibility and Budget Management Act, ೨೦೦೩ ಹಾಗೂ ರಾಜ್ಯದ ಅನ್ವಯವಾಗುವ ವಿತ್ತೀಯ ಜವಾಬ್ದಾರಿ ಕಾಯ್ದೆಯಡಿ ನಿಗದಿಪಡಿಸಿರುವ ಆರ್ಥಿಕ ಶಿಸ್ತಿನಲ್ಲಿ ಸಾಲದ ಮಿತಿ (Fiscal Deficit and Debt-GSDP Ratio Ceiling) ಎಷ್ಟು ; ರಾಜ್ಯ ಸರ್ಕಾರವು ಆ ಮಿತಿಯೊಳಗೆ ಕಾರ್ಯನಿರ್ವಹಿಸುತ್ತಿದೆಯೇ ; ಇಲ್ಲದಿದ್ದಲ್ಲಿ, ಮಿತಿ ಮೀರಿರುವ ಪ್ರಮಾಣ ಎಷ್ಟು ;

(ಈ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಒಟ್ಟು ಸಾರ್ವಜನಿಕ ಸಾಲದ ಪ್ರಮಾಣ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (GSDPಗೆ) ಹೋಲಿಸಿದರೆ ಶೇಕಡಾ ಎಷ್ಟು ಆಗಿದೆ ;

(ಉ) ರಾಜ್ಯದ ಒಟ್ಟು ಸಾರ್ವಜನಿಕ ಸಾಲವನ್ನು ರಾಜ್ಯದ ಜನಸಂಖ್ಯೆಗೆ ಹಂಚಿದಲ್ಲಿ ಪ್ರತಿ ನಾಗರೀಕನ ಮೇಲೆ ಎಷ್ಟು ರೂಪಾಯಿ ಸಾಲ ಇದೆ ?

# ಅಲ್ಪಾವಧಿ ಬಡ್ಡಿರಹಿತ ಸಾಲದ ಕುರಿತು

## ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–

೧೯೩೮ (೨೨೫೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಹಕಾರ ಇಲಾಖೆಯ ಮುಖಾಂತರ ೨೦೨೨–೨೩ನೇ ಸಾಲಿನಿಂದ ಇಲ್ಲಿಯವರೆಗೆ ಅಲ್ಪಾವಧಿ ಬಡ್ಡಿರಹಿತ ಸಾಲದಡಿ ವಿತರಿಸಲಾದ ಒಟ್ಟು ಸಾಲದ ಮೊತ್ತ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು) ಸದರಿ ಸಾಲಗಳ ಮೇಲೆ ಸರ್ಕಾರದಿಂದ ಪಾವತಿಸಬೇಕಾದ ಬಡ್ಡಿ ಸಹಾಯಧನದ ಒಟ್ಟು ಮೊತ್ತ ಎಷ್ಟು ; ಅದರಲ್ಲಿ ಇಲ್ಲಿಯವರೆಗೆ ಪಾವತಿಸಿರುವ ಮತ್ತು ಬಾಕಿ ಉಳಿದಿರುವ ಮೊತ್ತ ಎಷ್ಟು ;

(ಆ) ಬಡ್ಡಿ ಸಹಾಯಧನ ಪಾವತಿಯಲ್ಲಿ ಉಂಟಾಗಿರುವ ವಿಳಂಬಕ್ಕೆ ಕಾರಣಗಳೇನು ; ಬಾಕಿ ಉಳಿದಿರುವ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಇ) ಸಹಕಾರಿ ಸಂಘಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಇತರೆ ಸೌಲಭ್ಯಗಳು (ಪುನರ್‌ಹೂಡಿಕೆ ನೆರವು, ಆಡಳಿತ ವೆಚ್ಚ ಭರ್ತಿ, ಡಿಜಿಟಲೀಕರಣ ಅನುದಾನ, ಸಿಬ್ಬಂದಿ ವೇತನ ಸಹಾಯ, ದುರ್ಬಲ ಸಂಘಗಳ ಪುನಃಶ್ಚೇತನ ಯೋಜನೆ ಮುಂತಾದವು) ಯಾವುವು ; ಅವುಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಬಡ್ಡಿ ಸಹಾಯಧನ ಮತ್ತು ಇತರೆ ಅನುದಾನಗಳ ಬಿಡುಗಡೆ ವಿಳಂಬದಿಂದ ಸಹಕಾರಿ ಸಂಘಗಳ ಆರ್ಥಿಕ ಸ್ಥಿತಿ ದುರ್ಬಲಗೊಳ್ಳುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ತಡೆಗಟ್ಟಲು ದೀರ್ಘಕಾಲಿಕ ನೀತಿ ರೂಪಿಸುವ ವಿಚಾರ ಸರ್ಕಾರದ ಪರಿಗಣನೆಯಲ್ಲಿ ಇದೆಯೇ ?

# ರಾಜ್ಯದಲ್ಲಿ ಸರ್ಕಾರಿ ಖಾಲಿ ಹುದ್ದೆಗಳು ಮತ್ತು ನೇಮಕಾತಿ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೯೩೯ (೨೨೬೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮ, ಮಂಡಳಿಗಳು ಹಾಗೂ ಪ್ರಾಧಿಕಾರಗಳಲ್ಲಿ ಅನೇಕ ಹುದ್ದೆಗಳು ದೀರ್ಘಕಾಲದಿಂದ ಖಾಲಿಯಾಗಿದ್ದು, ಇದರಿಂದ ಗುಣಮಟ್ಟದ ಸೇವೆ ಒದಗಿಸುವಲ್ಲಿ ವಿಳಂಬ ಮತ್ತು ಆಡಳಿತಾತ್ಮಕ ವ್ಯತ್ಯಯಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ;

(ಆ) ೨೦೨೩-೨೪ನೇ ಸಾಲಿನ ನಂತರ ರಾಜ್ಯ ಸರ್ಕಾರವು ವಿವಿಧ ಇಲಾಖೆಗಳು, ನಿಗಮ, ಮಂಡಳಿಗಳು ಮತ್ತು ಪ್ರಾಧಿಕಾರಗಳಲ್ಲಿನ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಹೊರಡಿಸಿದ ನೇಮಕಾತಿ ಅಧಿಸೂಚನೆಗಳ ವಿವರವನ್ನು ಇಲಾಖೆವಾರು, ಸಂಸ್ಥೆವಾರು ಹಾಗೂ ಹುದ್ದೆವಾರು ನೀಡುವುದು ;

(ಇ) ೨೦೨೨-೨೩ನೇ ಸಾಲಿನ ನಂತರ ಹೊಸದಾಗಿ ನೇಮಕಾತಿ ಮತ್ತು ಆಂತರಿಕ ಬಡ್ತಿಯ ಮೂಲಕ ಹುದ್ದೆಗಳ ಭರ್ತಿಗೆ ಅನುಮೋದನೆ ನೀಡಲಾದ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ನೇರ ನೇಮಕಾತಿ ಮತ್ತು ಪದೋನ್ನತಿ ಮೂಲಕ ಭರ್ತಿಗೊಳಿಸಲಾದ ಹುದ್ದೆಗಳ ವಿವರವನ್ನು ಪ್ರತ್ಯೇಕವಾಗಿ ನೀಡುವುದು ; ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಹೆಚ್ಚುವರಿ ಪ್ರಭಾರ ವಹಿಸಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು)

(ಈ) ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗಲು ಆಡಳಿತಾತ್ಮಕ, ಆರ್ಥಿಕ ಅಥವಾ ಕಾನೂನು ಸಂಬಂಧಿತ ಯಾವುದೇ ಅಡಚಣೆಗಳಿವೆಯೇ ; ಇದ್ದಲ್ಲಿ, ಅವುಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದ ಪೊಲೀಸ್ ಇಲಾಖೆಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು ) :–**

೧೯೪೦ (೨೧೮೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಮತ್ತು ರಾಜ್ಯ ಪೊಲೀಸ್ ಇಲಾಖೆಯಲ್ಲಿ ೩೧ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಹಾಗೂ ೦೭ ವರ್ಷಗಳಿಂದ ಸಿವಿಲ್ ASI ಆಗಿ ಕರ್ತವ್ಯ ನಿರ್ವಹಿಸುತ್ತಿರುವ ASI ಇಂದ PSI ಗೆ ಯಾವ ಕಾಲಮಿತಿಯೊಳಗೆ ಮುಂಬಡ್ತಿಯನ್ನು ನೀಡಲಾಗುವುದು ;

(ಆ) ರಾಜ್ಯದ ಸರ್ಕಾರಿ ಇಲಾಖೆಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳು ಶೇಕಡ ೫೦:೫೦ ರಷ್ಟು ಇದು, ಪೊಲೀಸ್ ಇಲಾಖೆಯಲ್ಲಿ ಮಾತ್ರ ೭೦:೩೦ ರಷ್ಟಿದ್ದು, ಇಲಾಖೆಯಲ್ಲಿ ಶೇಕಡವಾರು ಹೆಚ್ಚಿನ ಪದವೀಧರರಾಗಿದ್ದು ಹಿಂದಿನ ಬ್ರಿಟಿಷ್ ಕಾಲದ ಪದ್ಧತಿಯಂತೆ ಇರುವ ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ; ಯಾವ ಕಾಲಮಿತಿಯೊಳಗೆ ಈ ತಾರತಮ್ಯವನ್ನು ಸರಿಪಡಿಸಲಾಗುವುದು ;

(ಇ) ಬೆಂಗಳೂರು ನಗರದ ಆಯುಕ್ತರ ಕಛೇರಿಗೆ ರೈಲ್ವೆ ಪೊಲೀಸ್ ಮತ್ತು ವಿವಿಧ ಘಟಕಗಳಿಂದ ೧೯೯೯ ಸಾಲಿನಲ್ಲಿ ನೇಮಕಾತಿ ಹೊಂದಿ ನಗರಕ್ಕೆ ವರ್ಗಾವಣೆಯಾಗಿ ಬಂದು, ೧೯೯೬ ರಲ್ಲಿ ನೇಮಕಾತಿ ಹೊಂದಿ ಬೆಂಗಳೂರು ನಗರದ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ASI ಗಳು ಜ್ಯೇಷ್ಠತಾ ಪಟ್ಟಿಯಲ್ಲಿ ಮುಂದೆ

ಇದ್ದು, ಇನ್ನು ಕೆಲವರು PSI ಆಗಿ ಮುಂಬಡ್ತಿ ಹೊಂದಿದ್ದು, ಯಾವ ಆದೇಶದಂತೆ ಮುಂಬಡ್ತಿ ನೀಡಲಾಗಿದೆ ; ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬೆಂಗಳೂರು ನಗರ ಮತ್ತು ರಾಜ್ಯದಲ್ಲಿ ASI ಗಳು ಪ್ರತಿನಿತ್ಯ ೧೨ ರಿಂದ ೧೮ ಗಂಟೆಗಳ ವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದು ಇವರಿಗೆ ವಾರದ ರಜೆ ಇದೆಯೇ ಅಥವಾ ಇಲ್ಲವೆ? (ಪೂರ್ಣ ಮಾಹಿತಿಯನ್ನು ಒದಗಿಸುವುದು)

## ವಿಮಾನ/ಹೆಲಿಕಾಪ್ಟರ್ ಹೊಂದಿರುವ ವಿಷಯದ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು ) :–**

೧೯೪೧ (೨೯೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ವಿಮಾನ/ಹೆಲಿಕಾಪ್ಟರ್ ಹೊಂದಿದೆಯೇ ; (ಮಾಹಿತಿ ನೀಡುವುದು)

(ಆ) ೨೦೨೩–೨೦೨೪, ೨೦೨೪–೨೦೨೫, ೨೦೨೫–೨೬ನೇ ಸಾಲಿನ (ಫೆಬ್ರವರಿ–೨೦೨೬ ಅಂತ್ಯದವರೆಗೆ) ಅವಧಿಯಲ್ಲಿ ಯಾವ ಉದ್ದೇಶಕ್ಕೆ ಸರ್ಕಾರವು ಬಾಡಿಗೆ ಆಧಾರದ ಮೇಲೆ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಖಾಸಗಿ ಸಂಸ್ಥೆ/ವ್ಯಕ್ತಿಗಳಿಂದ ಪಡೆದುಕೊಂಡಿದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ಅವಧಿಯಲ್ಲಿ ಬಾಡಿಗೆ ಪಡೆದುಕೊಂಡ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಮಾನ್ಯ ಮುಖ್ಯಮಂತ್ರಿಯವರು ಸಚಿವರು/ ಮುಖ್ಯ ಕಾರ್ಯದರ್ಶಿ ಸೇರಿದಂತೆ ಸರ್ಕಾರದ ಕಾರ್ಯಕ್ರಮಗಳ ಪ್ರಯಾಣಕ್ಕೆ ಉಪಯೋಗಿಸಿಕೊಂಡಿದ್ದಾರೆಯೇ ; (ಪ್ರವಾಸದ ವಿವರ ಒಟ್ಟು ಮೊತ್ತ ಮತ್ತು ಕಾರ್ಯಕ್ರಮಗಳ ವಿವರ ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ಅವಧಿಯಲ್ಲಿ ಸರ್ಕಾರವು ಕಾರ್ಯಕ್ರಮಗಳಿಗೆ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಬಳಕೆ ಮಾಡಿಕೊಂಡಿದ್ದರೆ ಪ್ರತಿ ಕಾರ್ಯಕ್ರಮದ ಪ್ರವಾಸಪಟ್ಟಿ ಇದಕ್ಕಾಗಿ ವಿಮಾನಕ್ಕೆ, ಹೆಲ್ಲಿಕಾಪ್ಟರ್‌ಗೆ ಪ್ರತಿ ಕಾರ್ಯಕ್ರಮಕ್ಕೆ ಸರ್ಕಾರದಿಂದ ಪಾವತಿ ಮಾಡಿರುವ ಬಾಡಿಗೆ ಮೊತ್ತದ ಸಂಪೂರ್ಣ ಮಾಹಿತಿ ಹಾಗೂ ಬಾಡಿಗೆ ಮೊತ್ತವನ್ನು ಯಾರಿಗೆ, ಯಾವ ಸಂಸ್ಥೆಗೆ ಅಥವಾ ಯಾವ ಕಂಪನಿಗೆ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ ; ಮೊತ್ತವನ್ನು ಪಾವತಿಸಿದ ದಿನಾಂಕದ ವಿವರವನ್ನು ಒದಗಿಸುವುದು ;

(ಉ) ಸದರಿ ಸಾಲಿನಲ್ಲಿ ಇಲ್ಲಿಯವರೆಗೂ ಬಾಡಿಗೆ ಪಡೆದುಕೊಂಡು ಈ ರೀತಿ ಪ್ರಯಾಣಿಸಿದ ವಿಮಾನ ಮತ್ತು ಹೆಲಿಕಾಪ್ಟರ್‌ಗೆ ಸರ್ಕಾರ ಪಾವತಿ ಮಾಡಿರುವ ವಾರ್ಷಿಕ ಮೊತ್ತವೆಷ್ಟು ? (೨೦೨೩ ರಿಂದ ಫೆಬ್ರವರಿ ೨೦೨೬ರವರೆಗೆ ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ನೋಟರಿಗಳ ನೋಂದಣಿ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ ) :–**

೧೯೪೨ (೨೨೪೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೋಟರಿಗಾಗಿ ನೋಂದಾಯಿಸಲು ಇರುವ ಮಾನದಂಡಗಳೇನು ; ಸಕ್ಷಮ ಪ್ರಾಧಿಕಾರ ಯಾರು ;ನೋಟರಿಗಾಗಿ ನೇಮಕಾತಿ ಮಾಡಲು ಅನುಸರಿಸುವ ಪ್ರಕ್ರಿಯೆ ಏನು ; ಅವಧಿ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಅವಧಿ ಪೂರ್ಣಗೊಂಡ ಬಳಿಕ 'ನೋಟರಿ ವೃತ್ತಿ ಪ್ರಮಾಣಪತ್ರ' ನವೀಕರಿಸಿಕೊಂಡು ನೋಟರಿಯಾಗಿ ಮುಂದುವರೆಯಲು ಯಾರಿಗೆ ಮನವಿ ಸಲ್ಲಿಸಬೇಕು ಪುನಃ ಎಷ್ಟು ವರ್ಷಗಳ ಅವಧಿಗೆ ನವೀಕರಣ ಮಾಡಿಕೊಡಲಾಗುತ್ತದೆ ; (ವಿವರ ನೀಡುವುದು )

(ಇ) ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿರುವ ನೋಂದಾಯಿತ ನೋಟರಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಜೀವಿತಾವಧಿಯಲ್ಲಿ ನೋಂದಾಯಿತ ನೋಟರಿಯು ಗರಿಷ್ಠ ಎಷ್ಟು ವರ್ಷಗಳ ಅವಧಿಗೆ ನೋಟರಿಯಾಗಿ ಕೆಲಸ ನಿರ್ವಹಿಸಲು ಅರ್ಹರಾಗಿರುತ್ತಾರೆ ;

(ಉ) ಒಂದು ಜಿಲ್ಲೆಯಲ್ಲಿ ಗರಿಷ್ಠ ಇಂತಿಷ್ಟು ಸಂಖ್ಯೆಯಲ್ಲೇ ನೋಟರಿಗಳು ಇರಬೇಕು ಎಂಬ ನಿಬಂಧನೆಗಳೇನಾದರೂ ಇದೆಯೇ ; ಇದ್ದಲ್ಲಿ, ನೋಟರಿ ನೇಮಕಾತಿ 'ಹುದ್ದೆಗಳ ಮಂಜೂರಾತಿ'ಗೆ ಅನುಸರಿಸಲಾಗುವ ಮಾನದಂಡಗಳೇನು ;

(ಊ) ನೋಟರಿಗಳಿಗೆ ಸರ್ಕಾರದಿಂದ ಸವಲತ್ತುಗಳೇನಾದರೂ ನೀಡಲಾಗುತ್ತದೆಯೇ ?

## ವ್ಹೀಲಿಂಗ್ ಹಾಗೂ ಅಪ್ರಾಪ್ತರು ವಾಹನ ಚಾಲನೆ ಮಾಡುವ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೯೪೩ (೨೨೫೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚಿನ ದಿನಗಳಲ್ಲಿ ಅಪ್ರಾಪ್ತರು ವಾಹನ ಚಾಲನೆ ಮಾಡುವ ಪ್ರಕರಣಗಳ ಜೊತೆಗೆ ವಾಹನಗಳ ವ್ಹೀಲಿಂಗ್ ಪ್ರಕರಣಗಳು ಹೆಚ್ಚುತ್ತಿದ್ದು, ಸಾರ್ವಜನಿಕರ ಸುರಕ್ಷತೆಗೆ ಅಪಾಯಕಾರಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇಂತಹ ಕಾನೂನುಬಾಹಿರ ದಂಡನೀಯ ಅಪರಾಧ ಪ್ರಕರಣಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಈ ಬಗ್ಗೆ ಕಾನೂನು ಏನು ಹೇಳುತ್ತದೆ ; (ಸಂಪೂರ್ಣ ವಿವರ ನೀಡುವುದು)

(ಇ) ರಾಜ್ಯದಲ್ಲಿ ಕಳೆದ ೩ ವರ್ಷಗಳಲ್ಲಿ ಅಪ್ರಾಪ್ತರು ವಾಹನ ಚಾಲನೆ ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲೆ, ವರ್ಷ, ದಾಖಲಾದ ಪ್ರಕರಣಗಳ ಸಂಖ್ಯೆ, ಪೋಷಕರು/ಮಾಲೀಕರ ವಿರುದ್ಧ ಕ್ರಮ ಜರುಗಿಸಿದ ಪ್ರಕರಣಗಳ ಸಂಖ್ಯೆ ಹಾಗೂ ಸಂಗ್ರಹಿಸಿದ ದಂಡ ಮೊತ್ತದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಈ) ಮೇಲ್ಕಂಡ ಅವಧಿಯಲ್ಲಿ ವ್ಹೀಲಿಂಗ್ ಪ್ರಕರಣಗಳ ಸಂಬಂಧ ದಾಖಲಾಗಿರುವ ದೂರು ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲೆ,ವರ್ಷ ದಾಖಲಾದ ಪ್ರಕರಣಗಳ ಸಂಖ್ಯೆ. ಪೋಷಕರು/ಮಾಲೀಕರ ವಿರುದ್ಧ ಕ್ರಮ ಜರುಗಿಸಿದ ಪ್ರಕರಣಗಳ ಸಂಖ್ಯೆ ಹಾಗೂ ಸಂಗ್ರಹಿಸಿದ ದಂಡ ಮೊತ್ತದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಉ) ಸದರಿ ಅವಧಿಯಲ್ಲಿ ಅಪ್ರಾಪ್ತರ ವಾಹನ ಚಾಲನೆ ಮತ್ತು ವ್ಹೀಲಿಂಗ್ ಪ್ರಕರಣಗಳಿಂದಾಗಿ ಉಂಟಾಗಿರುವ ಜೀವ ಹಾನಿ ಪ್ರಕರಣಗಳ ಸಂಖ್ಯೆ ಎಷ್ಟು;

(ಊ) ಶಾಲಾ–ಕಾಲೇಜುಗಳಲ್ಲಿ ಸಂಚಾರಿ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು ?

## ರಾಜ್ಯದಲ್ಲಿರುವ ಪರಿಶಿಷ್ಟ ಪಂಗಡದ ಸಮುದಾಯಗಳ ಸೌಲಭ್ಯ ಮತ್ತು ಬೇಡಿಕೆಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೪೪ (೨೨೩೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಜಿಲ್ಲೆಗಳಲ್ಲಿರುವ ವಿವಿಧ ಪರಿಶಿಷ್ಟ ಪಂಗಡದ ಸರ್ಕಾರದ ಅನುಸೂಚಿತ ಪಟ್ಟಿಯಲ್ಲಿರುವ ಸಮುದಾಯದ ಕುಟುಂಬಗಳು, ಜನಸಂಖ್ಯೆ ಹೊಂದಿರುವ ಸೌಲಭ್ಯಗಳು, ಶೈಕ್ಷಣಿಕ ಮಟ್ಟ ಮತ್ತಿತರ

ಕುಲಶಾಸ್ತ್ರೀಯ ಮಾಹಿತಿಗಳೇನು ; (ಈ ಸಮುದಾಯಗಳ ಕುಟುಂಬಗಳ ಮತ್ತು ಜನಸಂಖ್ಯೆ ಜಿಲ್ಲಾವಾರು ವಿವರಗಳೇನು)

(ಆ) ಈ ಸಮುದಾಯಗಳಿಗೆ ಸಂಬಂಧಿಸಿದ ಕಲ್ಯಾಣ ಯೋಜನೆಗಳ ಅನುಷ್ಠಾನದಲ್ಲಿ ಕುಟುಂಬಗಳ ನಿಖರ ಸಂಖ್ಯೆಯನ್ನು ಆಧಾರವಾಗಿ ಬಳಸಲಾಗುತ್ತಿದೆಯೇ ; ಮುಂದಿನ ಅವಧಿಯಲ್ಲಿ ಪರಿಶಿಷ್ಟ ಪಂಗಡದ ಕುಟುಂಬಗಳ ನವೀಕೃತ ಡಿಜಿಟಲ್ ಡೇಟಾಬೇಸ್ ಸಿದ್ಧಪಡಿಸಲು ಸರ್ಕಾರದ ಕ್ರಮಗಳೇನು ;

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಪರಿಶಿಷ್ಟ ಪಂಗಡದ ಕುಟುಂಬಗಳೆಷ್ಟು : ಯಾವ ಪ್ರದೇಶಗಳಲ್ಲಿ ವಾಸ್ತವ್ಯ ಹೊಂದಿದ್ದಾರೆ ; ಇವರ ಆರ್ಥಿಕ/ಸಾಮಾಜಿಕ/ಶೈಕ್ಷಣಿಕ ಸ್ಥಿತಿಗತಿ ಕುರಿತು ಪ್ರಸ್ತುತ ಲಭ್ಯವಿರುವ ಮಾಹಿತಿಗಳೇನು ;

(ಈ) ಕರಾವಳಿಯ ಮೂಲನಿವಾಸಿಗಳಾದ ಕೊರಗ ಸಮುದಾಯದ ಬೇಡಿಕೆಗಳ ಕುರಿತು ಸರ್ಕಾರದ ಕ್ರಮಗಳೇನು ; ಇನ್ನೂ ಹಲವು ಕುಟುಂಬಗಳು ಜಾಗದ/ಇತರ ದಾಖಲೆಗಳ ಕೊರತೆಯಿಂದ ಮತ್ತು ಬಡತನದಿಂದ ಸಮಾಜ ಮುಖ್ಯವಾಹಿನಿಯಿಂದ ಹೊರಗುಳಿದು ಗುಡಿಸಲು/ತರ್ಪಾಲಿನ ಹೊದಿಕೆಯ ಮನೆಗಳಲ್ಲಿ ವಾಸಿಸುತ್ತಿರುವ ಬಗ್ಗೆ ಸರ್ಕಾರ ಗಮನಿಸಿ ಪೂರಕ ಕ್ರಮವಹಿಸದಿರಲು ಕಾರಣವೇನು; ಈ ಕುರಿತು ಇಲಾಖೆಯಿಂದ ಕೈಗೊಳ್ಳುವ ಕಾಲಮಿತಿಯ ಕ್ರಮಗಳೇನು ;

(ಉ) ರಾಜ್ಯದಲ್ಲಿ ಎಷ್ಟು ಪರಿಶಿಷ್ಟ ಪಂಗಡದವರಿಗೆ ಸಮುದಾಯ ಭವನಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ ; ಬೈಂದೂರು ತಾಲ್ಲೂಕಿನ ಮುದೂರು ಗ್ರಾಮದ ಉದಯನಗರದಲ್ಲಿರುವ ಕೊರಗ ಸಮುದಾಯದ ಸಭಾಭವನವು ಅಕ್ರಮ ಚಟುವಟಿಕೆಗಳು ಹಾಗೂ ಮಾದಕ ವಸ್ತು ಸೇವನೆಗೆ ಕೇಂದ್ರವಾಗಿರುವ ಕುರಿತು ಇಲಾಖೆ

ಗಮನಿಸಿದೆಯೇ ; ಈ ಬಗ್ಗೆ ಪೊಲೀಸ್ ಇಲಾಖೆ ವಿವಿಧ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ರಾಜ್ಯದಲ್ಲಿ ಅಂತರ್ಜಲ ನಿರ್ವಹಣೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೪೫ (೨೨೪೦) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಅಂತರ್ಜಲ ಮಟ್ಟ ಯಾವ ಹಂತದಲ್ಲಿದೆ ; ಅಂತರ್ಜಲ ಮಟ್ಟವನ್ನು ಪ್ರತಿವರ್ಷ ನಿಯಮಿತವಾಗಿ ಗಮನಿಸಿ ವರದಿ ತಯಾರಿಸಲಾಗುತ್ತಿದೆಯೇ ; ಇದ್ದರೆ, ಕಳೆದ ಮೂರು ವರ್ಷಗಳ ಜಿಲ್ಲಾವಾರು ಅಂತರ್ಜಲ ಮಟ್ಟದ ವಿವರಗಳೇನು ;

(ಆ) ವಿವಿಧ ಜಿಲ್ಲೆಗಳಲ್ಲಿ ಬೀಳುತ್ತಿರುವ ಮಳೆಯ ಪ್ರಮಾಣವು ಅಂತರ್ಜಲ ಮಟ್ಟದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ; ಮಳೆ ಕೊರತೆಯ ಪ್ರದೇಶಗಳಲ್ಲಿ ಅಂತರ್ಜಲ ಮಟ್ಟ ಸುಧಾರಣೆಗಾಗಿ ಯಾವ ವಿಶೇಷ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ;

(ಇ) ಕರಾವಳಿ ಭಾಗದ ಕಿಂಡಿ ಅಣೆಕಟ್ಟುಗಳ ಸಮರ್ಪಕ ನಿರ್ವಹಣೆ ಆಗದಿರುವ ಕುರಿತು ಇಲಾಖೆಯು ಗಮನಿಸಿದೆಯೇ ; ಈ ನಿರ್ವಹಣಾ ದೋಷಗಳಿಗೆ ಕಾರಣವೇನು ; ಯಾವಾಗ ಸರಿಪಡಿಸಲಾಗುವುದು ;

(ಈ) ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಯಾವ ಯಾವ ತಾಲ್ಲೂಕುಗಳಲ್ಲಿ ಅಂತರ್ಜಲ ಕುಸಿತ ಕಂಡುಬಂದಿದೆ ; ಅದಕ್ಕೆ ಕಾರಣಗಳನ್ನು ಇಲಾಖೆ ಕಂಡುಕೊಂಡಿದೆಯೇ ;

(ಉ) ಈ ಕುರಿತು ಪತ್ರಿಕಾ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳು ಇಲಾಖೆಯ ಗಮನಕ್ಕೆ ಬಂದಿದೆಯೇ ; ಈ ಹಿನ್ನಲೆಯಲ್ಲಿ ಅಂತರ್ಜಲ ಮಟ್ಟ ಸುಧಾರಣೆಗಾಗಿ ಹಾಗೂ ಮಳೆ ನೀರು ಕೊಯ್ಲು ಮೂಲಕ ಭೂ ಜಲ ಮಟ್ಟವನ್ನು ಹೆಚ್ಚಿಸಲು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಯೋಜನೆಗಳು ಮತ್ತು ಅವುಗಳಿಗೆ ಮೀಸಲಾದ ಅನುದಾನ ಎಷ್ಟು ;

## ರಾಜ್ಯ ಪೊಲೀಸ್ ಇಲಾಖೆಯ ನಿಯಮಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೪೬ (೨೨೪೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಒಂದು ವಲಯದಿಂದ ಇನ್ನೊಂದು ವಲಯಕ್ಕೆ ಅಥವಾ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ವರ್ಗಾವಣೆ ಬಯಸುವ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳಿಗೆ ವರ್ಷದ ಸೇವಾ ಜ್ಯೇಷ್ಠತೆ ಬಿಟ್ಟುಕೊಡಬೇಕೆಂಬ ಷರತ್ತು ವಿಧಿಸಲಾಗಿದೆಯೇ, ಈ ಕುರಿತು ಜಾರಿಯಲ್ಲಿರುವ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು ೨೦೨೨ ರಲ್ಲಿನ ತಿದ್ದುಪಡಿ ಯಾವ ದಿನಾಂಕದಿಂದ ಜಾರಿಯಲ್ಲಿದೆ ;

(ಆ) ಏಳು ವರ್ಷ ಸೇವೆ ಪೂರೈಸಿದ ನಂತರ ವರ್ಗಾವಣೆಗೆ ಅರ್ಜಿ ಸಲ್ಲಿಸುವ ಎಸ್‌ಐಗಳು, ಬೇರೊಂದು ವಲಯಕ್ಕೆ ವರ್ಗಾವಣೆಗೊಂಡಲ್ಲಿ ಸೇವಾ ಜ್ಯೇಷ್ಠತೆ ಬಿಟ್ಟುಕೊಡಬೇಕೆಂಬ ನಿಯಮಕ್ಕೆ ಕಾರಣವೇನು ; ಈ ನಿಯಮದಿಂದ ಎಸ್‌ಐ ವರ್ಗದ ಅಧಿಕಾರಿಗಳಿಗೆ ಉಂಟಾಗುತ್ತಿರುವ ಅಸಮಾದಾನ ಮತ್ತು ಕಾನೂನು ಹೋರಾಟದ ಹಿನ್ನೆಲೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಪತಿ–ಪತ್ನಿ ಪ್ರಕರಣಗಳಲ್ಲಿ ೭ ವರ್ಷ ಸೇವೆ ಪೂರೈಸಿದ ಬಳಿಕವೇ ವರ್ಗಾವಣೆಗೆ ಅವಕಾಶ ನೀಡುವ ನಿಯಮ ಮಾನವೀಯ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಸಮಂಜಸವೇ ವರ್ಗಾವಣೆಗೆ ಜ್ಯೇಷ್ಠತೆ ಬಿಟ್ಟುಕೊಡಬೇಕೆಂಬ ನಿಯುಮವಿದ್ದಲ್ಲಿ, ಅದೇ ನಿಯಮವನ್ನು ಮುಂಬಡ್ತಿಗೆ ಅನ್ವಯಿಸದಿರಲು ಕಾರಣವೇನು ;

(ಈ) ಸೇವಾ ಜ್ಯೇಷ್ಠತೆಗೆ ಧಕ್ಕೆಯಾಗದಂತೆ ವರ್ಗಾವಣೆಗೆ ಅವಕಾಶ ಕಲ್ಪಿಸುವಂತೆ ಹಿಂದಿನ ನಿಯಮಾವಳಿಯನ್ನು ಪುನರ್‌ಸ್ಥಾಪಿಸಲು ಸರ್ಕಾರ ಪರಿಗಣಿಸುತ್ತಿದೆಯೇ ; ಯಾವ ಕಾಲಮಿತಿಯೊಳಗೆ ಈ ಕುರಿತು ಕ್ರಮವಹಿಸಲಾಗುವುದು ;

(ಉ) ಪೊಲೀಸ್ ಸಿಬ್ಬಂದಿಗಳು ಈಗಾಗಲೇ ರಜೆ ನಿರಾಕರಣೆ, ಸಿಬ್ಬಂದಿ ಕೊರತೆ. ಬಹು ವಿಧ ಜವಾಬ್ದಾರಿ ಇತ್ಯಾದಿ ಹಲವು ಒತ್ತಡಗಳೊಂದಿಗೆ ಸೇವೆ ಸಲ್ಲಿಸುತ್ತಿದ್ದು ಸೇವಾ ನಿಯಮಗಳನ್ನು ಪೊಲೀಸ್ ಸ್ನೇಹಿಯಾಗಿ ಮಾರ್ಪಡಿಸುವ ಬಗ್ಗೆ ಸರ್ಕಾರ ಯಾವ ಕ್ರಮವಹಿಸಲುದ್ದೇಶಿಸಿದೆ ?

## ರಾಜ್ಯದಲ್ಲಿ ಹೋಮ್ ಸ್ಟೇಗಳ ನಿಯಮಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೪೭ (೨೨೪೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕದಲ್ಲಿ ಹೋಮ್ ಸ್ಟೇಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳು ಮತ್ತು ನಿಯಮಾವಳಿಗಳೇನು ; ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಸ್ತುತ ಎಷ್ಟು ಹೋಮ್ ಸ್ಟೇಗಳು ಅಧಿಕೃತವಾಗಿ ನೋಂದಾಯಿತವಾಗಿವೆ ;

(ಆ) ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಹೊಲನಗದ್ದೆ ಹಾಗೂ ಬಾಡ ಗ್ರಾಮಗಳಲ್ಲಿ ಅಧಿಕೃತ ಮತ್ತು ಅನಧಿಕೃತ ಹೋಮ್ ಸ್ಟೇಗಳ ವಿವರವೇನು ; ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ಹೋಮ್ ಸ್ಟೇಗಳಿಗೆ ನೋಂದಣಿಯೊಂದಿಗೆ ಅನುಮತಿ ನೀಡಲಾಗಿದೆ ; ಸಂಬಂಧಿತ ಮಾಲೀಕರು ಹಾಜರುಪಡಿಸಿದ ದಾಖಲೆಗಳ ವಿವರವೇನು ;

(ಇ) ಹೋಮ್ ಸ್ಟೇ ಅನುಮತಿಗಾಗಿ ಮಾಲೀಕರು ಇಲಾಖೆಗೆ ಸಲ್ಲಿಸಬೇಕಾದ ಕಡ್ಡಾಯ ದಾಖಲೆಗಳೇನು ; ಯಾವ ಇಲಾಖೆಗಳ ನಿರಾಕ್ಷೇಪಣಾ ಪತ್ರಗಳ ಅಗತ್ಯವಿದೆ ಹೋಮ್ ಸ್ಟೇಗಳಿಗೆ ಎಷ್ಟು ವರ್ಷದ ಅವಧಿಗೆ ಅನುಮತಿ ನೀಡಲಾಗುತ್ತದೆ ; ನವೀಕರಣ ಪ್ರಮಾಣೀಕೃತ ಕಾರ್ಯವಿಧಾನ ಯಾವುದು ;

(ಈ) ಕಳೆದ ಮೂರು ವರ್ಷಗಳಲ್ಲಿ ಹೋಮ್ ಸ್ಟೇಗಳ ಕುರಿತುಎಷ್ಟು ದೂರುಗಳು ದಾಖಲಾಗಿವೆ ; ಅನಧಿಕೃತ ಹೋಮ್ ಸ್ಟೇಗಳಲ್ಲಿ ನಡೆಯುತ್ತಿರುವ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಬಂದದೂರಿನ ಮೇಲೆ ಇಲಾಖೆ ಯಾವ ಕ್ರಮಕೈಗೊಂಡಿದೆ; ಹೋಮ್ ಸ್ಟೇಗಳನ್ನು ವಾರ್ಷಿಕವಾಗಿ ತಪಾಸಣೆ ನಡೆಸಲು ಹಾಗೂ ಅನಧಿಕೃತ ಹೋಮ್ ಸ್ಟೇಗಳನ್ನು ಮುಚ್ಚಿಸಲು ಕೈಗೊಂಡಿರುವಕ್ರಮಗಳು ಯಾವ ಹಂತದಲ್ಲಿವೆ ;

(ಉ) ಹೋಮ್ ಸ್ಟೇಗಳನ್ನು ಪ್ರವಾಸೋದ್ಯಮದಲ್ಲಿ ಪೂರಕವಾಗಿ ಉಪಯೋಗಿಸಲು ಹಾಗೂ ಸುರಕ್ಷಿತ ಮತ್ತು ನಿಯಮಾನುಸಾರ ವ್ಯವಹಾರ ನಡೆಸಲು ಪ್ರಾಮಾಣೀಕೃತ ಕಾರ್ಯವಿಧಾನ ರೂಪಿಸುವ ಬಗ್ಗೆ ಸರ್ಕಾರ ಯಾವ ಕಾಲಮಿತಿಯೊಳಗೆ ಕ್ರಮವಹಿಸುತ್ತದೆ ?

## ಕೋಮು ಹಿಂಸೆ ನಿಗ್ರಹ ವಿಶೇಷ ಕಾರ್ಯಪಡೆ ರಚನೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೧೯೪೪ (೨೨೫೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಜಿಲ್ಲೆಯಲ್ಲಿ 'ಕೋಮು ಹಿಂಸೆ ನಿಗ್ರಹ ವಿಶೇಷ ಕಾರ್ಯಪಡೆ' ರಚಿಸಲಾಗಿದೆಯೇ ; ಅಥವಾ ರಚಿಸಲು ಉದ್ದೇಶಿಸಲಾಗಿದೆಯೇ ? (ಸಂಪೂರ್ಣ ವಿವಿರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಕೋಮು ಘರ್ಷಣೆಗಳ (ಗಣೇಶ ಹಬ್ಬದ ಸಂದರ್ಭಸೇರಿದಂತೆ) ಸಂಖ್ಯೆ ಎಷ್ಟು ; (ಜಿಲ್ಲಾವಾರು ಹಾಗೂ ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಮೇಲ್ಕಂಡ ಅವಧಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೊಮು ಸಂಘರ್ಷದ ಹಿನ್ನೆಲೆಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಎಷ್ಟು ಮಂದಿ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ ; ಪ್ರಸ್ತುತ ಈ ಪ್ರಕರಣಗಳು ಯಾವ ಹಂತದಲ್ಲಿ ವಿಚಾರಣೆಯಲ್ಲಿವೆ ; ಈ ಘಟನೆಗಳಲ್ಲಿ ಕರ್ತವ್ಯಲೋಪ ಹಿನ್ನೆಲೆಯಲ್ಲಿ ಯಾವುದಾದರೂ ಸರ್ಕಾರಿ ನೌಕರರ ವಿರುದ್ಧ ಕ್ರಮ ಜರುಗಿಸಿದೆಯೇ ; (ಮೊಕದ್ದಮೆ ಸಂಖ್ಯೆಯೊಂದಿಗೆ ವರ್ಷವಾರು ಸಂಪೂರ್ಣ ವಿವರ ನೀಡುವುದು)

(ಈ) ಸಾರ್ವಜನಿಕರಿಗೆ ಕೋಮು ಸಂಘರ್ಷದ ಹಿನ್ನೆಲೆಯಲ್ಲಿ ಉಂಟಾದ ಆರ್ಥಿಕ ನಷ್ಟದ ಪ್ರಮಾಣ ಎಷ್ಟು ; ಸಂತ್ರಸ್ತರಿಗೆ ವಿತರಿಸಲಾಗಿರುವ ಪರಿಹಾರ ಮೊತ್ತ ಎಷ್ಟು ; (ವರ್ಷವಾರು ಸಂಪೂರ್ಣ ವಿವರ ನೀಡುವುದು)

(ಉ) ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ಈವರೆವಿಗೂ ಕೋಮು ಹಿಂಸೆ ನಿಗ್ರಹ ವಿಶೇಷ ಕಾರ್ಯಪಡೆ ರಚಿಸಲಾಗಿದೆ ; ಕಾರ್ಯಪಡೆ

ರಚಿಸಿ ನಂತರ ಈ ಜಿಲ್ಲೆಗಳಲ್ಲಿನ ಪರಿಸ್ಥಿತಿ ಹೇಗಿದೆ ; (ಸಂಪೂರ್ಣ ವಿವರ ನೀಡುವುದು)

## ಅಪ್ರಾಪ್ತರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೯೪೯ (೨೨೫೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೧ ರಿಂದ ಈವರೆವಿಗೆ ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ದಾಖಲಾಗಿರುವ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣ (Rape, Dowry deaths, Dowry Prohibition, Molestation and Cruelty by husband)ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವರ್ಷವಾರು ಮಾಹಿತಿ ನೀಡುವುದು)

(ಆ) ಈ ಪೈಕಿ ಎಷ್ಟು ಅಪರಾಧ ಪ್ರಕರಣಗಳು ಇತ್ಯರ್ಥವಾಗಿವೆ ; ಇದರಲ್ಲಿ ಸಾಬೀತಾದ ಮತ್ತು ಸಾಬೀತಾಗದ ಹಾಗೂ ವಿಚಾರಣೆ ಹಂತದಲ್ಲಿರುವ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ೨೦೨೩ ರಿಂದ ಈವರೆವಿಗೆ ಸದರಿ ಜಿಲ್ಲೆಗಳಲ್ಲಿ ದಾಖಲಾಗಿರುವ ಮಕ್ಕಳ ವಿರುದ್ಧದ ಅಪರಾಧ ಪ್ರಕರಣ (POSCO, Juvenile Justice, Child Labour Act and Child Marriage Act) ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)

(ಈ) ಈ ಪೈಕಿ ಎಷ್ಟು ಅಪರಾಧ ಪ್ರಕರಣಗಳು ಇತ್ಯರ್ಥವಾಗಿವೆ ; ಇದರಲ್ಲಿ ಸಾಬೀತಾದ ಮತ್ತು ಸಾಬೀತಾಗದ ಹಾಗೂ ವಿಚಾರಣೆ ಹಂತದಲ್ಲಿರುವ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ೨೦೨೧ ರಿಂದ ಸದರಿ ಜಿಲ್ಲೆಗಳಲ್ಲಿ ಲೈಂಗಿಂಕ ದೌರ್ಜನ್ಯಕ್ಕೆ ಒಳಗಾದ ಬಾಲಕರು ಹಾಗೂ ಬಾಲಕಿಯರ ಸಂಖ್ಯೆ ಎಷ್ಟು; (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)

(ಊ) ಮಹಿಳೆಯರು ಮತ್ತು ಅಪ್ರಾಪ್ತರ ಮೇಲಿನ ದೌರ್ಜನ್ಯ ಮತ್ತು ಅಪರಾಧಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

## ಸಂರಕ್ಷಿತ ಸ್ಮಾರಕಗಳ ಡಿಜಿಟಲ್ ದಾಖಲೀಕರಣ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೯೫೦ (೨೨೫೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಂರಕ್ಷಿತ ಸ್ಮಾರಕಗಳನ್ನು ೩D ಲೇಸರ್ ಸ್ಕ್ಯಾನಿಂಗ್ ಮೂಲಕ ಡಿಜಿಟಲ್ ದಾಖಲೀಕರಣ ಮಾಡುವ ಕಾರ್ಯ ಪೂರ್ಣಗೊಂಡಿದೆಯೇ ;

(ಆ) ರಾಜ್ಯದಲ್ಲಿ ಒಟ್ಟು ಎಷ್ಟು ಸಂರಕ್ಷಿತ ಸ್ಮಾರಕಗಳನ್ನು ಡಿಜಿಟಲ್ ದಾಖಲೀಕರಣ ಮಾಡಲು ಉದ್ದೇಶಿಸಲಾಗಿತ್ತು ; ಈ ಪೈಕಿ ದಾಖಲೀಕರಣ ಮಾಡಿರುವ ಸಂರಕ್ಷಿತ ಸ್ಮಾರಕಗಳ ಸಂಖ್ಯೆಯನ್ನು ಕಂದಾಯ ವಿಭಾಗವಾರು ನೀಡುವುದು ; (ಕಂದಾಯ ವಿಭಾಗ, ಸಂರಕ್ಷಿತ ಸ್ಮಾರಕಗಳ ಸಂಖ್ಯೆ, ಡಿಜಿಟಲೀಕರಣ ಮಾಡಿದ ಸ್ಮಾರಕಗಳ ಸಂಖ್ಯೆ, ಶೇಕಡವಾರು ಪ್ರಗತಿ, ಭರಿಸಲಾದ ವೆಚ್ಚ–ಸಂಪೂರ್ಣ ಮಾಹಿತಿ ನೀಡುವುದು)

(ಇ) ಸಂರಕ್ಷಿತ ಸ್ಮಾರಕಗಳ ಡಿಜಿಟಲೀಕರಣ ಯೋಜನೆ ಉದ್ದೇಶವೇನು ; ಡಿಜಿಟಲೀಕರಣವನ್ನು ಎಂದಿನಿಂದ ಕೈಗೊಳ್ಳಲಾಗಿದೆ ; ಬಾಕಿ

ಇದ್ದಲ್ಲ, ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಲು ಯೋಚಿಸಲಾಗಿದೆ ; (ವಿವರ ನೀಡುವುದು)

(ಈ) ವಸ್ತು ಸಂಗ್ರಹಾಲಯಗಳಲ್ಲಿ ಇರುವ ಪ್ರಾಚ್ಯಾವಶೇಷಗಳನ್ನೂ ೩D ಲೇಸರ್ ಸ್ಕ್ಯಾನಿಂಗ್ ಮೂಲಕ ಡಿಜಿಟಲ್ ದಾಖಲೀಕರಣ ಕೈಗೊಳ್ಳಲಾಗಿದೆ ;

(ಉ) ಇದ್ದಲ್ಲಿ, ಒಟ್ಟು ಎಷ್ಟು ವಸ್ತು ಸಂಗ್ರಹಾಲಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ; ಯಾವುವು ; ಅಂದಾಜು ಎಷ್ಟು ಪ್ರಾಚ್ಯಾವಶೇಷಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ ; ಇದಕ್ಕಾಗಿ ಮೀಸಲಿರಿಸಿರುವ ಮೊತ್ತ ಎಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ಇಲಾಖೆಗಳಲ್ಲಿ ಅಧಿಕಾರಿ/ಸಿಬ್ಬಂದಿಗಳ ಜ್ಯೇಷ್ಠತಾ ಪಟ್ಟಿ ನಿಗದಿ ಮಾಡುವಾಗ ಕಾನೂನು ಇಲಾಖೆಯ ಸಲಹೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೫೧ (೨೨೪೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನೇರ ನೇಮಕಾತಿಯಾದ ಅಧಿಕಾರಿ ಸಿಬ್ಬಂದಿಗಳ ಪೈಕಿ ಇಲ್ಲಿಯವರೆಗೆ ಪದೋನ್ನತಿ ಹೊಂದಿದ ಅಧಿಕಾರಿ ಸಿಬ್ಬಂದಿಗಳೆಷ್ಟು ; ಅಂತಹ ಇಲಾಖೆಗಳು ಯಾವುವು ; ಅದಕ್ಕೆ ಕಾರಣಗಳೇನು ;

(ಆ) ವಿವಿಧ ಇಲಾಖೆಗಳಲ್ಲಿ ನೇರ ನೇಮಕಾತಿ ಮೂಲಕ ನೇಮಕಾತಿಯಾದ ಅಭ್ಯರ್ಥಿಗಳ ಜ್ಯೇಷ್ಠತೆ ನಿಗದಿ ಮಾಡುವ ಸಂದರ್ಭದಲ್ಲಿ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳು ಮತ್ತು ಮಾರ್ಗಸೂಚಿಗಳೇನು ;

(ಇ) ಜ್ಯೇಷ್ಠತೆ ನಿಗದಿ ಮಾಡುವ ಹಂತದಲ್ಲಿ ಕಾನೂನು ಇಲಾಖೆಯ ಜವಾಬ್ದಾರಿ ಏನು ಹಾಗೂ ಕಾನೂನು ಇಲಾಖೆಯ ಅಭಿಪ್ರಾಯ

ಕಡ್ಡಾಯವಾಗಿ ಪಡೆಯಬೇಕೆಂಬ ನಿಯಮವಿದೆಯೇ ; ಇದ್ದರೆ ಯಾವ ಇಲಾಖೆಗಳು ಕಳೆದ ಮೂರು ವರ್ಷಗಳಲ್ಲಿ ಈ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಪಡೆದಿವೆ ;

(ಈ) ನೇರ ನೇಮಕಗೊಂಡ ಅಭ್ಯರ್ಥಿಗಳ ಜ್ಯೇಷ್ಠತೆ ಪಟ್ಟಿ ಕುರಿತು ವಿವಿಧ ನ್ಯಾಯಾಲಯಗಳು ನೀಡಿರುವ ತೀರ್ಪುಗಳ/ಆದೇಶಗಳ ಸಾರಾಂಶವೇನು ; ಆ ಆದೇಶಗಳ ಅನುಸರಣೆ ಕುರಿತು ಎಲ್ಲಾ ಇಲಾಖೆಗಳಿಗೆ ಕಾನೂನು ಇಲಾಖೆಯಿಂದ ಸಮಗ್ರ ಮಾರ್ಗದರ್ಶನ ನೀಡಲಾಗಿದೆಯೇ ;

(ಉ) ನೇರ ನೇಮಕಾತಿಯ ಸಂದರ್ಭದಲ್ಲಿ ದಾಖಲಾತಿ ಪರಿಶೀಲನೆಗೆ ಹಾಜರಾಗದವರು ಅಥವಾ ನೇಮಕಾತಿ ಪತ್ರ ಪಡೆದರೂ ಹುದ್ದೆಗೆ ವರದಿಯಾಗದವರ ಸ್ಥಾನಕ್ಕೆ ಮೆರಿಟ್ ಪಟ್ಟಿಯಲ್ಲಿರುವ ಮುಂದಿನ ಅನುಕ್ರಮದ ಅಭ್ಯರ್ಥಿಗೆ ನೇಮಕಾತಿ ನೀಡಿದಲ್ಲಿ, ಜ್ಯೇಷ್ಠತಾ ಪಟ್ಟಿಯಲ್ಲಿ ಅವರಿಗೆ ಯಾವ ರೀತಿಯಲ್ಲಿ ಅನುಕ್ರಮ ಸಂಖ್ಯೆ ನೀಡಬೇಕು ಎಂಬ ಕುರಿತು ಜಾರಿಯಲ್ಲಿರುವ ನಿಯಮಗಳಾವುವು ;

(ಊ) ರಾಜ್ಯದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಜ್ಯೇಷ್ಠತೆಯ ನಿರ್ಧಾರದಲ್ಲಿ ಏಕತೆಯ ಕೊರತೆಯಿಂದ ವಿವಿಧ ಇಲಾಖೆಗಳ ವಿರುದ್ಧ ನ್ಯಾಯಾಲಯಗಳಲ್ಲಿ ಪ್ರಕರಣಗಳು ಹೆಚ್ಚುತ್ತಿರುವುದು ನಿಜವೇ ; ಈ ಕುರಿತು ಮುಂದಿನ ದಿನಗಳಲ್ಲಿ ಸಮಸ್ಯೆ ಉದ್ಭವವಾಗದಂತೆ ಕಾನೂನು ಇಲಾಖೆ ಕೈಗೊಂಡಿರುವ ಮುನ್ನೆಚ್ಚರಿಕಾ ಕ್ರಮಗಳು ಯಾವುವು ?

## ಮೈಸೂರು ನಗರದಲ್ಲಿ ಪೊಲೀಸರು ಹಮ್ಮಿಕೊಂಡಿರುವ 'ವಿಮುಕ್ತಿ' ಮಾದಕ ವಸ್ತು ಮುಕ್ತ ಅಭಿಯಾನದ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೫೨ (೨೨೫೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರವನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿ ಮಾಡಲು ಪೊಲೀಸ್ ಇಲಾಖೆಯು 'ವಿಮುಕ್ತಿ' ಎಂಬ ವಿಶೇಷ ಅಭಿಯಾನವನ್ನು ಹಮ್ಮಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಅಭಿಯಾನದ ಅಡಿಯಲ್ಲಿ ಕಳೆದ ಕೆಲವು ದಿನಗಳಲ್ಲಿ ಎಷ್ಟು ಲಾಡ್ಜ್‌ಗಳು, ಪಿ.ಜಿ (PG)ಗಳು ಮತ್ತು ಪಾರ್ಕ್‌ಗಳ ಮೇಲೆ ದಾಳಿ ನಡೆಸಲಾಗಿದೆ ; ಈ ಪೈಕಿ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಎಷ್ಟು ಜನರನ್ನು ಬಂಧಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸಾರ್ವಜನಿಕರು ಮಾದಕ ವಸ್ತುಗಳ ಮಾರಾಟ ಅಥವಾ ಸೇವನೆಯ ಬಗ್ಗೆ ದೂರು ನೀಡಲು ಆರಂಭಿಸಿರುವ WhatsApp ಸಂಖ್ಯೆ (8277948080)ಗೆ ಈವರೆಗೆ ಎಷ್ಟು ದೂರುಗಳು ಬಂದಿವೆ ಮತ್ತು ಆ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳೇನು ;

(ಈ) ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಮಾದಕ ವ್ಯಸನದ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರವು ಮೈಸೂರಿನಾದ್ಯಂತ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ಮತ್ತು ಇದನ್ನು ರಾಜ್ಯದ ಇತರ ನಗರಗಳಿಗೂ ವಿಸ್ತರಿಸುವ ಯೋಜನೆ ಸರ್ಕಾರದ ಮುಂದಿದೆಯೇ ?

## ಪೊಲೀಸ್ ಸಿಬ್ಬಂದಿಗಳ ಮೇಲಿನ ಕೆಲಸದ ಒತ್ತಡ ಮತ್ತು 'ಆಸರೆ' ಯೋಜನೆಗೆ ವ್ಯಕ್ತವಾಗಿರುವ ಆಕ್ಷೇಪಗಳ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೫೩ (೨೨೫೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಪೊಲೀಸ್ ಇಲಾಖೆ ಜಾರಿಗೆ ತಂದಿರುವ 'ಆಸರೆ' ಯೋಜನೆಯಡಿ ಹಿರಿಯ ನಾಗರೀಕರ ಮನೆಗೆ ಹೋಗಿ ವೈಯಕ್ತಿಕ ಕೆಲಸಗಳನ್ನು (ಕಾಂಪೌಂಡ್ ಸ್ವಚ್ಚತೆ ಇತ್ಯಾದಿ) ಮಾಡುವಂತೆ ಸಿಬ್ಬಂದಿಗಳಿಗೆ ಸೂಚಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಈಗಾಗಲೇ ಸುಮಾರು ೩೦,೦೦೦ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳ ಕೊರತೆ ಇರುವಾಗ, ಸಿಬ್ಬಂದಿಗಳನ್ನು ಇಂತಹ ಕೆಲಸಗಳಿಗೆ ನಿಯೋಜಿಸುವುದರಿಂದ ಕಾನೂನು ಸುವ್ಯವಸ್ಥೆ ಪಾಲನೆಯ ಮೇಲೆ ಪರಿಣಾಮ ಬೀರುವುದಿಲ್ಲವೇ ;

(ಇ) ಪೊಲೀಸ್ ಸಿಬ್ಬಂದಿಗಳ ಘನತೆಗೆ ಚ್ಯುತಿ ಬಾರದಂತೆ ಮತ್ತು ಅವರ ಮೇಲಿನ ಕೆಲಸದ ಒತ್ತಡವನ್ನು ಕಡಿಮೆ ಮಾಡಲು ಈ ಯೋಜನೆಯ ಮಾರ್ಗಸೂಚಿಗಳನ್ನು ಮರುಪರಿಶೀಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಬೀದರ್ ಜಿಲ್ಲೆಯ 'ಬೀದರ್ ಕ್ರಾಂತಿ' ಪತ್ರಿಕೆಯ ವಿರುದ್ಧದ ಅಕ್ರಮ ಹಾಗೂ ಮಾಧ್ಯಮ ಪಟ್ಟಿಯಿಂದ ಹೊರಗಿಟ್ಟಿರುವ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೫೪ (೨೨೫೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ 'ಬೀದರ್ ಕ್ರಾಂತಿ' ಕನ್ನಡ ದಿನಪತ್ರಿಕೆಯನ್ನು ಸರ್ಕಾರದ ಮಾಧ್ಯಮ ಪಟ್ಟಿಯಿಂದ (Media List) ಅನರ್ಹಗೊಳಿಸಿ/ಬ್ಯಾನ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರದ ನಿಲುವೇನು ;

(ಆ) ಸದರಿ ಪತ್ರಿಕೆಯನ್ನು ಮಾಧ್ಯಮ ಪಟ್ಟಿಯಿಂದ ಕೈಬಿಡಲು ಕಾರಣವಾದ ನಿರ್ದಿಷ್ಟ ಲೋಪದೋಷಗಳೇನು ; (ಸಂಪೂರ್ಣ

ವಿವರ ನೀಡುವುದು) ನಂತರ ಯಾವ ಆಧಾರ ಅಥವಾ ಮಾನದಂಡಗಳ ಮೇಲೆ ಈ ಪತ್ರಿಕೆಯನ್ನು ಪುನಃ ಪಟ್ಟಿಗೆ ಸೇರಿಸಿಕೊಳ್ಳಲಾಯಿತು ;

(ಇ) ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ಒಂದೇ ದಿನ ಎರಡು ಆವೃತ್ತಿಗಳ ಹೆಸರಿನಲ್ಲಿ ಅಥವಾ ಅಕ್ರಮವಾಗಿ ಸರ್ಕಾರಿ ಜಾಹೀರಾತುಗಳನ್ನು ಪಡೆದು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿರುವುದು ತನಿಖೆಯಲ್ಲಿ ಸಾಬೀತಾಗಿದೆಯೇ ; ಹಾಗಿದ್ದಲ್ಲಿ, ಸಾರ್ವಜನಿಕ ಹಣದ ದುರುಪಯೋಗಕ್ಕಾಗಿ ಪತ್ರಿಕೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸದಿರಲು ಕಾರಣಗಳೇನು ;

(ಈ) ಈ ಹಗರಣದಲ್ಲಿ ಭಾಗಿಯಾದ ಪತ್ರಿಕೆಯ ಮಾಲೀಕರು ಮತ್ತು ಇದಕ್ಕೆ ಸಹಕರಿಸಿದ ಇಲಾಖೆಯ ಅಧಿಕಾರಿಗಳ ವಿರುದ್ಧ ಇದುವರೆಗೂ ಕೈಗೊಂಡಿರುವ ಶಿಸ್ತುಕ್ರಮಗಳೇನು ; ಸರಿಯಾದ ತನಿಖೆ ನಡೆಸದೆ ವಿಳಂಬ ಮಾಡುತ್ತಿರುವುದು ತಪ್ಪಿತಸ್ಥರಿಗೆ ರಕ್ಷಣೆ ನೀಡಿದಂತಾಗುವುದಿಲ್ಲವೇ ?

## ಡಾಂಬರು ರಸ್ತೆ ಹಾಳಾಗಿರುವ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೯೫೫ (೨೧೮೬) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶ್ರೀಹರಿ ರೆಸಿಡೆನ್ಸಿಯಲ್ ಲೇಔಟ್, ಕರಿಹೋಬನಹಳ್ಳಿ, ಪೀಣ್ಯ ೨ನೇ ಹಂತ, ವಾರ್ಡ್ ನಂ.೪೦-ದೊಡ್ಡಬಿದರಕಲ್ಲು, ಬೆಂಗಳೂರು-೫೮, ಇಲ್ಲಿನ ಟಾರ್ ರಸ್ತೆಯನ್ನು ಕಾವೇರಿ ನೀರಿನ ಪೈಪ್ ಅಳವಡಿಸಲು ಸಂಪೂರ್ಣವಾಗಿ ಅಗೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ರಸ್ತೆಯನ್ನು ಅಗೆದಿರುವುದರಿಂದ ಮಣ್ಣಿನ ರಸ್ತೆಯಾಗಿ ದೊಡ್ಡ ದೊಡ್ಡ ಹೊಂಡ ಗುಂಡಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಮಣ್ಣಿನ ರಸ್ತೆಯು ಮಳೆ ಬಂದಾಗ ಸಂಪೂರ್ಣವಾಗಿ ನೀರು ತುಂಬಿ ಹೊಂಡ ಮತ್ತು ಕೆಸರಿನಿಂದ ತುಂಬಿಕೊಂಡು ಪಾದಚಾರಿಗಳಿಗೆ ನಡೆದಾಡಲು ಮತ್ತು ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ರಸ್ತೆಯಲ್ಲಿ ಕಾವೇರಿ ನೀರಿನ ಪೈಪ್ ಅಳವಡಿಸಿ ಆದ ಮೇಲು ಇದೂವರೆವಿಗೂ ಡಾಂಬರೀಕರಣ ಮಾಡದಿರಲು ಕಾರಣಗಳೇನು ; ಈ ರಸ್ತೆಗಳಿಗೆ ಕೂಡಲೇ ಟಾರ್ ರಸ್ತೆ ಮಾಡಲು ಕೈಗೊಂಡ ಕ್ರಮಗಳೇನು ?

## ಬೀದರ್ ಜಿಲ್ಲೆಯ ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳು ಮತ್ತು ಆಡಳಿತ ಸುಧಾರಣೆ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೫೬ (೨೨೦೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ ಸೇರಿದಂತೆ ವಿವಿಧ ಸರ್ಕಾರಿ ಇಲಾಖೆಗಳಾದ ಆರೋಗ್ಯ, ಶಿಕ್ಷಣ, ಕಂದಾಯ, ಪೊಲೀಸ್ ಮುಂತಾದ ಇಲಾಖೆಗಳಲ್ಲಿನ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು ; ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ಇಲಾಖೆವಾರು ಹಾಗೂ ವೃಂದವಾರು ವಿವರ ನೀಡುವುದು)

(ಆ) ಖಾಲಿ ಇರುವ ಹುದ್ದೆಗಳ ಪೈಕಿ ಎಷ್ಟು ಹುದ್ದೆಗಳನ್ನು ನೇರ ನೇಮಕಾತಿ ಅಥವಾ ಮುಂಬಡ್ತಿ ಮೂಲಕ ಭರ್ತಿ ಮಾಡಲು

ಕ್ರಮ ಕೈಗೊಳ್ಳಲಾಗಿದೆ ; ಪ್ರಸ್ತುತ ಭರ್ತಿ ಪ್ರಕ್ರಿಯೆ ಯಾವ ಹಂತದಲ್ಲಿದೆ ;

(ಇ) ಜಿಲ್ಲೆಯಲ್ಲಿನ ಸಿಬ್ಬಂದಿಗಳ ಕೊರತೆಯಿಂದ ಜನನ–ಮರಣ ಪ್ರಮಾಣ ಪತ್ರ, ಪಹಣಿ ತಿದ್ದುಪಡಿ ಮತ್ತು ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆ ಸೇರಿದಂತೆ ನಾಗರೀಕ ಸೇವೆಗಳು (Citizen Services) ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಸಮಸ್ಯೆಯನ್ನು ಸರಿದೂಗಿಸಲು ಹೊರಗುತ್ತಿಗೆ (Outsourcing) ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗಿದೆಯೇ ;

(ಈ) ರಾಜ್ಯದಲ್ಲಿ ಜಾರಿಗೆ ತರಲಾಗಿರುವ e-Office ವ್ಯವಸ್ಥೆಯನ್ನು ಜಿಲ್ಲೆಯ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಸಂಪೂರ್ಣವಾಗಿ ಜಾರಿಗೆ ತರಲಾಗಿದೆಯೇ ; ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದ್ದರೆ, ಅದನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳೇನು ;

(ಉ) ಸಾರ್ವಜನಿಕರ ದೂರುಗಳನ್ನು ಸ್ವೀಕರಿಸಿ ಅವುಗಳ ವಿಲೇವಾರಿಯನ್ನು ಮೇಲ್ವಿಚಾರಣೆ ಮಾಡಲು ಜಿಲ್ಲಾಮಟ್ಟದಲ್ಲಿ 'ಪ್ರತ್ಯೇಕ ದೂರು ನಿವಾರಣಾ ವ್ಯವಸ್ಥೆ' ಅಥವಾ ಜನಸ್ಪಂದನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆಯೇ ;

(ಊ) ಕಳೆದ ಆರು ತಿಂಗಳಲ್ಲಿ ಈ ವ್ಯವಸ್ಥೆಯ ಮೂಲಕ ಸ್ವೀಕರಿಸಲಾದ ಮತ್ತು ಇತ್ಯರ್ಥಪಡಿಸಲಾದ ದೂರುಗಳ ಸಂಖ್ಯೆ ಎಷ್ಟು ?

## ಬೀದರ್ ಜಿಲ್ಲೆಯಲ್ಲಿನ ಸೈಬರ್ ಅಪರಾಧಗಳ ನಿಯಂತ್ರಣ ಮತ್ತು ತನಿಖಾ ವ್ಯವಸ್ಥೆ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೫೭ (೨೨೦೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ದಾಖಲಾಗಿರುವ ಒಟ್ಟು ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು ; ಈ ಪೈಕಿ ಎಷ್ಟು ಪ್ರಕರಣಗಳನ್ನು ಯಶಸ್ವಿಯಾಗಿ ಭೇದಿಸಿ ಆರೋಪಿಗಳನ್ನು ಬಂಧಿಸಲಾಗಿದೆ ; (ವರ್ಷವಾರು ವಿವರ ನೀಡುವುದು)

(ಆ) ದಾಖಲಾದ ಪ್ರಕರಣಗಳಲ್ಲಿ ಒಟಿಪಿ (OTP) ಹಂಚಿಕೆ, ಆನ್‌ಲೈನ್ ಬ್ಯಾಂಕಿಂಗ್ ವಂಚನೆ, ಲಕ್ಕಿ ಡ್ರಾ ಹಾಗೂ ಉದ್ಯೋಗದ ಆಮಿಷದ ಮೂಲಕ ನಡೆದ ಮೋಸದ ಪ್ರಕರಣಗಳ ಪ್ರಮಾಣ ಎಷ್ಟು; ಸಾರ್ವಜನಿಕರು ಕಳೆದುಕೊಂಡ ಹಣದಲ್ಲಿ ಎಷ್ಟು ಮೊತ್ತವನ್ನು ಮರುಪಡೆಯಲು ಪೊಲೀಸ್ ಇಲಾಖೆ ಯಶಸ್ವಿಯಾಗಿದೆ ;

(ಇ) ಜಿಲ್ಲಾಮಟ್ಟದಲ್ಲಿ ಸೈಬರ್ ಅಪರಾಧಗಳ ತನಿಖೆಗಾಗಿ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿರುವ Cyber Economic and Narcotics Police Station (CEN) ಪೊಲೀಸ್ ಠಾಣೆ ಸುಸಜ್ಜಿತವಾಗಿದೆಯೇ ; ಈ ಠಾಣೆಯಲ್ಲಿ ಆಧುನಿಕ ಸೈಬರ್ ಫೊರೆನ್ಸಿಕ್ (Cyber Forensics) ತಾಂತ್ರಿಕ ಸೌಲಭ್ಯಗಳು ಲಭ್ಯವಿದೆಯೇ ;

(ಈ) ಗ್ರಾಮೀಣ ಭಾಗದ ಜನರಿಗೆ ಸೈಬರ್ ವಂಚನೆಗಳ ಬಗ್ಗೆ ಜಾಗೃತಿ ಮೂಡಿಸಲು ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ 'ಸೈಬರ್ ಜಾಗೃತಿ' ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ; ಶಾಲೆ–ಕಾಲೇಜು ವಿದ್ಯಾರ್ಥಿಗಳಿಗೆ ಈ ಕುರಿತು ಶಿಕ್ಷಣ ನೀಡುವ ವಿಶೇಷ ಯೋಜನೆ ಸರ್ಕಾರದ ಮುಂದಿದೆಯೇ ;

(ಉ) ಸಂಕೀರ್ಣ ಆನ್‌ಲೈನ್ ವಂಚನೆ ಪ್ರಕರಣಗಳನ್ನು ಪತ್ತೆಹಚ್ಚಲು ಮತ್ತು ಹಣದ ವ್ಯವಹಾರವನ್ನು ತಕ್ಷಣವೇ ಸ್ಥಗಿತಗೊಳಿಸಲು (Freeze) ಜಿಲ್ಲಾ ಪೊಲೀಸ್ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ 'ವಿಶೇಷ ತನಿಖಾ ತಂಡ (Special Task Force) ರಚಿಸಲಾಗಿದೆಯೇ ; ಈ ನಿಟ್ಟಿನಲ್ಲಿ National Cyber Crime

Reporting Portal (೧೯೩೦ ಸಹಾಯವಾಣಿ) ಜೊತೆ ಸಮನ್ವಯ ಕೈಗೊಳ್ಳಲಾಗಿದೆಯೇ ?

## ಬೀದರ್ ಜಿಲ್ಲೆಯಲ್ಲಿನ ಸಣ್ಣ ನೀರಾವರಿ ಕೆರೆಗಳ ನಿರ್ವಹಣೆ, ಹೂಳೆತ್ತುವಿಕೆ ಮತ್ತು ಹೊಸ ಯೋಜನೆಗಳ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೩೮ (೨೨೦೭) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿನ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಒಟ್ಟು ಕೆರೆಗಳು (Tanks) ಹಾಗೂ ಅಣೆಕಟ್ಟುಗಳು/ ಚೆಕ್ ಡ್ಯಾಂಗಳು (Check Dams/Barrages) ಎಷ್ಟು ; ಇವುಗಳ ಒಟ್ಟು ನೀರು ಸಂಗ್ರಹಣಾ ಸಾಮರ್ಥ್ಯ ಎಷ್ಟು; (ತಾಲ್ಲೂಕುವಾರು ಪಟ್ಟಿ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿನ ಎಷ್ಟು ಕೆರೆಗಳ ಪುನರುಜ್ಜೀವನ (Rejuvenation) ಅಥವಾ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಇದಕ್ಕಾಗಿ ವ್ಯಯಿಸಲಾದ ಒಟ್ಟು ಅನುದಾನದ ಮೊತ್ತ ಎಷ್ಟು ; (ವರ್ಷವಾರು ವಿವರ ನೀಡುವುದು)

(ಇ) ಕಳೆದ ಐದು ವರ್ಷಗಳಲ್ಲಿ ಸಣ್ಣ ನೀರಾವರಿ ಯೋಜನೆಗಳ ಅನುಷ್ಠಾನದಿಂದ ಜಿಲ್ಲೆಯ ನೀರಾವರಿ ಅಚ್ಚುಕಟ್ಟು ಪ್ರದೇಶದ (Irrigation Command Area) ವಿಸ್ತೀರ್ಣದಲ್ಲಿ ಎಷ್ಟು ಏರಿಕೆ ಕಂಡುಬಂದಿದೆ ; ಇದರಿಂದ ಲಾಭ ಪಡೆದ ರೈತ ಕುಟುಂಬಗಳ ಸಂಖ್ಯೆ ಎಷ್ಟು ;

(ಈ) ಜಿಲ್ಲೆಯ ಕೆರೆಗಳಲ್ಲಿ ಹೂಳು ತುಂಬಿರುವುದರಿಂದ ನೀರು ಸಂಗ್ರಹಣಾ ಸಾಮರ್ಥ್ಯ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಕಳೆದ ಆರ್ಥಿಕ ವರ್ಷದಲ್ಲಿ ಕೆರೆಗಳ ಹೂಳೆತ್ತುವಿಕೆ (Desilting) ಮತ್ತು ರಾಜಕಾಲುವೆಗಳ ಶುದ್ಧೀಕರಣಕ್ಕಾಗಿ ಬಿಡುಗಡೆಗೊಂಡ ಮತ್ತು ಬಳಸಲಾದ ಅನುದಾನದ ಮೊತ್ತ ಎಷ್ಟು ;

(ಉ) ಜಿಲ್ಲೆಯ ಅಂತರ್ಜಲ ಮಟ್ಟ ಹೆಚ್ಚಿಸಲು ಹಾಗೂ ರೈತರ ಕೃಷಿ ಚಟುವಟಿಕೆಗಳಿಗೆ ಪೂರಕವಾಗುವಂತೆ ಹೊಸ ಸಣ್ಣ ನೀರಾವರಿ ಯೋಜನೆಗಳು (ಉದಾ: ಏತ ನೀರಾವರಿ ಯೋಜನೆಗಳು ಅಥವಾ ಹೊಸ ಚೆಕ್ ಡ್ಯಾಂಗಳ ನಿರ್ಮಾಣ) ಕೈಗೊಳ್ಳಲು ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆಗಳಿವೆಯೇ ; ಇದ್ದಲ್ಲಿ, ಅವುಗಳ ವಿವರ ನೀಡುವುದು ?

## ಬೀದರ್ ಜಿಲ್ಲೆಯ ಪ್ರಮುಖ ನೀರಾವರಿ ಯೋಜನೆಗಳ ಪ್ರಗತಿ, ಕಾಲುವೆ ನಿರ್ವಹಣೆ ಮತ್ತು ನೀರು ವಿತರಣೆಯ ಕುರಿತು

**ಡಾ|| ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೫೯ (೨೨೦೮) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪ್ರಮುಖ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ವಿವರವೇನು ; ಉದಾಹರಣೆಗೆ Karanja Project ಮತ್ತು Chulaki Nala Project ಯೋಜನೆಗಳ ಮೂಲಕ ಒಟ್ಟು ಎಷ್ಟು ಟಿ.ಎಂ.ಸಿ ನೀರು ಸಂಗ್ರಹಿಸಲಾಗುತ್ತಿದೆ ; (ಯೋಜನೆವಾರು ವಿವರ ನೀಡುವುದು)

(ಆ) ಕಾರಂಜಾ ಹಾಗೂ ಇತರ ನೀರಾವರಿ ಯೋಜನೆಗಳ ವ್ಯಾಪ್ತಿಯಲ್ಲಿ ಇನ್ನೂ ಪೂರ್ಣಗೊಳ್ಳದೆ ಬಾಕಿ ಉಳಿದಿರುವ ಅಪೂರ್ಣ ಕಾಮಗಾರಿಗಳ (Incomplete Works) ಪ್ರಗತಿ ಯಾವ ಹಂತದಲ್ಲಿದೆ ; ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಏನು ;

(ಇ) ಜಿಲ್ಲೆಯ ಪ್ರಮುಖ ನೀರಾವರಿ ಯೋಜನೆಗಳ ಕಾಲುವೆಗಳು ಹಾನಿಗೊಳಗಾಗಿರುವುದು ಹಾಗೂ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕಳೆದ ಮೂರು ವರ್ಷಗಳಲ್ಲಿ ಕಾಲುವೆ ದುರಸ್ತಿ ಮತ್ತು ನಿರ್ವಹಣೆಗಾಗಿ (Canal Maintenance) ಬಿಡುಗಡೆ ಮಾಡಲಾದ ಮತ್ತು ಬಳಸಲಾದ ಒಟ್ಟು ಅನುದಾನದ ಮೊತ್ತ ಎಷ್ಟು ; (ವರ್ಷವಾರು ವಿವರ ನೀಡುವುದು)

(ಉ) ಕಳೆದ ಐದು ವರ್ಷಗಳಲ್ಲಿ ವಿವಿಧ ನೀರಾವರಿ ಯೋಜನೆಗಳ ಅನುಷ್ಠಾನದಿಂದಾಗಿ ಜಿಲ್ಲೆಯಲ್ಲಿ ಹೊಸದಾಗಿ ಎಷ್ಟು ಹೆಕ್ಟೇರ್ ಕೃಷಿ ಭೂಮಿ ನೀರಾವರಿ ವ್ಯಾಪ್ತಿಗೆ ಸೇರಿದೆ ; ಯೋಜಿತ ಗುರಿಯಷ್ಟು ನೀರಾವರಿ ಪ್ರದೇಶ ವಿಸ್ತರಣೆ ಸಾಧಿಸಲಾಗಿದೆಯೇ ;

(ಊ) ಕಾಲುವೆಗಳ ಕೊನೆಯ ಭಾಗದ (Tail-end) ರೈತರಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ; ನೀರು ವಿತರಣೆಯಲ್ಲಿನ ಅಡಚಣೆಗಳನ್ನು ನಿವಾರಿಸಲು ನೀರಾವರಿ ಬಳಕೆದಾರರ ಸಂಘಗಳ (Water Users Associations) ಬಲವರ್ಧನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬೀದರ್ ಜಿಲ್ಲೆಯಲ್ಲಿನ ಹಾಲು ಉತ್ಪಾದನೆ, ಸಂಗ್ರಹಣೆ ಹಾಗೂ ಪ್ರೋತ್ಸಾಹ ಧನ ವಿತರಣೆ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೬೦ (೨೨೦೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ದಿನನಿತ್ಯ ಸಂಗ್ರಹವಾಗುತ್ತಿರುವ ಸರಾಸರಿ ಹಾಲಿನ ಪ್ರಮಾಣ (ಲೀಟರ್‌ಗಳಲ್ಲಿ) ಎಷ್ಟು ; ಕಳೆದ

ಎರಡು ವರ್ಷಗಳ ಅವಧಿಯಲ್ಲಿ ಹಾಲು ಉತ್ಪಾದನೆಯಲ್ಲಿ ಏರಿಕೆ ಅಥವಾ ಇಳಿಕೆ ಕಂಡಿದೆಯೇ ; (ತಾಲ್ಲೂಕುವಾರು ಹಾಗೂ ವರ್ಷವಾರು ಮಾಹಿತಿ ನೀಡುವುದು)

(ಆ) Karnataka Milk Federation (KMF) ಅಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ (MPCS) ಒಟ್ಟು ಸಂಖ್ಯೆ ಎಷ್ಟು ; ಕಳೆದ ಎರಡು ವರ್ಷಗಳಲ್ಲಿ ಹೊಸ MPCS ಗಳನ್ನು ಸ್ಥಾಪಿಸಲು ರೈತರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಎಷ್ಟು ಸಂಘಗಳಿಗೆ ಅನುಮೋದನೆ ನೀಡಲಾಗಿದೆ ;

(ಇ) ಜಿಲ್ಲೆಯ ಎಲ್ಲಾ ಹಾಲು ಸಂಗ್ರಹಣಾ ಕೇಂದ್ರಗಳಲ್ಲಿ ಹಾಲಿನ ಗುಣಮಟ್ಟ ಕಾಪಾಡಲು ಅಗತ್ಯವಿರುವ ಶೀತಲೀಕರಣ (Bulk Milk Coolers-BMC) ಹಾಲು ಪರೀಕ್ಷಾ ಯಂತ್ರೋಪಕರಣಗಳು ಲಭ್ಯವಿದೆಯೇ ; ಶೀತಲೀಕರಣ ಸೌಲಭ್ಯವಿಲ್ಲದ ಕೇಂದ್ರಗಳಿಂದ ಹಾಲು ಮುಖ್ಯ ಡೈರಿಗೆ ಸಾಗಿಸುವಾಗ ಉಂಟಾಗುವ ನಷ್ಟ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಹೊಸ BMCಗಳನ್ನು ಸ್ಥಾಪಿಸಲು ಮೀಸಲಾದ ಅನುದಾನ ಎಷ್ಟು ;

(ಈ) ಹಾಲು ಉತ್ಪಾದಕರಿಗೆ ಸರ್ಕಾರ ನೀಡುತ್ತಿರುವ ಪ್ರತಿ ಲೀಟರ್ ರೂ.೫ ಪ್ರೋತ್ಸಾಹಧನ (Incentive) ಕಳೆದ ಆರು ತಿಂಗಳಿನಿಂದ ಬಾಕಿ ಇರುವುದೇ ; ಬಾಕಿ ಇರುವ ಒಟ್ಟು ಮೊತ್ತ ಎಷ್ಟು ; ಈ ಮೊತ್ತವನ್ನು ರೈತರ ಬ್ಯಾಂಕ್ ಖಾತೆಗಳಿಗೆ ಯಾವ ಕಾಲಮಿತಿಯೊಳಗೆ ಜಮೆ ಮಾಡಲಾಗುವುದು ?

## ರಾಜ್ಯ ಸರ್ಕಾರ ಪಡೆದಿರುವ ಸಾಲಗಳ ವಿವರಗಳ ಮಾಹಿತಿ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೬೧ (೨೧೮೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪, ೨೦೨೪–೨೫ ಹಾಗೂ ೨೦೨೫–೨೬ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಸಾಲ ಎಷ್ಟು ; ಯಾವ ಯಾವ ಮೂಲಗಳಿಂದ ಸಾಲ ಪಡೆಯಲಾಗಿದೆ ; ಶೇಕಡವಾರು ಬಡ್ಡಿ ಎಷ್ಟು ; (ವಿವರ ಒದಗಿಸುವುದು)

(ಆ) ಪಡೆದ ಸಾಲವನ್ನು ಯಾವ ಯಾವ ಇಲಾಖೆಗೆ ಹಂಚಿಕೆ ಮಾಡಲಾಗಿದೆ ; (ಇಲಾಖಾವಾರು ಹಾಗೂ ಲೆಕ್ಕ ಶೀರ್ಷಿಕೆವಾರು ಮಾಹಿತಿ ಒದಗಿಸುವುದು)

(ಇ) ಇಲಾಖೆಗೆ ಹಂಚಿಕೆ ಮಾಡಲಾದ ಅನುದಾನವನ್ನು ಯಾವ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ? (ಲೆಕ್ಕಶೀರ್ಷಿಕೆ ಹಾಗೂ ಯೋಜನೆವಾರು ವಿವರ ಒದಗಿಸುವುದು)

## ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳ ಮಾಹಿತಿ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೬೨ (೨೧೮೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈ ಮೂರು ವರ್ಷದಲ್ಲಿ ಸರ್ಕಾರ ಎಷ್ಟು ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಿದೆ ; (ಇಲಾಖಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ನಿರುದ್ಯೋಗವನ್ನು ನಿವಾರಿಸಲು ಇಲಾಖಾವಾರು ಕೈಗೊಂಡಿರುವ ಕ್ರಮ ಯಾವುದು ;

(ಇ) ಇಲ್ಲಿಯವರೆಗೆ ಎಷ್ಟು ಸರ್ಕಾರಿ ಹುದ್ದೆಗಳು ಖಾಲಿ ಇದೆ ; ಇಲಾಖಾವಾರು ಪಟ್ಟಿ ನೀಡುವುದು ;

(ಈ) ಮೇ ೨೦೨೩ ರಿಂದ ರಾಜ್ಯದಲ್ಲಿ ಎಷ್ಟು ಸರ್ಕಾರೇತರ ಉದ್ಯೋಗಗಳು ಸೃಷ್ಟಿಯಾಗಿವೆ ; ಜಿಲ್ಲಾವಾರು ವಿವರಗಳು ಮತ್ತು ಉದ್ಯೋಗ ವಲಯಗಳ ವಿವರ ನೀಡುವುದು ?

# ರಾಜ್ಯದಲ್ಲಿ ಸಂಗ್ರಹವಾಗುತ್ತಿರುವ ತೆರಿಗೆಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೬೩ (೨೧೮೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿವಿಧ ಮೂಲಗಳಿಂದ ಎಷ್ಟು ತೆರಿಗೆ ಸಂಗ್ರಹವಾಗುತ್ತಿದೆ ; ೨೦೨೫–೨೬ರಲ್ಲಿ (February ಅಂತ್ಯದವರೆಗೆ)ಸಂಗ್ರಹವಾಗಿರುವ ಮತ್ತು ಕೊರತೆಯಾಗಿರುವ ತೆರಿಗೆ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಗ್ಯಾರಂಟಿ ಯೋಜನೆಗಳಿಗಾಗಿ ಪ್ರತೀ ತಿಂಗಳು ಅಗತ್ಯವಿರುವ ಹಣ ಎಷ್ಟು ; ಗ್ಯಾರಂಟಿ ಯೋಜನೆಗಳು ಅಸ್ತಿತ್ವಕ್ಕೆ ಬಂದಾಗಿನಿಂದ ಸದರಿ ಯೋಜನೆಗಳಿಗೆ (೨೦೨೬, ಜನವರಿ ಅಂತ್ಯದವರೆಗೆ ವೆಚ್ಚವಾಗಿರುವ ಹಣ ಎಷ್ಟು ; (ಗ್ಯಾರಂಟಿ ಯೋಜನೆವಾರು ಸಮಗ್ರ ಮಾಹಿತಿಯನ್ನು ಮಾಹೆವಾರು ಒದಗಿಸುವುದು)

(ಇ) ಗ್ಯಾರಂಟಿ ಯೋಜನೆಗಳನ್ನು ಹೊರತು ಪಡಿಸಿ ಇಲಾಖೆಗಳ ಕಾರ್ಯ ನಿರ್ವಹಣೆಗೆ ಮತ್ತು ನೌಕರರ ವೇತನ/ಪಿಂಚಣಿ ಸೇರಿದಂತೆ ಇನ್ನಿತರೆ ಸರ್ಕಾರಿ ವೆಚ್ಚಗಳಿಗೆ ಪ್ರತಿ ತಿಂಗಳು ಅಗತ್ಯವಿರುವ ಹಣ ಎಷ್ಟು; ಕಳೆದ ೨ ವರ್ಷದಿಂದ ಈ ಉದ್ದೇಶಗಳಿಗೆ ವೆಚ್ಚವಾಗಿರುವ ಹಣ ಎಷ್ಟು ; (ಇಲಾಖಾವಾರು ವಿವರ ನೀಡುವುದು)

(ಈ) ರಾಜ್ಯ ಸರ್ಕಾರದ ಮೇಲಿರುವ ಒಟ್ಟು ಸಾಲ ಎಷ್ಟು ; ದಿನಾಂಕ:೦೧.೦೬.೨೦೨೩ ರಿಂದ ೩೧.೦೧.೨೦೨೫ ರವರೆಗೆ ರಾಜ್ಯ ಸರ್ಕಾರ ಯಾವ ಯಾವ ಸಂಸ್ಥೆಯಿಂದ ಎಷ್ಟು ಬಾಹ್ಯ ಮತ್ತು ಆಂತರಿಕ ಸಾಲ ಪಡೆದಿದೆ ; ಸಾಲಕ್ಕೆ ಪ್ರತಿ ತಿಂಗಳು ಪಾವತಿಸುತ್ತಿರುವ ಅಸಲು ಹಾಗೂ ಬಡ್ಡಿ ಎಷ್ಟು ; (ಸಮಗ್ರ ವಿವರ ನೀಡುವುದು)

(ಉ) ಕಳೆದ ೨ ವರ್ಷದಿಂದ (೨೦೨೬ ರ ಜನವರಿ ಅಂತ್ಯದ ವರೆಗೆ) ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ಇಲಾಖಾವಾರು ವಿವರವನ್ನು ಕ್ಷೇತ್ರವಾರು ಒದಗಿಸುವುದು) ಗ್ಯಾರಂಟಿ ಅನುಷ್ಠಾನದಿಂದಾಗಿ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನದ ಕೊರತೆಯಾಗಿರುವುದು ನಿಜವೇ ?

## ರಾಜ್ಯದಲ್ಲಿ ಶಾಲಾ–ಕಾಲೇಜು ಆವರಣಗಳಲ್ಲಿ ಡ್ರಗ್ಸ್ ದಂಧೆ ವ್ಯಾಪಕವಾಗುತ್ತಿರುವ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೬೪ (೨೧೮೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಶಾಲಾ–ಕಾಲೇಜು ಆವರಣಗಳಲ್ಲಿ ಡ್ರಗ್ಸ್ ದಂಧೆ ವ್ಯಾಪಕವಾಗುತ್ತಿದ್ದು, ಅಪ್ರಾಪ್ತರು ಮಾದಕ ವ್ಯಸನಕ್ಕೆ ಬಲಿಯಾಗಿ ಅಪರಾಧ ಕೃತ್ಯಗಳಲ್ಲಿ ತೊಡಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳೇನು ;

(ಆ) ಕೇವಲ ಸಣ್ಣಪುಟ್ಟ ಪೆಡ್ಲರ್‌ಗಳನ್ನು ಹಿಡಿಯುವ ಬದಲು, ಡ್ರಗ್ಸ್ ದಂಧೆಯ ಮೂಲ (Source) ಮತ್ತು ಕಿಂಗ್‌ಪಿನ್‌ಗಳನ್ನು ಪತ್ತೆ ಹಚ್ಚುವಲ್ಲಿ ಗುಪ್ತಚರ ಇಲಾಖೆ ವೈಫಲ್ಯಕ್ಕೆ ಕಾರಣವೇನು ;

(ಇ) ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳಲ್ಲಿ ಅಪ್ರಾಪ್ತರು ಜೀವದ ಹಂಗು ತೊರೆದು 'ವೀಲಿಂಗ್' (Wheeling) ಮಾಡುವ ಮೂಲಕ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದಾರೆ ; ಈ ಬಗ್ಗೆ ಕಳೆದ ಒಂದು ವರ್ಷದಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಪೋಷಕರ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ ;

(ಈ) ಸಾಮಾಜಿಕ ಜಾಲತಾಣಗಳಲ್ಲಿ ವೀಡಿಯೋಗಳನ್ನು ಪ್ರಚೋದಿಸುವವರ ಮೇಲೆ ಕ್ರಮ ಕೈಗೊಳ್ಳಲು ಸೈಬರ್ ಕ್ರೈಂ ಭಾಗಕ್ಕೆ ವಿಶೇಷ ಸೂಚನೆ ನೀಡಲಾಗಿದೆಯೇ ;

(ಉ) ಕೊಲೆ ಮತ್ತು ಅತ್ಯಾಚಾರದಂತಹ ಗಂಭೀರ ಅಪರಾಧಗಳಲ್ಲಿ ಭಾಗಿಯಾದ ಅಪ್ರಾಪ್ತರ ಸಂಖ್ಯೆ ಹೆಚ್ಚುತ್ತಿದೆ ; ಇವರನ್ನು ಇರಿಸಲಾಗುವ ಬಾಲಮಂದಿಗಳು (Remand Homes) ಇಂದು ಅಪರಾಧಗಳ ತರಬೇತಿ ಕೇಂದ್ರಗಳಾಗಿ ಬದಲಾಗುತ್ತಿವೆ ಎಂಬ ಆರೋಪಕ್ಕೆ ಸರ್ಕಾರದ ಬಳಿ ಉತ್ತರವೇನು ;

(ಊ) ಗಂಭೀರ ಅಪರಾಧ ಎಸಗಿದ ೧೬–೧೮ ವರ್ಷದ ಕಿಶೋರರನ್ನು ವಯಸ್ಕರಂತೆ ಪರಿಗಣಿಸಿ ಕಾನೂನು ಕ್ರಮ ಜರುಗಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಗ್ಯಾರಂಟಿ ಯೋಜನೆಗಳ ಅನುದಾನ ಸಮಿತಿಗಳ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ ) :–**

೧೯೬೫ (೨೧೯೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯನ್ನು ಯಾವ ಉದ್ದೇಶಕ್ಕಾಗಿ ರಚಿಸಲಾಗಿದೆ ; ಸದರಿ ಸಮಿತಿಗಳನ್ನು ಯಾವ ದಿನಾಂಕದಂದು ರಚಿಸಲಾಗಿದೆ ; ಸದರಿ ಸಮಿತಿಗಳಲ್ಲಿ ರಾಜ್ಯ/ ಜಿಲ್ಲಾ/ತಾಲ್ಲೂಕು/ ಹೋಬಳಿ ಮಟ್ಟಗಳಲ್ಲಿ ಎಷ್ಟು ಪದಾಧಿಕಾರಿಗಳನ್ನು / ಹುದ್ದೆಗಳನ್ನು ಸೃಜಿಸಲಾಗಿದೆ ; ಪದಾಧಿಕಾರಿಗಳನ್ನು / ಹುದ್ದೆಗಳನ್ನು ನೇಮಕ ಮಾಡಲು ಅನುಸರಿಸುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಸಮಿತಿಗಳ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧ್ಯಕ್ಷರು/ ಉಪಾಧ್ಯಕ್ಷರು /ಪದಾಧಿಕಾರಿಗಳಿಗೆ ವೇತನ / ಗೌರವ ಧನ / ಭತ್ಯೆಗಳು / ಇನ್ನಿತರ ಸೌಲಭ್ಯಗಳನ್ನು ನೀಡಲಾಗಿದೆಯೇ ; (ಪಾವತಿಗಳ ಸಂಪೂರ್ಣ ಮಾಹಿತಿ ನೀಡುವುದು) ನೀಡಿದ್ದಲ್ಲಿ, ಯಾವ ನಿಯಮಗಳಡಿ ನೀಡಲಾಗಿದೆ ; ಈ ಸೌಲಭ್ಯಗಳನ್ನು ನೀಡಲು ನಿಯಮಗಳಲ್ಲಿ ಅವಕಾಶವಿದೆಯೇ ;

(ಇ) ಗ್ಯಾರಂಟಿ ಯೋಜನೆಗಳನ್ನು ಸರ್ಕಾರಿ ಇಲಾಖೆಗಳಿಂದ ಮೇಲ್ವಿಚಾರಣೆ ನಡೆಸಿ, ಫಲಾನುಭವಿಗಳ ಸಂಬಂಧಿಸಿದ ದಾಖಲೆಗಳನ್ನು ಇಲಾಖೆಗಳೇ ಪಡೆದುಕೊಂಡು ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಸದರಿ ಫಲಾನುಭವಿಗಳಾನುಸಾರ ಯೋಜನೆಗಳಲ್ಲಿ ಹಣ ವ್ಯಯಿಸಲಾಗುತ್ತಿದ್ದು, ಇವೆಲ್ಲವನ್ನು ಸಂಬಂಧಿಸಿದ ಇಲಾಖೆಗಳೇ ಅನುಷ್ಠಾನ ಮಾಡುತ್ತಿರುವುದರಿಂದ ಗ್ಯಾರಂಟಿ ಅನುಷ್ಠಾನ ಸಮಿತಿಗಳ ಕಾರ್ಯವೇನು ಹಾಗೂ ಅವಶ್ಯಕತೆಯೇನು; ಒಂದು ಪಕ್ಷದ ಕಾರ್ಯಕರ್ತರಿಗೆ ಆದಾಯವನ್ನು ನೀಡುವ ಹುದ್ದೆಗಳನ್ನು ನೀಡಲು ಸರ್ಕಾರವೇ ರಾಜ್ಯದ ಜನತೆಯ ಹಣವನ್ನು ಪೋಲು ಮಾಡಿದಂತಾಗುವುದಲ್ಲವೇ ;

(ಈ) ಸದರಿ ಸಮಿತಿಗಳಲ್ಲಿ ಯಾವ ಹುದ್ದೆಗಳಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನಗಳನ್ನು ನೀಡಲಾಗಿದೆ ; ನೀಡಿದ್ದಲ್ಲಿ, ಈ ಕುರಿತು ಆದೇಶಗಳ ಪ್ರತಿಗಳೊಂದಿಗೆ ಮಾಹಿತಿ ನೀಡುವುದು ; ಸಂಪುಟ ದರ್ಜೆಯ ಸ್ಥಾನಮಾನಗಳೊಂದಿಗೆ ಯಾವ-ಯಾವ ಸವಲತ್ತುಗಳನ್ನು ನೀಡಲಾಗಿದೆ ? (ಮಾಹಿತಿ ನೀಡುವುದು)

## ಹಾಲಿನ ಪ್ರೋತ್ಸಾಹಧನ ಬಾಕಿ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :-**

೧೯೬೬ (೨೧೯೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಹಾಲು ಉತ್ಪಾದಕರ ಒಕ್ಕೂಟಗಳೆಷ್ಟು; ಹಾಲು ಉತ್ಪಾದಕರ ಸಹಕಾರ ಸಂಘಗಳು ಎಷ್ಟಿವೆ; ಎಷ್ಟು ಜನ ನೋಂದಾಯಿತ ಹಾಲು ಉತ್ಪಾದಕರಿದ್ದಾರೆ; ದಿನಪ್ರತಿ ಎಷ್ಟು ಜನ ರೈತರು ಹಾಲು ಸರಬರಾಜು ಮಾಡುತ್ತಿದ್ದಾರೆ ; ಹಾಲಿನ ಪ್ರೋತ್ಸಾಹಧನವನ್ನು ಪಡೆಯುತ್ತಿರುವ ರೈತರ ಸಂಖ್ಯೆ ಎಷ್ಟು; ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರೈತರ ಸಂಖ್ಯೆ ಎಷ್ಟು ;

(ಆ) ಹೈನುಗಾರಿಕೆ ನಡೆಸುವ ರೈತರಿಗೆ ಅನೂಕೂಲವಾಗುವ ಉದ್ದೇಶದಿಂದ ಕ್ಷೀರಧಾರೆ ಯೋಜನೆಯಡಿ ಪ್ರತಿ ಲೀಟರ್ ಹಾಲಿಗೆ ಎಷ್ಟು ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ ; ೨೦೨೩–ಏಪ್ರಿಲ್ ತಿಂಗಳಿನಿಂದ ೨೦೨೬–ಫೆಬ್ರವರಿ ತಿಂಗಳ ಅಂತ್ಯದವರೆಗೆ ಎಷ್ಟು ಮೊತ್ತವನ್ನು ರೈತರಿಗೆ ಪ್ರೋತ್ಸಾಹಧನದ ಯೋಜನೆಯಡಿ ಪಾವತಿ ಮಾಡಲಾಗಿದೆ; ತಿಂಗಳವಾರು ಮಾಹಿತಿ ನೀಡುವುದು ;

(ಇ) ಫೆಬ್ರವರಿ–೨೦೨೬ರ ಅಂತ್ಯಕ್ಕೆ ಪ್ರೋತ್ಸಾಹಧನವನ್ನು ಪಾವತಿ ಮಾಡದೇ ಬಾಕಿ ಉಳಿಸಿಕೊಂಡಿರುವ ಮೊತ್ತವೆಷ್ಟು ; ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ ; ಪ್ರೋತ್ಸಾಹಧನ ಬಾಕಿ ವಿಷಂಯುವು ಸರ್ಕಾರ ರೈತರಿಗೆ ಮಾಡಿರುವ ಅನ್ಯಾಯವಾಗುವುದಿಲ್ಲವೇ ;

(ಈ) ರೈತರಿಂದ ಸಂಗ್ರಹಿಸಿದ ಹಾಲನ್ನು ನಂದಿನಿ ಹಾಗೂ ಇತರೆ ಜಿಲ್ಲಾ ಮಟ್ಟದ ಸಹಕಾರಿ ಹಾಲು ಮಾರಾಟ ಮಂಡಳಿ ಮೂಲಕ ವಿತರಣೆ ಹಾಗೂ ಮಾರಾಟ ಮಾಡಲಾಗುತ್ತಿದ್ದು, ಇದರೊಂದಿಗೆ ಇತರೆ ಹಾಲಿನ ಉತ್ಪನ್ನಗಳ ಮಾರಾಟದಿಂದಲೂ ಸಹ ಅಪಾರವಾಗಿ ಹಣ ಸಂಗ್ರವಾಗುತ್ತಿದ್ದರೂ ಹಾಲಿನ ಪ್ರೋತ್ಸಾಹಧನವನ್ನು ರೈತರಿಗೆ ನಿಗಧಿತ ಸಮಯದಲ್ಲಿ ನೀಡಲು ಸರ್ಕಾರಕ್ಕೆ ಆಗುತ್ತಿರುವ ತೊಂದರೆ ಏನು ;

(ಉ) ಹಾಲಿನ ಪ್ರೋತ್ಸಾಹಧನವನ್ನು ಕಡ್ಡಾಯವಾಗಿ ಫಲಾನುಭವಿಗಳಿಗೆ ನಿಗಧಿತ ಸಮಯದಲ್ಲಿ ನೀಡಲು ಸರ್ಕಾರ ಕ್ರಮವಹಿಸಬೇಕಾಗಿದ್ದು, ಆದರೆ ಸಾಮಾನ್ಯವಾಗಿ ಪ್ರೋತ್ಸಾಹಧನ ನೀಡುವ ಪ್ರಕ್ರಿಯೆಯು ಕೆಲವೊಮ್ಮೆ ವರ್ಷಗಟ್ಟಲೇ ತೆಗೆದುಕೊಳ್ಳುತ್ತಿದ್ದು, ಇದರಿಂದ ರೈತರಿಗೆ ಅನ್ಯಾಯವಾದಂತಾಗುವುದಿಲ್ಲವೇ ; ಸರ್ಕಾರವು ಹಾಲಿನ ಪ್ರೋತ್ಸಾಹಧನವನ್ನು ನಿಗಧಿತ ಸಮಯದ ಒಳಗೆ ಪಾವತಿ ಮಾಡದಿದ್ದಲ್ಲಿ, ಜೀವನ ನಡೆಸುವುದು ಬಹಳ ಕಷ್ಟಕರವಾಗುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲವೇ ?

## ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೧೯೬೭ (೨೧೯೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ವಿವಿಧ ಇಲಾಖೆಗಳು, ಸರ್ಕಾರಿ ಸ್ವಾಯತ್ತ ನಿಗಮ ಮಂಡಳಿಗಳು, ವಿಶ್ವವಿದ್ಯಾಲಯಗಳು, ಸರ್ಕಾರಿ ಬ್ಯಾಂಕ್ ಮತ್ತು ನಿಗಮಗಳು, ಸರ್ಕಾರದ ಹಣದಿಂದ ಸ್ಥಾಪಿತ ಸಂಸ್ಥೆಗಳು ಮತ್ತು ಶಾಸನಬದ್ಧ ಸರ್ಕಾರಿ ಸಂಸ್ಥೆಗಳಲ್ಲಿ ಫೆಬ್ರವರಿ–೨೦೨೬ ಅಂತ್ಯದವರೆಗೆ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ೨೦೨೩–೨೪, ೨೦೨೪–೨೫, ೨೦೨೫–೨೬ನೇ ಸಾಲುಗಳಲ್ಲಿನ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ನೇಮಕಾತಿಗಾಗಿ ಹೊರಡಿಸಲಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಎಷ್ಟು ಹುದ್ದೆಗಳಿಗೆ ನೇಮಕಾತಿ ಮಾಡಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪ್ರಸ್ತುತ ವಿವಿಧ ಇಲಾಖೆಗಳಲ್ಲಿ, ಖಾಲಿಯಿರುವ ಪ್ರಕ್ರಿಯೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಬಲ್ಲದು; ೨೦೨೩ ಮೇ ತಿಂಗಳಿಂದ ಫೆಬ್ರವರಿ–೨೦೨೬ ರವರೆಗೆ ಎಷ್ಟು ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿದೆ ಮತ್ತು ಎಷ್ಟು ಹುದ್ದೆಗಳಿಗೆ ನೇಮಕಾತಿಯನ್ನು ಪೂರ್ಣಗೊಳಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಪ್ರಸ್ತುತ ಖಾಲಿ ಇರುವ ಹುದ್ದೆಗಳ ಜೊತೆಗೆ ಪ್ರತಿವರ್ಷ ಎಷ್ಟು ಖಾಲಿ ಹುದ್ದೆಗಳು ಸೇರ್ಪಡೆಯಾಗುತ್ತಿವೆ ಮತ್ತು ಖಾಲಿಯಾದ ಹುದ್ದೆಗಳಿಗೆ ಎದುರಾಗಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಸರ್ಕಾರದ ಹಲವಾರು ಇಲಾಖೆಗಳು ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಮತ್ತೊಮ್ಮೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೇಳುತ್ತಿರುವುದಕ್ಕೆ ಕಾರಣವೇನು ? (ಸಂಪೂರ್ಣ ಮಾಹಿತಿ ನೀಡುವುದು)

## ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಯೋಜನೆಗಳು ಮತ್ತು ಹೂಡಿಕೆಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೬೮ (೨೧೯೭) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವ್ಯಾಪ್ತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸಂಯೋಗದಲ್ಲಿ ಪ್ರಸ್ತುತ ಯೋಜನೆಗಳು ಯಾವುವು; ಯುವ ವಿಜ್ಞಾನಿಗಳಿಗಾಗಿ ಪ್ರಾಯೋಗಿಕ ಮತ್ತು ಉದ್ಯಮ ಕೇಂದ್ರಿತ (Industry-Linked) ತರಬೇತಿ/ ಉದ್ಯೋಗ ನೀಡಲು ಯಾವ ರೀತಿಯ ಯೋಜನೆಗಳನ್ನು ರೂಪಿಸಲಾಗಿದೆ ;

(ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಹೂಡಿಕೆ ಮಾಡಲಾದ ಒಟ್ಟು ಮೊತ್ತವೆಷ್ಟು ; ಕೃಷಿ, ಆರೋಗ್ಯ, ವಾಯುಮಂಡಲ ಪರಿಶೀಲನೆ, ಪಶು ಸಂರಕ್ಷಣೆಗಳಂತಹ ಕ್ಷೇತ್ರಗಳಲ್ಲಿ ಕರ್ನಾಟಕ ರಾಷ್ಟ್ರಕ್ಕೆ ಮಾದರಿ ಆಗಲು ಇಲಾಖೆಯಿಂದ ಯಾವ ಯೋಜನೆಗಳನ್ನು ರೂಪಿಸಿಕೊಳ್ಳಲಾಗಿದೆ ;

(ಇ) ಕಳೆದ ಮೂರು ವರ್ಷಗಳಲ್ಲಿ ಸಾರ್ವಜನಿಕ–ಖಾಸಗಿ ಸಹಯೋಗ (PPP) ಮೂಲಕ ರಾಜ್ಯದಲ್ಲಿ ಎಷ್ಟು ಸಂಶೋಧನಾ ಪರಿಕರಗಳು, ಇನೋವೇಶನ್ ಹಬ್‌ಗಳನ್ನು ಸ್ಥಾಪಿಸಲಾಗಿದೆ? (ಮಾಹಿತಿ ನೀಡುವುದು)

## ಅಬಕಾರಿ ಇಲಾಖೆಯ ಕ್ರಮದ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೬೯ (೨೧೯೮) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ CL-2 Wine Shopsಗಳಲ್ಲಿ ಅಂಗಡಿ ಹೊರಗಡೆ ಆವರಣದಲ್ಲಿ/ಸಾರ್ವಜನಿಕರು ಓಡಾಡುವ ಸ್ಥಳದಲ್ಲಿಯೇ ಮದ್ಯ ಸೇವನೆ ನಡೆಯುತ್ತಿರುವ ಆರೋಪಗಳಿದ್ದು, ಈ ಕುರಿತು ಅಬಕಾರಿ ಇಲಾಖೆ ಕೈಗೊಂಡಿರುವ ಕ್ರಮಗಳು ಏನು ; ಈ ಪ್ರಕ್ರಿಯೆಯಲ್ಲಿ ಅಂಗಡಿಗಳಿಗೆ ದಂಡ ಅಥವಾ ಪರವಾನಗಿ ರದ್ದು ಮಾಡಲಾಗುತ್ತಿದೆಯೇ ;

(ಆ) ಅಂಗಡಿಯೊಳಗೆ ಅಥವಾ ಹೊರಗಡೆ ಮದ್ಯ ಸೇವನೆಯ ಕುರಿತು ನಿಯಮಗಳ ಉಲ್ಲಂಘನೆ ನಡೆಯುತ್ತಿದ್ದರೂ ಅಂತಹ ಪ್ರಕರಣಗಳಲ್ಲಿ ಪರವಾನಗಿ ರದ್ದು ಮಾಡುವುದು ಅಥವಾ ಪರವಾನಗಿ ಜಪ್ತಿ ಮಾಡುವುದು ಯಾವ ಮಟ್ಟಿಗೆ ರಾಜ್ಯದಲ್ಲಿ ಜಾರಿಯಲ್ಲಿದೆ ;

(ಇ) ಸಾರ್ವಜನಿಕರಿಂದ ಈ ರೀತಿಯ ದೂರುಗಳು ಬಂದಾಗ, ಅಬಕಾರಿ ಇಲಾಖೆ ಎಷ್ಟು ವೇಳೆಯಲ್ಲಿ ತನಿಖೆ ನಡೆಸಿ ಕ್ರಮ ಕೈಗೊಳ್ಳುತ್ತದೆ ; ಈ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲಾಗುತ್ತಿದೆಯೇ ? (ಮಾಹಿತಿ ನೀಡುವುದು)

## ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡಿರುವ ಕ್ರಮದ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೭೦ (೨೧೯೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಳ್ಳಿ ಪ್ರವಾಸೋದ್ಯಮ (Village Tourism/Agri Tourism) ಇನ್ನೂ ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು ಸ್ವತಂತ್ರ ಅಥವಾ ಸಾರ್ವಜನಿಕ–ಖಾಸಗಿ ಪಾಲುದಾರಿಕೆ ರೂಪದಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ; ಈ ಯೋಜನೆಯಿಂದ ಸ್ಥಳೀಯ ಜನರಿಗೆ ಉದ್ಯೋಗ ಸೃಷ್ಟಿಯಾಗಿದೆಯೇ;

(ಆ) ಪರಿಸರ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರವಾಸೋದ್ಯಮವನ್ನು ಉತ್ತೇಜಿಸಲು ರಾಜ್ಯದಲ್ಲಿ ಯಾವ ನೀತಿಗಳನ್ನು ಜಾರಿಗೆ ತರಲಾಗಿದೆ ; ವಿಶೇಷವಾಗಿ ನೀರಾವರಿ ಪ್ರದೇಶಗಳು, ಹಸಿರು ವಲಯಗಳು ಮತ್ತು ಪರ್ವತ ಪ್ರದೇಶಗಳ ಪ್ರವಾಸೋದ್ಯಮದಲ್ಲಿ ಪರಿಸರ ಹಾನಿ ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಇ) ರಾಜ್ಯದಲ್ಲಿ ಐತಿಹಾಸಿಕ, ಧಾರ್ಮಿಕ ಮತ್ತು ಹೆರಿಟೇಜ್ ಸ್ಥಳಗಳ ಸಂರಕ್ಷಣೆಗಾಗಿ ಇಲಾಖೆ ಪ್ರತಿ ವರ್ಷ ಎಷ್ಟು ಅನುದಾನ ಮೀಸಲಿಡುತ್ತದೆ ? (ಮಾಹಿತಿ ನೀಡುವುದು)

# ಕಾರಾಗೃಹದಲ್ಲಿ ಖೈದಿಗಳಿಗೆ ಐಷಾರಾಮಿ ಸೇವೆಗಳು ನೀಡುತ್ತಿರುವ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೭೧ (೨೨೦೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈ ಹಿಂದೆ ನಡೆದ ಅಧೀವೇಶನದಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: ೧೪೩೬ರಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಖೈದಿಗಳಿಗೆ ಐಶಾರಾಮಿ ಸವಲತ್ತುಗಳು ನೀಡಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಇಲಾಖೆಯಿಂದ "ಈ ಸವಲತ್ತುಗಳ ಬಗ್ಗೆ/ದಿನಪತ್ರಿಕೆಗಳಲ್ಲಿ ಪ್ರಸಾರವಾದ ಸುದ್ದಿಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ವಿಚಾರಣೆಯನ್ನು ನಡೆಸಿ, ಪ್ರಾಥಮಿಕ ವಿಚಾರಣಾ ವರದಿಯನ್ನು ಸಲ್ಲಿಸಿರುವಂತೆ ಕಾರಾಗೃಹಗಳ ಉಪ ಮಹಾ ನಿರೀಕ್ಷಕರು, ದಕ್ಷಿಣ ವಲಯ ಬೆಂಗಳೂರುರವರಿಗೆ ಸೂಚಿಸಲಾಗಿರುತ್ತದೆ" ಎಂದು ಉತ್ತರಿಸಲಾಗಿತ್ತು; ಸದರಿಯವರಿಂದ ಪ್ರಾಥಮಿಕ ವಿಚಾರಣಾ ವರದಿ ಸಲ್ಲಿಸಿರುವಂತೆ; ಈ ಆರೋಪಗಳು ಸಾಬೀತಾಗಿದೆಯೇ ;

(ಆ) ಇದೇ ಉತ್ತರದಲ್ಲಿ "ರಾಜ್ಯದ ಕಾರಾಗೃಹದಲ್ಲಿ ನಡೆದಿರುವ ಕಾನೂನು ಬಾಹಿರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ (ಕಾನೂನು ಮತ್ತು ಸುವ್ಯವಸ್ಥೆ) ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಆದೇಶಿಸಲಾಗಿರುತ್ತದೆ" ಎಂದು ತಿಳಿಸಲಾಗಿರುತ್ತದೆ ; ಸದರಿ ಸಮಿತಿಯು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ ; ಇದ್ದಲ್ಲಿ, ಅದರ ಪ್ರತಿಯನ್ನು ನೀಡುವುದು ;

(ಇ) ಪದೇ ಪದೇ ಈ ರೀತಿಯ ಪ್ರಕರಣಗಳು ಬೆಳಕಿಗೆ ಬರಲು ಕಾರಣಗಳೇನು ; ಕೇವಲ ಅಧಿಕಾರಿಗಳ ವರ್ಗಾವಣೆ ಈ ಸಮಸ್ಯೆಗೆ

ಪರಿಹಾರವೇ ; ವರ್ಗಾವಣೆ ಹೊರತುಪಡಿಸಿ ಬೇರೆ ಕಠಿಣ ಕ್ರಮಗಳು ಯಾವುದಾದಾರೂ ಇವೆಯೇ ? (ಮಾಹಿತಿ ನೀಡುವುದು)

## B.B.M.P ಶಾಲಾ ಕಾಲೇಜುಗಳ ಶಿಕ್ಷಕರಿಗೆ ವೇತನ ಹೆಚ್ಚಳ ಮಾಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :–**

೧೯೭೨ (೨೨೮೯) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಪ್ರಾಥಮಿಕ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಪದವಿ ಕಾಲೇಜುಗಳೆಷ್ಟು ; (ವಿವರ ನೀಡುವುದು)

(ಆ) ಸದರಿ ಶಾಲಾ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಹಾಗೂ ಹೊರಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕ, ಬೋಧಕೇತರರೆಷ್ಟು ; (ವಿವರ ನೀಡುವುದು)

(ಇ) ಸದರಿ ಶಾಲಾ ಕಾಲೇಜುಗಳಲ್ಲಿ ಕರ್ತವ್ಯ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ಹಿಹಿಸುತ್ತಿರುವ ಶಿಕ್ಷಕರಿಗೆ ಯಾವ ಏಜೆನ್ಸಿ ಮೂಲಕ ಎಷ್ಟೆಷ್ಟು ವೇತನವನ್ನು ನೀಡಲಾಗುತ್ತಿದೆ ; (ವಿವರ ನೀಡುವುದು)

(ಈ) ಈ ಶಾಲಾ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರಿಗೆ ಎಷ್ಟು ವರ್ಷಗಳಿಗೊಮ್ಮೆ ವೇತನವನ್ನು ಪರಿಷ್ಕರಣೆ ಮಾಡಲಾಗುತ್ತಿದೆ ; (ವಿವರ ನೀಡುವುದು)

(ಉ) ಸದರಿ ಶಾಲಾ ಕಾಲೇಜುಗಳ ಸಿಬ್ಬಂದಿಗೆ ಕಳೆದ ೮ ತಿಂಗಳಿನಿಂದ ವೇತನ ಪರಿಷ್ಕರಣೆ ಮಾಡಿಲ್ಲದಿರುವುದು ಇಲಾಖೆಯ ಗಮನಕ್ಕೆ

ಬಂದಿದೆಯೇ ; ಬಂದಿದ್ದರೆ, ವೇತನ ಪರಿಷ್ಕರಣೆ ಮಾಡಲಾಗುವುದೇ ? (ವಿವರ ನೀಡುವುದು)

## ರಾಜ್ಯದ ಸಾಧಕ ಕ್ರೀಡಾಪಟುಗಳನ್ನು ಸರ್ಕಾರದ ವಿವಿಧ ಉದ್ಯೋಗಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುತ್ತಿರುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೩ (೨೧೭೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸಾಧಕ ಕ್ರೀಡಾಪಟುಗಳನ್ನು ಸರ್ಕಾರದ ವಿವಿಧ ಉದ್ಯೋಗಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆಯೇ ; ನೇಮಕ ಮಾಡಿಕೊಳ್ಳಲಾಗುತ್ತಿದ್ದಲ್ಲಿ, ಯಾವ ಯಾವ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದವರಿಗೆ ಎ, ಬಿ ಮತ್ತು ಸಿ ದರ್ಜೆ ಹುದ್ದೆ ನೀಡಲಾಗುವುದು ; ಶೈಕ್ಷಣಿಕ ಅರ್ಹತೆಯನ್ನೂ ಪರಿಗಣಿಸಲಾಗುವುದೇ ; ಅದಕ್ಕೆ ಇರುವ ಮಾನದಂಡಗಳೇನು ; ವಿವರವಾದ ಮಾಹಿತಿ ನೀಡುವುದು ;

(ಆ) ಸಾಧಕ ಕ್ರೀಡಾಪಟುಗಳಿಗೆ ಸರ್ಕಾರಿ ನೌಕರಿ ನೀಡಲು ಬಾಕಿ ಇದ್ದಲ್ಲಿ, ಎಷ್ಟು ಅರ್ಜಿಗಳು ಪರಿಶೀಲನಾ ಹಂತದಲ್ಲಿವೆ ; ಎಷ್ಟು ಪ್ರಕರಣಗಳು ಆಯ್ಕೆ ಸಮಿತಿ ಮುಂದಿವೆ ; (ವಿವರ ನೀಡುವುದು)

(ಇ) ಸರ್ಕಾರದ ಎಲ್ಲಾ ಇಲಾಖೆಗಳ ನೇಮಕಾತಿಗಳಲ್ಲೂ ಕ್ರೀಡಾಪಟುಗಳಿಗೆ ಮೀಸಲಾತಿ ಕಲ್ಪಿಸಲಾಗಿದೆಯೇ ಅಥವಾ ಸೀಮಿತ ಇಲಾಖೆಗಳಲ್ಲಿ ಮಾತ್ರ ಮೀಸಲಾತಿ ಇದೆಯೇ ; ಇಲಾಖಾವಾರು ಶೇಕಡವಾರು ಎಷ್ಟು ಮೀಸಲಾತಿ ಸೌಲಭ್ಯವಿದೆ ? (ವಿವರವಾದ ಮಾಹಿತಿ ಒದಗಿಸುವುದು)

# ರಾಜ್ಯದಲ್ಲಿನ SC/ST ದೌರ್ಜನ್ಯಗಳ ಪ್ರಕರಣಗಳನ್ನು ತಡೆಗಟ್ಟುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೪ (೨೧೭೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಜಿಲ್ಲೆಗಳಲ್ಲಿ ಸ್ಥಾಪಿಸಿದ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ(ಡಿಸಿಆರ್‌ಇ) ಸೆಲ್ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ; ಎಷ್ಟು ಠಾಣೆಗಳಿಗೆ ಡಿವೈಎಸ್‌ಪಿಗಳ ನೇಮಕವಾಗಿದೆ ; ಜಿಲ್ಲಾವಾರು ಮಾಹಿತಿ ನೀಡುವುದು ;

(ಆ) ಕೆಲವೊಂದು ಜಿಲ್ಲೆಗಳಲ್ಲಿ ಸದರಿ ಠಾಣೆಗಳಿಗೆ ಇನ್ನೂ ಡಿವೈಎಸ್‌ಪಿಗಳ ನೇಮಕವಾಗದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರಕರಣಗಳ ನಿಯಂತ್ರಣ, ತನಿಖೆಗೆ ಹಿನ್ನಡೆಯಾಗುತ್ತಿದೆ ಎಂಬ ಗಂಭೀರವಾದ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅಧಿಕಾರಿಗಳ ನೇಮಕ ಯಾವಾಗ ಮಾಡಲಾಗುವುದು ;

(ಇ) ರಾಜ್ಯದಲ್ಲಿನ ಎಸ್.ಸಿ / ಎಸ್.ಟಿ. ದೌರ್ಜನ್ಯ ಪ್ರಕರಣಗಳ ಸಂಖ್ಯೆ ಎಷ್ಟು ; ಆ ಪೈಕಿ ವಿಚಾರಣಾ ಹಂತದಲ್ಲಿರುವ ಹಾಗೂ ಮುಕ್ತಾಯಗೊಂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಪ್ರತ್ಯೇಕವಾಗಿ ಮಾಹಿತಿ ನೀಡುವುದು)

# ವಿಜಯಪುರ–ಬಾಗಲಕೋಟೆ ಜಿಲ್ಲೆಯಲ್ಲಿ ಬರುವ ಏತ ನೀರಾವರಿ ಯೋಜನೆಗಳ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೫ (೨೧೭೨) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ–ವಿಜಯಪುರ ಜಿಲ್ಲೆಯಲ್ಲಿ ಬರುವ ಏತ ನೀರಾವರಿ ಯೋಜನೆಗಳು ಯಾವುವು ; ಈ ಯೋಜನೆಗಳಿಗೆ ಸರ್ಕಾರವು ತಾಂತ್ರಿಕ ಅನುಮೋದನೆ, ಆಡಳಿತಾತ್ಮಕ ಅನುಮೋದನೆ ನೀಡಿದ ದಿನಾಂಕ, ಕಾಮಗಾರಿಗೆ ಅಂದಾಜಿಸಿದ ಮೊತ್ತ, ಬಿಡುಗಡೆಯಾದ ಮೊತ್ತ ಎಷ್ಟು ; ಗ್ರಾಮವಾರು, ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು ;

(ಆ) ಅನುಮೋದನೆಗೊಂಡ ಎಷ್ಟು ಏತ ನೀರಾವರಿ ಯೋಜನೆಗಳು ಪ್ರಾರಂಭಗೊಂಡಿವೆ ; ಪ್ರಾರಂಭವಾಗದೇ ಇರುವ ಯೋಜನೆಗಳು ಎಷ್ಟು ; ಏತ ನೀರಾವರಿ ಯೋಜನೆಗಳಿಗೆ ಒಳಪಡುವ ಪ್ರದೇಶದ ಗ್ರಾಮವಾರು ಮಾಹಿತಿ ನೀಡುವುದು ; ಕೆಲವು ಯೋಜನೆಗಳು ಪ್ರಾರಂಭವಾಗದೇ ಇರುವುದಕ್ಕೆ ಕಾರಣಗಳೇನು ; ಯೋಜನೆಗಳು ತ್ವರಿತವಾಗಿ ಪ್ರಾರಂಭವಾಗಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

(ಇ) ಸದರಿ ಏತ ನೀರಾವರಿ ಯೋಜನೆಗಳ ಆಡಿಟ್ ನಡೆಸಲಾಗಿದೆಯೇ ; ಯೊಜನೆವಾರು ಆಡಿಟ್ ವರದಿ ನೀಡುವುದು ?

## ಕೃಷ್ಣ ಮೇಲ್ದಂಡೆ ಯೋಜನೆಯು ಆಮೇಗತಿಯಲ್ಲಿ ಸಾಗುತ್ತಿದ್ದು ಪೂರ್ಣ ಪ್ರಮಾಣ ಮುಗಿಸಿ, ಹುದ್ದೆಗಳನ್ನು ನೇಮಿಸುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೬ (೨೧೭೨) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನೀರಾವರಿ ಯೊಜನೆಗಳಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯು ಅತ್ಯಂತ ಪ್ರಮುಖವಾಗಿದ್ದು, ಇಲ್ಲಿಯವರೆಗೆ ಶೇ ೫೦ರಷ್ಟು ಈ ೬೦ ವರ್ಷಗಳ ಅವಧಿಯಲ್ಲಿ ಸಾಧನೆ ಮಾಡಲಾಗಿಲ್ಲ ಎಂಬುದು ನಿಜವೇ ;

(ಆ) ಸಂತ್ರಸ್ತರ ಪುನರ್ವಸತಿ, ಪುನರ್‌ನಿರ್ಮಾಣದ ಕಾರ್ಯಗಳು ಕೂಡಾ ಆಮೆಗತಿಯಲ್ಲಿ ಸಾಗುತ್ತಿದ್ದು, ಕೃಷ್ಣ ಮೇಲ್ದಂಡೆ ಯೋಜನೆ(ಯುಕೆಪಿ) ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ(ಆರ್&ಆರ್) ಆಯುಕ್ತರ ಹುದ್ದೆ ಸೇರಿದಂತೆ ಜವಾನರವರೆಗೂ ಬಹುಪಾಲು ಹುದ್ದೆಗಳಲ್ಲಿ ಪ್ರಭಾರಿಗಳೇ ಕಾರ್ಯನಿರ್ವಹಿಸುತ್ತಿದ್ದು, ಇದರಿಂದ ಸಂತ್ರಸ್ತರು ಖಾಯಂ ಅಧಿಕಾರಿಗಳು ಇಲ್ಲದ ಕಾರಣಕ್ಕಾಗಿ ಸಮಯಕ್ಕೆ ಸರಿಯಾಗಿ ಅವಶ್ಯಕ ದಾಖಲೆಗಳು (ಹಕ್ಕು ಪತ್ರ) ದೊರೆಯದೇ ಪುನರ್ವಸತಿ/ ಪುನರ್‌ನಿರ್ಮಾಣ ಮಾಡಿಕೊಳ್ಳುವ ದಿಶೆಯಲ್ಲಿ ಅವರು ತೀವ್ರವಾದ ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ವಿಭಾಗದಲ್ಲಿ ಎಷ್ಟು ಮತ್ತು ಯಾವ ಯಾವ ಗ್ರೇಡ್ ಹುದ್ದೆಗಳು ಖಾಲಿ ಇವೆ ಎಂಬ ಸಂಪೂರ್ಣ ವಿವರ ನೀಡುವುದು ;

(ಈ) ಈ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡುವುದು ಯಾವಾಗ ?

## ರಾಜ್ಯದಲ್ಲಿ ಹಾಗೂ ಧಾರವಾಡ ಜಿಲ್ಲೆಯಲ್ಲಿ ಪರವಾನಗಿ ನೀಡಲಾಗಿರುವ ಮದ್ಯದಂಗಡಿಗಳ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೭೭ (೨೨೧೭) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬಾರ್ ಹಾಗೂ ಮದ್ಯ ಮಾರಾಟ ಮಳಿಗೆಗಳನ್ನು ಸ್ಥಾಪಿಸಲು ಇರುವ ನಿಯಮಗಳೇನು ; ಪರವಾನಗಿ ನೀಡುವ ಪ್ರಾಧಿಕಾರ ಯಾವುದು ; ರಾಜ್ಯದಲ್ಲಿ ಎಷ್ಟು ಬಾರ್ ಹಾಗೂ ಮದ್ಯ ಮಾರಾಟ ಮಳಿಗೆಗಳಿವೆ ; ಅವುಗಳಿಂದ ಸರ್ಕಾರಕ್ಕೆ

ಸಂಗ್ರಹವಾಗುತ್ತಿರುವ ಆದಾಯವೆಷ್ಟು ; (ಮದ್ಯ ಮಾರಾಟ ಮಳಿಗೆವಾರು ಮತ್ತು ಜಿಲ್ಲಾವಾರು ವಿವರ ನೀಡುವುದು)

(ಆ) ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿ ಕಾನೂನು ಬಾಹಿರವಾಗಿ/ ನಿಯಮ ಮೀರಿ ಸ್ಥಾಪಿತವಾಗಿರುವ ಮದ್ಯದಂಗಡಿಗಳೆಷ್ಟು ಮತ್ತು ಯಾವುವು ; ಸದರಿ ಘಟಕಗಳಿಗೆ ಸರ್ಕಾರದಿಂದ ಕೈಗೊಳ್ಳಲಾಗಿರುವ ಕ್ರಮವೇನು ;

(ಇ) ಧಾರವಾಡ ಜಿಲ್ಲೆಯಲ್ಲಿರುವ ಮದ್ಯದಂಗಡಿಗಳೆಷ್ಟು ; ಕಳೆದ ಮೂರು ವರ್ಷಗಳಿಂದ ಇವುಗಳಿಂದ ಸಂಗ್ರಹವಾಗಿರುವ ಆದಾಯವೆಷ್ಟು ; ಹಾಗೂ ಎಷ್ಟು ಹೊಸ ಮದ್ಯದಂಗಡಿಗಳಿಗೆ ಪರವಾನಗಿ ನೀಡಲಾಗಿದೆ ಮತ್ತು ಪರವಾನಗಿ ನೀಡಲು ಸಲ್ಲಿಕೆಯಾಗಿರುವ ಪ್ರಸ್ತಾವನೆಗಳೆಷ್ಟು ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಈ) ರಾಜ್ಯದಲ್ಲಿ ಬಾರ್ ಹಾಗೂ ವೈನ್‌ಶಾಪ್‌ಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಿಸಲು ಇರುವ ನಿಯಮಗಳೇನು ; ಸ್ಥಳಾಂತರಿಸುವ ಅಧಿಕಾರ ವ್ಯಾಪ್ತಿ ಎಷ್ಟು ; ಪ್ರಾಧಿಕಾರ ಯಾವುದು ; (ವಿವರ ನೀಡುವುದು)

(ಉ) ಕಳೆದ ಮೂರು ವರ್ಷಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಬಾರ್ ಹಾಗೂ ವೈನ್ ಶಾಪ್‌ಗಳನ್ನು ಸ್ಥಳಾಂತರಿಸಲಾಗಿದೆ ; ಯಾವ ಯಾವ ಕಾರಣಗಳಿಗಾಗಿ ಸ್ಥಳಾಂತರಿಸಲಾಗಿದೆ ? (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

## ಕರಾವಳಿ ಪ್ರವಾಸೋದ್ಯಮ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೭೮ (೨೨೨೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕರಾವಳಿ ಸುಮಾರು ೩೨೦ ಕಿ.ಮೀ ಉದ್ದ ಹೊಂದಿದ್ದು, ಇಲ್ಲಿ ಹೊಸ ಬಗೆಯ ಪ್ರವಾಸಿ ಆಕರ್ಷಣೆಗಳಿಗೆ ಪೂರಕವಾದ ಭೌಗೋಳಿಕ ಧಾರ್ಮಿಕ ಸಾಂಸ್ಕೃತಿಕ ಹಾಗೂ ಪಾರಂಪರಿಕ ಹಿನ್ನಲೆಯನ್ನು ಹೊಂದಿರುವ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಹೇರಳ ಅವಕಾಶಗಳಿರುವ ಕರಾವಳಿಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ರೂಪಿಸಿರುವ ಯೋಜನೆಗಳೇನು ;

(ಆ) ಧಾರ್ಮಿಕ, ಜೈವಿಕ ಪರಿಸರ ಮತ್ತು ಬೀಚ್‌ಗಳ ಅಭಿವೃದ್ಧಿಗೆ ಪೂರಕವಾಗಿ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಬೇಕಾಗಿದ್ದು ಈ ಕುರಿತು ಸರ್ಕಾರ ರೂಪಿಸಿರುವ ಯೋಜನೆಗಳೇನು ;

(ಇ) ಕರಾವಳಿಯ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿ 'ಹೆಲಿ ಟೂರಿಸಂ' ಸೌಲಭ್ಯ ಯೋಜನೆಯನ್ನು ಅನುಷ್ಠಾನಕ್ಕೆ ತರುವುದು ಅತ್ಯಂತ ಅಗತ್ಯವಾಗಿದ್ದು ಈ ಕುರಿತು ಸರ್ಕಾರ ಯಾವ ಕ್ರಮ ವಹಿಸಿದೆ ;

(ಈ) ಕರಾವಳಿಯಲ್ಲಿ ಸುಮಾರು ೨೨ ಬೀಚ್ ಹಾಗೂ ೩೦ ಕ್ಕೂ ಹೆಚ್ಚು ಪ್ರಮುಖ ಧಾರ್ಮಿಕ ಕೇಂದ್ರಗಳಿದ್ದು, ಪ್ರವಾಸೋದ್ಯಮಕ್ಕೆ ವಿಫಲ ಅವಕಾಶಗಳಿದ್ದು, ಪರಿಸರಕ್ಕೆ ಪೂರಕವಾದ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದ್ದು ; ಕರಾವಳಿಗೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ ರೂಪಿಸಿ, ಅಭಿವೃದ್ಧಿ ಪಡಿಸಬೇಕಾದ ಅನಿವಾರ್ಯತೆ ಇದ್ದು, ಈ ಕುರಿತು ಸರ್ಕಾರ ಕೂಡಲೇ ಅಗತ್ಯ ಕ್ರಮ ವಹಿಸುವುದೇ ?

## ನಿವೃತ್ತ ನೌಕರರಿಗೂ 'ಆರೋಗ್ಯ ಸಂಜೀವಿನಿ' ಯೋಜನೆ ಜಾರಿ ಮಾಡುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೭೯ (೨೨೨೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ಭಾಗವಾಗಿ ಕೆಲಸ ಮಾಡಿದ ನಿವೃತಿ ನೌಕರರಿಗೆ ನಗದು ರಹಿತ ಆರೋಗ್ಯ ಸೇವೆ ಒದಗಿಸುವ ಯೋಜನೆ ಜಾರಿಗೊಳಿಸಬೇಕೆಂಬ ಬೇಡಿಕೆ ನಿರಂತರವಾಗಿ ಕೇಳಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರಿ ನೌಕರರಿಗೆ ಈಗಾಗಲೇ ಜಾರಿಗೊಳಿಸಿರುವ ಆರೋಗ್ಯ ಸಂಜೀವಿನಿ ಯೋಜನೆಯನ್ನು ನಿವೃತ್ತ ನೌಕರರಿಗೂ ವಿಸ್ತರಿಸಲು ಸರ್ಕಾರ ಇದುವರೆಗೆ ಯಾವುದೇ ಅಗತ್ಯ ಕ್ರಮ ವಹಿಸದೇ ಇರಲು ಕಾರಣಗಳೇನು ;

(ಇ) ತಮ್ಮ ಜೀವಿತಾವಧಿಯ ಬಹುಭಾಗವನ್ನು ಸರ್ಕಾರದ ಭಾಗವಾಗಿ ಕೆಲಸ ಮಾಡಿ ನಿವೃತ್ತಿ ಆದ ನಂತರ ಅನೇಕ ವಯೋಸಹಜ ಹಾಗೂ ತೀವ್ರತರವಾದ ಖಾಯಿಲೆಗಳಿಂದ ಬಳಲುವ ಪರಿಸ್ಥಿತಿ ನಿರ್ಮಾಣಗೊಳ್ಳುವ ಕಾರಣದಿಂದಾಗಿ ನಿವೃತ್ತ ನೌಕರರಿಗೂ ಈ ಯೋಜನೆಯನ್ನು ವಿಸ್ತರಿಸುವುದು ಸೂಕ್ತವಾಗಿರುವುದರಿಂದ ಯಾವ ಕಾಲಮಿತಿಯೊಳಗೆ ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸಲು ಅಗತ್ಯ ಕ್ರಮ ವಹಿಸಲಾಗುವುದು ?

## ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ನಿಷೇಧಿತ ವಸ್ತುಗಳು ಪತ್ತೆಯಾಗಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೮೦ (೨೨೨೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿ ಪೊಲೀಸರು ಇತ್ತೀಚೆಗೆ ದಾಳಿ ನಡೆಸಿ, ವಿವಿಧ ಬ್ಯಾರಕ್‌ಗಳಲ್ಲಿ ತಪಾಸಣೆ ನಡೆಸಿದಾಗ ಹಲವಾರು ರೀತಿಯ ನಿಷೇಧಿತ ವಸ್ತುಗಳು ವ್ಯಾಪಕವಾಗಿ ಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಜೈಲಿನ ಒಳಗಡೆ ಹಲವು ಬಾರಿ ಈ ರೀತಿಯಲ್ಲಿ ವಿವಿಧ ರೀತಿಯ ನಿಷೇಧಿತ ವಸ್ತುಗಳು ಪದೇ ಪದೇ ಕಂಡುಬರುತ್ತಿದ್ದರು ಇದರ ವಿರುದ್ಧ ಸರ್ಕಾರ ಇದುವರೆಗೆ ಯಾವುದೇ ಕಠಿಣ ಕ್ರಮ ವಹಿಸದಿರಲು ಕಾರಣಗಳೇನು ;

(ಇ) ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳು ಅವಿರತವಾಗಿ ನಡೆಯುತ್ತಿರುವ ಮಾಹಿತಿ ಇದ್ದರೂ, ಅದನ್ನು ತಡೆಯಲು ಮತ್ತು ಅವುಗಳಿಗೆ ಶಾಶ್ವತವಾಗಿ ಕಡಿವಾಣ ಹಾಕಲು ಸರ್ಕಾರ ಇದುವರೆಗೆ ಯಾವುದೇ ಕಠಿಣ ಕ್ರಮಗಳನ್ನು ಕೈಗೊಳ್ಳಲು ಸಂಪೂರ್ಣವಾಗಿ ವಿಫಲವಾಗಿರುವುದಕ್ಕೆ ಕಾರಣಗಳೇನು ;

(ಈ) ಹಣದ ಆಸೆಗೆ ಜೈಲು ಅಧಿಕಾರಿಗಳೇ ಕೈದಿಗಳ ಜೊತೆ ಶಾಮೀಲಾಗಿದ್ದು, ಈ ರೀತಿಯ ಅಕ್ರಮಗಳಿಗೆ ಸಂಪೂರ್ಣವಾಗಿ ಅವರೇ ಕಾರಣರಾಗಿದ್ದು, ೨೦೨೪, ೨೦೨೫ ಮತ್ತು ೨೦೨೬ನೇ ವರ್ಷದಲ್ಲಿ ಅಂತಹ ಎಷ್ಟು ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ಇದುವರೆಗೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಮಕ್ಕಳ ಕಳ್ಳಸಾಗಣೆ ಪ್ರಕರಣಗಳ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೮೧ (೨೨೨೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಕ್ಕಳ ನಾಪತ್ತೆಯ ಹಲವಾರು ಪ್ರಕರಣಗಳು ನಿರಂತರವಾಗಿ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ವರದಿಯಾಗಿರುವ ಮಕ್ಕಳ ನಾಪತ್ತೆ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ವರದಿಯಾಗಿರುವ ಮಕ್ಕಳ ನಾಪತ್ತೆ ಪ್ರಕರಣಗಳಲ್ಲಿ ಹಲವಾರು ಮಕ್ಕಳು ಮಾನವ ಕಳ್ಳಸಾಗಣೆ ಜಾಲಕ್ಕೆ ಸಿಲುಕಿರುವ ಅಪಾಯವಿದ್ದು ಈ ಕುರಿತು ಸರ್ಕಾರ ಯಾವ ಕ್ರಮ ವಹಿಸಿದೆ ;

(ಇ) ಕಳೆದ ೩ ವರ್ಷಗಳಿಂದ ಇಲ್ಲಿಯವರೆಗೆ ಮಕ್ಕಳ ಕಳ್ಳಸಾಗಣೆಯ ಪ್ರತ್ಯೇಕ ಪ್ರಕರಣಗಳು ಎಷ್ಟು ದಾಖಲಾಗಿವೆ ;

(ಈ) ಮಕ್ಕಳ ಕಳ್ಳಸಾಗಣೆಯನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಪ್ರಸಕ್ತ ಹಣಕಾಸು ವರ್ಷದಲ್ಲಿ ತೆರಿಗೆ ಸಂಗ್ರಹ ಕುಂಠಿತಗೊಂಡಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೮೨ (೨೧೯೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೧೦ ವರ್ಷದ ರಾಜ್ಯದ ತಲಾವಾರು ಆದಾಯದ ವಿವರವನ್ನು ವರ್ಷವಾರು ನೀಡುವುದು ; ತಲಾವಾರು ಆದಾಯವನ್ನು ಪರಿಗಣಿಸಲು ಇರುವ ಮಾನದಂಡಗಳೇನು ;

(ಆ) ೨೦೨೩–೨೪ ಮತ್ತು ೨೦೨೪–೨೫ರ ಆಯವ್ಯಯದಲ್ಲಿ ಸರ್ಕಾರ ನಿರೀಕ್ಷಿಸಿದ ತೆರಿಗೆ ಸಂಗ್ರಹ ಗುರಿ ಎಷ್ಟು ; ಆಗಿರುವ ತೆರಿಗೆ ಸಂಗ್ರಹ ಎಷ್ಟು ; (ವರ್ಷವಾರು, ಇಲಾಖಾವಾರು ವಿವರ ನೀಡುವುದು)

(ಇ) ೨೦೨೫–೨೬ನೇ ಸಾಲಿನಲ್ಲಿ ಸರ್ಕಾರ ನಿರೀಕ್ಷಿಸಿದ ತೆರಿಗೆ ಸಂಗ್ರಹ ಎಷ್ಟು ; ೨೦೨೬, ಫೆಬ್ರವರಿ ಅಂತ್ಯಕ್ಕೆ ಆಗಿರುವ ತೆರಿಗೆ ಸಂಗ್ರಹ ಎಷ್ಟು ; (ಇಲಾಖಾವಾರು ವಿವರ ನೀಡುವುದು) ತೆರಿಗೆ ಸಂಗ್ರಹ ಕುಂಠಿತಗೊಳ್ಳಲು ಕಾರಣಗಳೇನು ;

(ಈ) ೨೦೨೫-೨೬ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಎಲ್ಲಾ ಇಲಾಖೆ/ನಿಗಮ ಮಂಡಳಿಗಳಿಗೆ ಬಿಡುಗಡೆ ಮಾಡಿರುವ ಮತ್ತು ಬಿಡುಗಡೆ ಮಾಡಲು ಬಾಕಿ ಇರುವ ಅನುದಾನ ಎಷ್ಟು ; (ಇಲಾಖಾವಾರು ವಿವರ ನೀಡುವುದು) ಅನುದಾನ ಬಿಡುಗಡೆ ಆಗದೆ ನಿಗಮ/ ಮಂಡಳಿಗಳು ಪ್ರಗತಿ ದಾಖಲಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಬಿಡುಗಡೆಗೆ ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

## ಬೆಂಗಳೂರಿನಲ್ಲಿ ಸಂಗ್ರಹವಾಗುವ ಕಸವನ್ನು ವಿಲೇವಾರಿ ಮಾಡುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೯೮೩ (೨೧೮೯) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ಪ್ರತಿ ನಿತ್ಯ ಎಷ್ಟು ಟನ್ ಹಸಿ ಮತ್ತು ಒಣ ಕಸ ಉತ್ಪಾದನೆ ಆಗುತ್ತಿದೆ ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಆ) ಸದರಿ ಕಸವನ್ನು ವೈಜ್ಞಾನಿಕವಾಗಿ ಯಾವ ರೀತಿ ವಿಲೇವಾರಿ ಮಾಡಲಾಗುತ್ತಿದೆ ; (ವಿವರ ನೀಡುವುದು)

(ಇ) ಈ ಕಸವನ್ನು ಯಾವ ಯಾವ ಸ್ಥಳಗಳಲ್ಲಿ ಡಂಪ್ ಮಾಡಲಾಗುತ್ತಿದೆ; ಸದರಿ ಡಂಪಿಂಗ್ ಯಾರ್ಡ್‌ಗಳ ಒಟ್ಟು ಸಾಮರ್ಥ್ಯ ಎಷ್ಟು ; ಪ್ರತಿ ದಿನ ಈ ಡಂಪಿಂಗ್ ಯಾರ್ಡ್‌ಗಳಿಗೆ ಎಷ್ಟು ಲಾರಿ ಕಸ ಸಾಗಿಸಲು ಆದೇಶ ಆಗಿದೆ ; (ಆದೇಶದ ಪ್ರತಿ ಒದಗಿಸುವುದು)

(ಈ) ಪ್ರಸ್ತುತ ಇರುವ ಡಂಪಿಂಗ್ ಯಾರ್ಡ್‌ಗಳ ಸುತ್ತಮುತ್ತಲ ಪ್ರದೇಶವನ್ನು ಅಭಿವೃದ್ಧಿಪಡಿಸಲು ಹಾಗೂ ಡಂಪಿಂಗ್ ಯಾರ್ಡ್‌ಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ ; (ಆದೇಶದ ಪ್ರತಿ ನೀಡುವುದು) ಹೊಸದಾಗಿ ಡಂಪಿಂಗ್ ಯಾರ್ಡ್‌ಗಳಿಗಾಗಿ ಸ್ಥಳಗಳನ್ನು ಆಯ್ಕೆ ಮಾಡಲಾಗಿದೆಯೇ ; (ವಿವರ ನೀಡುವುದು)

(ಉ) ಡಂಪಿಂಗ್ ಯಾರ್ಡ್‌ಗಳಿಗೆ ಕಸ ಸಾಗಿಸಲು ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಿರುವುದಕ್ಕೆ ಕಾರಣಗಳೇನು ?

## ನಿಗಮ/ಮಂಡಳಿಗಳಿಗೆ ಅನುದಾನ ನೀಡುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೮೪ (೨೧೯೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಿನಾಂಕ: ೦೧.೦೬.೨೦೨೩ ರಿಂದ ೨೮.೦೨.೨೦೨೬ ರವರೆಗೆ ಸರ್ಕಾರ ನಿಗಮ/ಮಂಡಳಿಗಳಿಗೆ ಮಂಜೂರು ಮಾಡಿರುವ ಮತ್ತು ಬಿಡುಗಡೆ ಮಾಡಿರುವ ಅನುದಾನ ಎಷ್ಟು ; (ವರ್ಷವಾರು ವಿವರವನ್ನು ನಿಗಮ/ಮಂಡಳಿವಾರು ನೀಡುವುದು)

(ಆ) ಘೋಷಣೆ ಮಾಡಲಾದ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡದಿರಲು ಕಾರಣಗಳೇನು ;

(ಇ) ಬಜೆಟ್‌ನಲ್ಲಿ ಮೀಸಲಿಟ್ಟಿದ್ದ ಅನುದಾನ ಬಿಡುಗಡೆಯಾಗದ ಕಾರಣ ನಿಗಮ/ಮಂಡಳಿಗಳ ಸಾಧನೆ ಶೂನ್ಯವಾಗಿರುವುದು ಮತ್ತು ನಿಗಮ/ ಮಂಡಳಿಗಳು ಗುರಿ ಸಾಧಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಜೆಟ್‌ನಲ್ಲಿ ಘೋಷಣೆ ಮಾಡಿರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

## ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೮೫ (೨೧೯೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸರ್ಕಾರದ ಸಚಿವಾಲಯ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ನಿಗಮ ಮಂಡಳಿಗಳಲ್ಲಿ ಮಂಜೂರಾಗಿರುವ ಒಟ್ಟು ಸರ್ಕಾರಿ ಹುದ್ದೆಗಳೆಷ್ಟು ; ಈ ಪೈಕಿ ಪ್ರಸ್ತುತ ಖಾಲಿ ಇರುವ ಹುದ್ದೆಗಳೆಷ್ಟು ; (ಇಲಾಖೆ/ನಿಗಮ–ಮಂಡಳಿವಾರು ಹುದ್ದೆವಾರು ವಿವರ ನೀಡುವುದು)

(ಆ) ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು ; ದೊಡ್ಡ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇರುವುದರಿಂದ ದೈನಂದಿನ ಆಡಳಿತ ನಿರ್ವಹಣೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ದಿ: ೦೧.೦೬.೨೦೨೩ ರಿಂದ ೨೮.೦೨.೨೦೨೬ ರವರೆಗೆ ಖಾಲಿ ಹುದ್ದೆಗಳ ಭರ್ತಿಗೆ ಎಷ್ಟು ಅಧಿಸೂಚನೆ ಹೊರಡಿಸಲಾಗಿದೆ ; ಎಷ್ಟು ಹುದ್ದೆಗಳ ಭರ್ತಿ ಆಗಿದೆ ; ನೇಮಕಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ ; (ಸಮಗ್ರ ವಿವರವನ್ನು ಇಲಾಖಾವಾರು ನೀಡುವುದು)

(ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ನಿರುದ್ಯೋಗಿಗಳು ಪ್ರತಿಭಟನೆ ನಡೆಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಅಪಘಾತ ಪ್ರಕರಣಗಳನ್ನು ತಡೆಗಟ್ಟುವ ಬಗ್ಗೆ

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೮೬ (೨೩೦೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫–೨೬ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಎಷ್ಟು ಅಪಘಾತ ಪ್ರಕರಣಗಳು ಬೆಳಕಿಗೆ ಬಂದಿವೆ ; ಈ ಅಪಘಾತಗಳಿಗೆ ಮೃತಪಟ್ಟವರ ಸಂಖ್ಯೆ ಎಷ್ಟು ; ಗಂಭೀರ ಊನಗಳಿಗೆ ಒಳಗಾದವರ ಸಂಖ್ಯೆ ಎಷ್ಟು ;

(ಆ) ಕಳೆದ ೩ ವರ್ಷಗಳಿಂದ ಈ ಜಿಲ್ಲೆಯಲ್ಲಿ ಅಪಘಾತ ಪ್ರಕರಣಗಳು ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಪಘಾತ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ರಾಜ್ಯದಲ್ಲಿ ಅಣೆಕಟ್ಟು ಪುನರ್ ವಸತಿ ಮತ್ತು ಸುಧಾರಣೆ ಯೋಜನೆ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೯೮೭ (೨೨೩೫) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ಜಲಸಂಪನ್ಮೂಲ ಇಲಾಖೆಯು ರಾಜ್ಯದಲ್ಲಿ ಅಣೆಕಟ್ಟು ಪುನರ್ ವಸತಿ ಮತ್ತು ಸುಧಾರಣೆ ಯೋಜನೆಯನ್ನು ಆರಂಭಿಸಿದೆಯೇ ; ಆರಂಭಿಸಿದ್ದಲ್ಲಿ, ಎಂದಿನಿಂದ ಮತ್ತು ಎಷ್ಟು ಹಂತಗಳಲ್ಲಿ ಆರಂಭಿಸಲಾಗಿರುತ್ತದೆ ; ಪ್ರಸ್ತುತ ಈ ಯೋಜನೆ ಯಾವ ಹಂತದಲ್ಲಿ ಇರುತ್ತದೆ ;

(ಆ) ರಾಜ್ಯದಲ್ಲಿ ಎಷ್ಟು ಅಣೆಕಟ್ಟುಗಳ ದುರಸ್ಥಿ ಕಾಮಗಾರಿಯನ್ನು ಪ್ರಸ್ತುತ ವರ್ಷ ಕೈಗೊಳ್ಳಲಾಗಿದೆ ; ಅಣೆಕಟ್ಟುಗಳ ದುರಸ್ಥಿ ಕಾಮಗಾರಿಗೆ

ಅಂದಾಜು ಮಾಡಿರುವ ಹಣವೆಷ್ಟು ; ಕಾಮಗಾರಿಗೆ ಬಿಡುಗಡೆಯಾಗಿರುವ ಹಣವೆಷ್ಟು ; ಯಾವ ಯಾವ ಅಣೆಕಟ್ಟುಗಳ ದುರಸ್ಥಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ ;

(ಇ) ಕರ್ನಾಟಕ ಜಲಸಂಪನ್ಮೂಲ ಇಲಾಖೆಯಲ್ಲಿ ಇರುವ ಒಟ್ಟು ಅಭಿಯಂತರಗಳು ಎಷ್ಟು ; ಯಾವ ಯಾವ ವರ್ಗದ ಅಭಿಯಂತರಗಳು ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ; ಇದರಲ್ಲಿ ನಿಯೋಜನೆಯ ಮೇಲೆ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ; (ಇಂಜಿನಿಯರ್‌ಗಳ ಪೂರ್ಣ ವಿವರಗಳನ್ನು ಹೆಸರು ಸಹಿತವಾಗಿ ಒದಗಿಸುವುದು)

(ಈ) ಜಲಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಯಾವ ಯಾವ ನಿಗಮಗಳು ಕೆಲಸ ಮಾಡುತ್ತಿವೆ ; ಇಲಾಖೆಯಲ್ಲಿ ಇರುವ ಒಟ್ಟು ಮುಖ್ಯ ಇಂಜಿನಿಯರ್‌ಗಳು ಎಷ್ಟು ; (ಅವರ ಸೇವಾವಧಿ ಸಹಿತವಾಗಿ ವಿವರಗಳನ್ನು ಒದಗಿಸುವುದು)

(ಉ) ಜಲಸಂಪನ್ಮೂಲ ಇಲಾಖೆಗೆ ಹಂಚಿಕೆಯಾಗಿರುವ ಸಿಬ್ಬಂದಿ ಎಷ್ಟು ; ಇದರಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು ; ಖಾಲಿ ಇರುವ ಹುದ್ದೆಗಳು ಎಷ್ಟು ? (ವಿವರಗಳನ್ನು ಒದಗಿಸುವುದು)

## ಕರ್ನಾಟಕ ಅಂಚೆ ಮತ್ತು ಟೆಲಿಕಾಂ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೯೮೮ (೨೨೩೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಅಂಚೆ ಮತ್ತು ಟೆಲಿಕಾಂ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘವು ನೂರಾರು ಕೋಟಿ ರೂಪಾಯಿಗಳ ಹಗರಣದಲ್ಲಿ ಭಾಗಿಯಾಗಿರುವ ಕುರಿತು Deccan Herald

ಪತ್ರಿಕೆಯಲ್ಲಿ ದಿ: ೧೪.೦೭.೨೦೨೩ರಲ್ಲಿ ಪ್ರಕಟವಾದ ವರದಿ ಮತ್ತು ಸಂಘದ ಸದಸ್ಯರ ದೂರಿನ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಈ ಸಹಕಾರ ಸಂಘದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಸದಸ್ಯರಿದ್ದು, ಸದಸ್ಯರಿಂದ ಠೇವಣಿ ಸಂಗ್ರಹ ಮಾಡಿದ್ದರು ಸದಸ್ಯರಿಗೆ ನಿವೇಶನ ನೀಡದೆ ಸದಸ್ಯರಲ್ಲದವರಿಗೆ ನಿವೇಶನ ಹಂಚಿಕೆ ಮಾಡಿರುವ ವಂಚನೆಯ ದೂರುಗಳು ಬಂದಿದ್ದು, ಸರ್ಕಾರ ಈ ಕುರಿತು ತನಿಖೆ ಮಾಡಿರುತ್ತದೆಯೇ ; ಮಾಡಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಸದರಿ ಪ್ರಕರಣದಲ್ಲಿ ವಂಚನೆ ಆಗಿರುವ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸಲು ಸಹಕಾರ ಇಲಾಖೆಯು ಪ್ರಧಾನ ಕಾರ್ಯದರ್ಶಿಗಳಿಗೆ ಮತ್ತು ಆರ್.ಸಿ.ಎಸ್ ರವರಿಗೆ ಸರ್ಕಾರ ಸೂಚನೆ ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

(ಈ) ಈ ಸಂಘವು ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವ ಬದಲು ಸಹಕಾರ ಕಾಯ್ದೆ ನಿಯಮ ಮತ್ತು ಬೈಲಾ ಉಲ್ಲಂಘನೆ ಮಾಡಿ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿಕೊಂಡಿರುವ ಕುರಿತು ಗಂಭೀರ ಆರೋಪಗಳು ಬಂದಿದ್ದು, ಸರ್ಕಾರ ಯಾವಾಗ ಈ ಸಹಕಾರ ಸಂಘದ ತನಿಖೆಗೆ ಮುಂದಾಗುತ್ತದೆ ;

(ಉ) ಈ ಸಹಕಾರ ಸಂಘದಲ್ಲಿ ನಿಯಮಾನುಸಾರ ಲೆಕ್ಕ ಪರಿಶೋಧನೆ ಆಗಿರುತ್ತದೆಯೇ ? (ಆಗಿದ್ದಲ್ಲಿ ಕಳೆದ ೩ ವರ್ಷಗಳ ಲೆಕ್ಕಪರಿಶೋಧನೆಯ ಪ್ರತಿಯನ್ನು ಒದಗಿಸುವುದು)

## ರಾಜ್ಯ ಪೊಲೀಸ್ ಇಲಾಖೆಯಲ್ಲಿ ಗನ್‌ಮ್ಯಾನ್ ಒದಗಿಸುವ ಬಗ್ಗೆ

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೯೪೯ (೨೨೩೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಪೊಲೀಸ್ ಇಲಾಖೆಯಲ್ಲಿ ಗನ್‌ಮ್ಯಾನ್ ಒದಗಿಸುವ ಕುರಿತು ಇರುವ ನಿಯಮಾವಳಿಗಳು ಏನು ; ಒಟ್ಟು ಎಷ್ಟು ಗನ್ ಮ್ಯಾನ್‌ಗಳನ್ನು ರಾಜ್ಯದಲ್ಲಿ ಒದಗಿಸಲಾಗಿದೆ ; (ವಿವರಗಳನ್ನು ಒದಗಿಸುವುದು)

(ಆ) ರಾಜ್ಯದಲ್ಲಿರುವ ಎಷ್ಟು ಐಎಎಸ್, ಐಪಿಎಸ್, ಐಎಫ್‌ಎಸ್ ಮತ್ತು ಇತರೆ ಉನ್ನತ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಗನ್‌ಮ್ಯಾನ್‌ಗಳನ್ನು ಒದಗಿಸಿರುತ್ತದೆ ; (ಪೂರ್ಣ ವಿವರಗಳನ್ನು ಒದಗಿಸುವುದು)

(ಇ) ರಾಜ್ಯ ಸರ್ಕಾರಿ ನೌಕರರಿಗೆ ಗನ್‌ಮ್ಯಾನ್‌ಗಳನ್ನು ಒದಗಿಸಲು ನಿಯಮಾವಳಿಗಳಲ್ಲಿ ಅವಕಾಶ ಇದೆಯೇ ; ಸರ್ಕಾರ ರಾಜ್ಯದ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಿಗೆ ಅಥವಾ ಸರ್ಕಾರಿ ನೌಕರರಿಗೆ ಗನ್‌ಮ್ಯಾನ್ ಗಳನ್ನು ಒದಗಿಸಿದೆಯೇ ; (ಒದಗಿಸಿದ್ದಲ್ಲಿ, ಅವರ ಪೂರ್ಣ ವಿವರಗಳನ್ನು ಮತ್ತು ಯಾವ ಕಾರಣಕ್ಕೆ ಗನ್ ಮ್ಯಾನ್‌ಗಳನ್ನು ಒದಗಿಸಲಾಗಿದೆ ಎಂಬುದರ ಮಾಹಿತಿ ಒದಗಿಸುವುದು ;

(ಈ) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಗನ್ ಮ್ಯಾನ್‌ಗಳನ್ನು ಒದಗಿಸಿದೆಯೇ ; (ಒದಗಿಸಿದ್ದಲ್ಲಿ, ಅವರ ಮಾಹಿತಿಯನ್ನು ಮತ್ತು ಪದನಾಮದ ಸಹಿತವಾಗಿ ಒದಗಿಸುವುದು)

(ಉ) ಕರ್ನಾಟಕದಲ್ಲಿ ವಿಐಪಿಗಳು, ಸರ್ಕಾರಿ ಅಧಿಕಾರಿಗಳು ಹಾಗೂ ಸರ್ಕಾರಿ ನೌಕರರನ್ನು ಹೊರತುಪಡಿಸಿ ಇತರೆ ಖಾಸಗಿ ವ್ಯಕ್ತಿಗಳಿಗೆ ಗನ್‌ಮ್ಯಾನ್‌ಗಳನ್ನು ಒದಗಿಸಲಾಗಿದೆಯೇ ? (ಒದಗಿಸಿದ್ದಲ್ಲಿ, ಕಾರಣ ಸಹಿತವಾಗಿ ಪೂರ್ಣ ವಿವರಗಳನ್ನು ಒದಗಿಸುವುದು)

# ತುಮಕೂರು ಜಿಲ್ಲೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿಯ ಹಾಗೂ ಕೆರೆಗಳ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೯೯೦ (೨೨೩೮) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಇರುವ ನೀರಾವರಿ ಕೆರೆಗಳು ಎಷ್ಟು ; ಜಿನುಗು ಕೆರೆಗಳು ಎಷ್ಟು ; ನಿರುಪಯುಕ್ತ ಕೆರೆಗಳು ಎಷ್ಟು ; (ತಾಲ್ಲೂಕುವಾರು ಕೆರೆಗಳ ವಿವರಗಳನ್ನು ಒದಗಿಸುವುದು)

(ಆ) ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ, ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯವತಿಯಿಂದ ಯಾವ ಯಾವ ಏತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ; ಜಾರಿಗೊಳಿಸಿದ್ದಲ್ಲಿ, ಯೋಜನೆಯ ಒಟ್ಟು ಅಂದಾಜು ವೆಚ್ಚ, ಬಿಡುಗಡೆಯಾದ ಅನುದಾನ ಬಿಡುಗಡೆಗೆ ಬಾಕಿ ಇರುವ ಅನುದಾನವೆಷ್ಟು ; (ವಿವರಗಳನ್ನು ಒದಗಿಸುವುದು)

(ಇ) ಈ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಅನುಮೋದನೆಗೊಂಡಿರುವ ಪಿಕಪ್ ಎಷ್ಟು ; ಅಣೆಕಟ್ಟು ಎಷ್ಟು, ಚೆಕ್ ಡ್ಯಾಂ ಎಷ್ಟು ; ಈ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನ, ವೆಚ್ಚವಾಗಿರುವ ಹಣ ಬಾಕಿ ಇರುವ ಕಾಮಗಾರಿಗಳು ಎಷ್ಟು ; (ಪೂರ್ಣ ವಿವರಗಳನ್ನು ಒದಗಿಸುವುದು)

(ಈ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಗಂಟೀನಹಳ್ಳಿ ಕೆರೆಯ ಅಭಿವೃದ್ಧಿಗೆ ಸಣ್ಣ ನೀರಾವರಿ ಇಲಾಖೆಯವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಮತ್ತು ಖರ್ಚಾಗಿರುವ ಹಾಗೂ ಬಾಕಿಯಿರುವ ಅನುದಾನವೆಷ್ಟು ; (ಕಾಮಗಾರಿಗಳ ಸಹಿತವಾಗಿ ೩ ವರ್ಷಗಳ ವಿವರಗಳನ್ನು ಒದಗಿಸುವುದು)

(ಉ) ತುಮಕೂರು ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ; ಈ ಕಾಮಗಾರಿಗಳಿಗೆ ಕೇಂದ್ರ ನೀಡಿರುವ ಅನುದಾನವೆಷ್ಟು ; ರಾಜ್ಯ ನೀಡಿರುವ ಬಾಕಿ ಇರುವ ಅನುದಾನವೆಷ್ಟು ಬಳಕೆಯಾಗಿರುವ ಅನುದಾನ ಎಷ್ಟು ; ಬಳಕೆಗೆ ಅನುದಾನವೆಷ್ಟು ? (ತಾಲ್ಲೂಕುವಾರು ಪೂರ್ಣ ವಿವರಗಳನ್ನು ಒದಗಿಸುವುದು)

## ಅಕ್ರಮವಾಗಿ ನೆಲೆಸಿರುವವರ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೧ (೨೨೩೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶಿ ಮತ್ತು ರೊಹಿಂಗ್ಯಾ ಮುಸ್ಲಿಂಮರನ್ನು ಧರ್ಮದ ಹೆಸರಿನಲ್ಲಿ ನಡೆಯುವ ದೊಂಬಿ ಮತ್ತು ಗಲಭೆಗಳಲ್ಲಿ ನೇರವಾಗಿ ಭಾಗಿಯಾಗುತ್ತಿರುವ ಕುರಿತು ಸರ್ಕಾರದ ನಿಲುವೇನು ; ಎಷ್ಟು ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗಿದೆ ;

(ಆ) ಕಳೆದ ೩ ವರ್ಷಗಳಲ್ಲಿ ಈ ಅಕ್ರಮವಾಗಿ ನೆಲೆಸಿರುವ ಮುಸ್ಲಿಂಮರು ನಡೆಸಿರುವ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ ಎಷ್ಟು ; ಇದರಲ್ಲಿ ಎಷ್ಟು ಪ್ರಕರಣಗಳಲ್ಲಿ ಆರೋಪಿತರಿಗೆ ಶಿಕ್ಷೆಯಾಗಿದೆ ;

(ಇ) ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಇವರುಗಳು ಭಾರತದ ಪ್ರಜೆಗಳಾಗದೇ ಇರುವುದರಿಂದ ಸದರಿಯವರು ಅಪರಾಧ ಮಾಡಿ ಸುಲಭವಾಗಿ ತಪ್ಪಿಸಿಕೊಂಡು ಹೋಗುತ್ತಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಅಪರಾಧ ಮಾಡಿ ಪಾಕಿಸ್ತಾನ, ಬಾಂಗ್ಲಾದೇಶಿ ಮತ್ತು ರೊಹಿಂಗ್ಯಾ ದೇಶಗಳಿಗೆ ಪಲಾಯನ ಮಾಡಿದವರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಅಪರಾಧದ ಪ್ರಥಮ ವರ್ತಮಾನ ಪ್ರತಿಯೊಂದಿಗೆ ವಿವರ ನೀಡುವುದು)

## ಆರ್ಥಿಕ ಇಲಾಖೆಯ ಅನುಮೋದನೆ ನೀಡಿರುವ ಹುದ್ದೆಗಳ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೨ (೨೨೨೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರವು ಅಧಿಕೃತವಾಗಿ ನೀಡಿರುವ ದಾಖಲೆಯ ಪ್ರಕಾರ ೫೬,೪೩೨ ಹುದ್ದೆಗಳಿಗೆ ಆರ್ಥಿಕ ಇಲಾಖೆಯು ನೇಮಕಾತಿಗಾಗಿ ಅನುಮೋದನೆ ನೀಡಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಇವುಗಳಲ್ಲಿ ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುವ ೩೨,೧೩೨ ಹುದ್ದೆಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಗ್ರೂಪ್ 'ಎ' ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ಹುದ್ದೆಗಳು ಯಾವುವು ; (ಇಲಾಖೆಗಳ ಸಮೇತ ಎಲ್ಲಾ ಹುದ್ದೆಗಳ ಹಾಗೂ ಪದನಾಮಗಳ ಸಮೇತ ಸಂಪೂರ್ಣ ವಿವರ ನೀಡುವುದು)

(ಇ) ಇವುಗಳಲ್ಲಿ ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುವ ೨೪,೩೦೦ ಹುದ್ದೆಗಳಲ್ಲಿ ಉಳಿಕೆ ಮೂಲ ವೃಂದದ ಗ್ರೂಪ್ 'ಎ' ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ಹುದ್ದೆಗಳು ಯಾವುವು ; (ಇಲಾಖೆಗಳ ಸಮೇತ ಎಲ್ಲಾ ಹುದ್ದೆಗಳ ಹಾಗೂ ಪದನಾಮಗಳ ಸಮೇತ ಸಂಪೂರ್ಣ ವಿವರ ನೀಡುವುದು)

(ಈ) ಪ್ರಸ್ತುತ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಎಷ್ಟು ಕೆ.ಎ.ಎಸ್ ಗೆಜೆಟೆಡ್ ಪ್ರೋಬೆಷನರ್ಸ್ ಹುದ್ದೆಗಳ ನೇಮಕಾತಿಗಾಗಿ ಆರ್ಥಿಕ ಇಲಾಖೆಯು ಅನುಮೋದನೆ ನೀಡಿದೆ ;

(ಉ) ಸರ್ಕಾರದ ವಿವಿಧ ಇಲಾಖೆಗಳು ಸಲ್ಲಿಸಿರುವ ಪ್ರಸ್ತಾವನೆಗಳು ಎಷ್ಟು ; ಇವುಗಳಲ್ಲಿ ಆರ್ಥಿಕ ಇಲಾಖೆ ಅನುಮೋದನೆ ನೀಡಿರುವ ಹುದ್ದೆಗಳ ಸಂಖ್ಯೆ ಎಷ್ಟು ? (ಇಲಾಖೆಗಳ ಹಾಗೂ ಅನುಮೋದನೆ ಪಡೆದಿರುವ ಹುದ್ದೆಗಳ ಸಮೇತ ಸಂಪೂರ್ಣ ವಿವರಗಳನ್ನು ಒದಗಿಸುವುದು)

## ವಿಧಾನಸೌಧದಲ್ಲಿ ಮಾಧ್ಯಮ ನಿರ್ಬಂಧ ಮತ್ತು ಸಚಿವರ ಕಛೇರಿಯಲ್ಲಿ ನಡೆದ ಕಳ್ಳತನದ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೩ (೨೨೩೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚೆಗೆ ವಿಧಾನಸೌಧದ ಅವರಣದಲ್ಲಿ ಮಾಧ್ಯಮ ಪ್ರತಿನಿಧಿಗಳ ಮುಕ್ತ ಸಂಚಾರಕ್ಕೆ ನಿರ್ಬಂಧ ಹೇರಿ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೇ ;

(ಆ) ಮಾಧ್ಯಮಗಳಿಗೆ ಪ್ರತ್ಯೇಕ ಸ್ಥಳ ನಿಗದಿಪಡಿಸುವ ನೆಪದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಮತ್ತು ಸರ್ಕಾರದ ವೈಫಲ್ಯಗಳನ್ನು ಮುಚ್ಚಿಡುವ ಪ್ರಯತ್ನ ಮಾಡಲಾಗುತ್ತಿದೆಯೆಂದು ಸಾರ್ವಜನಿಕರು ಅಭಿಪ್ರಾಯ ಪಡುತ್ತಿದ್ದು, ಈ ಕುರಿತು ಸರ್ಕಾರದ ಉತ್ತರವೇನು ; ಸದರಿ ಆದೇಶವನ್ನು ಹೊರಡಿಸಲು ಪ್ರೇರೆಪಿಸಿದ ಪ್ರಬಲ ಭದ್ರತಾ ಕಾರಣಗಳೇನಾದರೂ ಇವೆಯೇ ; (ವಿವರ ನೀಡುವುದು)

(ಇ) ನಗರಾಭಿವೃದ್ಧಿ ಸಚಿವರ ವಿಧಾನಸೌಧದ ಕಛೇರಿಯಲ್ಲಿ ಇತ್ತೀಚೆಗೆ ನಗದು ಹಣ ಮತ್ತು ಚಿನ್ನಾಭರಣ ಕಳ್ಳತನವಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದ್ದು, ಘಟನೆಯ ಕುರಿತು ಸರ್ಕಾರದ ಉತ್ತರವೇನು ; ಸರ್ಕಾರದ ಉನ್ನತ ಭದ್ರತಾ ವಲಯದಲ್ಲಿರುವ ಭದ್ರತಾ ಲೋಪವನ್ನು ಎತ್ತಿ ತೋರಿಸುವುದಿಲ್ಲವೇ ; (ವಿವರ ನೀಡುವುದು)

(ಈ) ರಾಜ್ಯದ ಶಕ್ತಿ ಕೇಂದ್ರವಾದ ವಿಧಾನಸೌಧದ ಸಚಿವರ ಕಛೇರಿಯಲ್ಲಿಯೇ ಇಂತಹ ಕಳ್ಳತನ ನಡೆಯುತ್ತಿರುವುದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿರುವುದಕ್ಕೆ ಸಾಕ್ಷಿಯಲ್ಲವೇ ; ಸದರಿ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಮತ್ತು ಭದ್ರತಾ ವೈಫಲ್ಯಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಶಿಸ್ತು ಕ್ರಮ ಏನು ? (ವಿವರಣೆ ನೀಡುವುದು)

## ಡಿಜಿಟಲ್ ಮಾಧ್ಯಮಗಳಿಗೆ ಜಾಹೀರಾತು ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೪ (೨೨೩೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಸರ್ಕಾರವು ಎಷ್ಟು ಡಿಜಿಟಲ್ ಮಾಧ್ಯಮಗಳಿಗೆ ಜಾಹೀರಾತು ನೀಡಿವೆ ; (ಸದರಿ ಡಿಜಿಟಲ್ ಸಂಸ್ಥೆ ಅದರ ಮಾಲೀಕರು ಹಾಗೂ ಸದರಿ ಸಂಸ್ಥೆಗಳಿಗೆ ಕಳೆದ ಎರಡು ವರ್ಷದಲ್ಲಿ ನೀಡಿರುವ ಇಲಾಖಾವಾರು ಜಾಹೀರಾತು ಮೊತ್ತದ ವಿವರದೊಂದಿಗೆ ಸಮಗ್ರ ವಿವರ ನೀಡುವುದು)

(ಆ) ಡಿಜಿಟಲ್ ಮಾಧ್ಯಮಗಳಿಗೆ ಜಾಹೀರಾತು ನೀಡುವುದನ್ನು ನಿರ್ಣಯಿಸುವ ಮಂಡಳಿ/ಸಂಸ್ಥೆಯಲ್ಲಿ ಇರುವ ನಿರ್ದೇಶಕರು ಹಾಗೂ ಇತರ ಅಧಿಕಾರಿಗಳು ಎಷ್ಟು : (ಹೆಸರು ಮತ್ತು ಹುದ್ದೆಯೊಂದಿಗೆ ವಿವರ ನೀಡುವುದು)

(ಇ) ಯಾವ ಡಿಜಿಟಲ್ ಸಂಸ್ಥೆಗೆ ಜಾಹೀರಾತು ನೀಡಬೇಕು ಎಂಬುದನ್ನು ನಿರ್ಣಯಿಸುವವರು ಮತ್ತು ನಿರ್ಣಯ ಮಾಡುವ ಅಧಿಕಾರ ಹೊಂದಿರುವವರೇ ಹಲವಾರು ಡಿಜಿಟಲ್ ಮಾಧ್ಯಮ ಸಂಸ್ಥೆ ನಡೆಸುತ್ತಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆಗಳಾಗುತ್ತಿದ್ದು ಈ ಕುರಿತು ಸರ್ಕಾರದ ನಿಲುವೇನು ?

## ಡ್ರಗ್ಸ್ ಧಂದೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೯೫ (೨೨೩೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷದಲ್ಲಿ ಡ್ರಗ್ಸ್ ಹೊಂದಿದ ಆರೋಪದಲ್ಲಿ ಬಂದಿತರಾದವರ ಸಂಖ್ಯೆ ಎಷ್ಟು ; (ಹೆಸರಿನೊಂದಿಗೆ ವಿವರ ನೀಡುವುದು) ಪ್ರಸ್ತುತ ಈ ರೀತಿಯಾಗಿ ಬಂಧಿತರಾದವರಿಗೆ ಬೇಲ್ ಪಡೆದುಕೊಂಡಿದೆಯೇ ; (ಬೇಲ್ ನೀಡಿದವರ ಹೆಸರು ಮತ್ತು ವಿಳಾಸದೊಂದಿಗೆ ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಡ್ರಗ್ಸ್ ದಂದೆಯ ಕೇಸ್‌ನಲ್ಲಿ ಬಂಧಿತರಾದ ವ್ಯಕ್ತಿಗಳ ಸಂಖ್ಯೆ ಎಷ್ಟು ; ಎಷ್ಟು ಜನರ ಮೇಲೆ ಎಫ್.ಐ.ಆರ್ ದಾಖಲಾಗಿದೆ ; ಕಳೆದ ೩ ವರ್ಷಗಳಲ್ಲಿ ಎಷ್ಟು ಡ್ರಗ್ಸ್ ಧಂದೆಯ ಪ್ರಕರಣಗಳು ನ್ಯಾಯಾಲಯದಲ್ಲಿ ಸಾಬೀತಾಗಿ ಶಿಕ್ಷೆಯಾಗಿದೆ ; (ಪ್ರಕರಣದೊಂದಿಗೆ ವಿವರ ನೀಡುವುದು)

(ಇ) ಡ್ರಗ್ಸ್ ದಂದೆಯಲ್ಲಿ ಶಾಮೀಲಾಗಿರುವ ಕುರಿತು ಪೊಲೀಸ್ ಅಧಿಕಾರಿಗಳ ಮೇಲೆ ಎಷ್ಟು ಪ್ರಕರಣ ದಾಖಲಾಗಿದೆ ; ಪ್ರಸ್ತುತ ಈ ಪ್ರಕರಣಗಳು ಯಾವ ಹಂತದಲ್ಲಿವೆ ;

(ಈ) ಇತ್ತೀಚಿನ ದಿನಗಳಲ್ಲಿ ಕೇರಳ, ಮಹಾರಾಷ್ಟ್ರ, ದೆಹಲಿ ಹಾಗೂ ಇತರ ರಾಜ್ಯಗಳ ಪೊಲೀಸರು ಬೆಂಗಳೂರು ಹಾಗೂ ಮೈಸೂರಿನ ಡ್ರಗ್ಸ್ ಫ್ಯಾಕ್ಟರಿಗಳ ಮೇಲೆ ದಾಳಿ ಮಾಡುತ್ತಿರುವುದು ಸರ್ಕಾರ, ರಾಜ್ಯ ಪೊಲೀಸರು ಡ್ರಗ್ಸ್ ದಂದೆಕೋರರೊಂದಿಗೆ ಶಾಮೀಲಾಗಿದ್ದಾರೆ ಎಂಬ ಕಾರಣಕ್ಕಾಗಿಯೇ ; ಕರ್ನಾಟಕ ರಾಜ್ಯದ ಪೊಲೀಸರು ಕಳೆದ ೨ ವರ್ಷಗಳಲ್ಲಿ ಬೇರೆ ಯಾವ ರಾಜ್ಯದಲ್ಲಿ ದಾಳಿ ಮಾಡಿ ಡ್ರಗ್ಸ್ ಧಂದೆಕೋರರನ್ನು ಸೆರೆ ಹಿಡಿದಿರುತ್ತಾರೆ ? (ವಿವರ ನೀಡುವುದು)

# ಬೆಂಗಳೂರು ನಗರಗಳಲ್ಲಿ ಸಂಚಾರ ದಟ್ಟಣೆ ಮತ್ತು ನಿರ್ವಹಣೆ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೯೯೬ (೨೨೬೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮತ್ತು ಇತರ ಪ್ರಮುಖ ನಗರಗಳಲ್ಲಿ ಗರಿಷ್ಠ ಸಮಯದಲ್ಲಿ ಸರಾಸರಿ ಪ್ರಯಾಣದ ವೇಗ ಎಷ್ಟು ಮತ್ತು ಕಳೆದ ೫ ವರ್ಷಗಳಲ್ಲಿ ಅದು ಹೇಗೆ ಬದಲಾಗಿದೆ ; (ಮಾಹಿತಿ ನೀಡುವುದು)

(ಆ) ಪದೇ ಪದೇ ಸಂಚಾರ ದಟ್ಟಣೆ ದೂರುಗಳು ಬಂದರೂ ಪ್ರಮುಖ ಚೆಕ್ ಪಾಯಿಂಟ್‌ಗಳಲ್ಲಿ ಸಂಚಾರ ಪೊಲೀಸರ ನಿಯೋಜನೆ ಏಕೆ ಸಾಕಾಗುತ್ತಿಲ್ಲ ; (ವಿವರ ನೀಡುವುದು)

(ಇ) ಸಿಗ್ನಲ್‌ಗಳು, ಯು–ಟರ್ನ್‌ಗಳು ಮತ್ತು ಬ್ಯಾರಿಕೇಡ್‌ಗಳ ನಿಯೋಜನೆಗೆ ಯಾವ ವೈಜ್ಞಾನಿಕ ಅಧ್ಯಯನಗಳು ಮಾರ್ಗದರ್ಶನ ನೀಡುತ್ತವೆ ;

(ಈ) ಪ್ರಸ್ತುತ ಎಷ್ಟು ಸಿಸಿಟಿವಿ ಮತ್ತು ಎಎನ್‌ಪಿಆರ್ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ಎಷ್ಟು ಕಾರ್ಯನಿರ್ವಹಿಸುತ್ತಿಲ್ಲ ; (ಮಾಹಿತಿ ನೀಡುವುದು)

(ಉ) ತಪ್ಪು ಅಥವಾ ನಕಲು ಸಂಚಾರ ದಂಡಗಳನ್ನು ತಡೆಯಲು ಸರ್ಕಾರದ ಹಂತದಲ್ಲಿ ಯಾವ ಕ್ರಮಗಳಿವೆ ಹಾಗೂ ಸಂಚಾರ ದಂಡದಿಂದ ಬರುವ ಆದಾಯವನ್ನು ರಸ್ತೆ ಸುರಕ್ಷತೆ ಮತ್ತು ಪಾದಚಾರಿ ಮೂಲ ಸೌಕರ್ಯಕ್ಕೆ ಮರುಹೂಡಿಕೆ ಮಾಡಲಾಗುತ್ತಿದೆಯೇ ?

## ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ನಡೆಯುತ್ತಿರುವ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೯೯೭ (೨೨೬೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ವ್ಯಾಪಕವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ರಾಜ್ಯದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಇಲ್ಲಿಯವರೆಗೆ ಇದನ್ನು ನಿಯಂತ್ರಿಸಲು ತಾಂತ್ರಿಕವಾಗಿ ಸಶಕ್ತ ಪ್ರತ್ಯೇಕ ವಿಭಾಗಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ವಿವರ ನೀಡುವುದು)

## ರಾಜ್ಯದಲ್ಲಿ ವಾಹನ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೯೯೮ (೨೨೬೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಾಹನ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸಂಚಾರ ನಿಯಮ ಉಲ್ಲಂಘನೆಗಳಿಗೆ ಕಡಿವಾಣ ಹಾಕಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಮತ್ತು

ಸಾರ್ವಜನಿಕರಿಗೆ ಸಂಚಾರಿ ನಿಯಮಗಳ ಬಗ್ಗೆ ಅರಿವು ಮೂಡಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ ;

(ಇ) ಕಳೆದ ಮೂರು ವರ್ಷಗಳಿಂದ ಸಂಚಾರಿ ನಿಯಮ ಉಲ್ಲಂಘನೆಗೆ ವಿಧಿಸಿರುವ ದಂಡದ ಮೊತ್ತವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು) ಶೇಕಡ ಎಷ್ಟು ಪ್ರಮಾಣದ ದಂಡ ವಸೂಲಾತಿ ಮಾಡಲಾಗಿದೆ ;

(ಈ) ದಂಡ ವಸೂಲಾತಿ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ; ಬಳಕೆಯಾಗಿರುವ ಮೊತ್ತದ ವಿವರಗಳನ್ನು ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು ?

## ಒಂದೇ ವಿಷಯಕ್ಕೆ ಬೇರೆ ಬೇರೆ ದ್ವಂದ್ವ ಅಭಿಪ್ರಾಯಗಳನ್ನು ನೀಡಿ ಗೊಂದಲ ಮಾಡುತ್ತಿರುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೯ (೨೧೭೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಚಿವಾಲಯದ ಕಡತಗಳಲ್ಲಿ ಅಧಿಕಾರಿಗಳು ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಕಡತಗಳಲ್ಲಿ ಬೇರೆ ಬೇರೆ ಅಭಿಪ್ರಾಯ ನಮೂದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಆದೇಶ/ ಸುತ್ತೋಲೆಗಳನ್ನು ಹೊರಡಿಸಲಾಗಿದೆಯೇ; ಆದೇಶ ಪ್ರತಿ ಒದಗಿಸುವುದು ;

(ಆ) ಸರ್ಕಾರದ ಗಮನಕ್ಕೆ ಬಂದಿಲ್ಲವಾದಲ್ಲಿ, ಈ ಕುರಿತಾಗಿ ಸಿ.ಆ.ಸು. ಇಲಾಖೆಯ ಅಭಿಪ್ರಾಯಗಳೇನು; ಯಾವ ಕಾಲಮಿತಿಯಲ್ಲಿ ಇದರ ಕುರಿತಾಗಿ ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗುವುದು ;

(ಇ) ಸೇವಾ ವಿಷಯದಲ್ಲಿ ಆದ ಈ ರೀತಿಯ ತಪ್ಪುಗಳಿಂದ ನ್ಯಾಯಾಲಯದಲ್ಲಿ ಹಲವು ಪ್ರಕರಣಗಳು ದಾಖಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸೇವಾ ವಿಷಯದಲ್ಲಿ ಇಂತಹ ತಪ್ಪಿಗೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕೈಗೊಳ್ಳಬಹುದಾದ ಕಾನೂನು ಕ್ರಮಗಳ ಬಗ್ಗೆ ೦ಯಾವುದಾದರೂ ಆದೇಶ/ಸುತ್ತೋಲೆಗಳನ್ನು ಹೊರಡಿಸಲಾಗಿದೆಯೇ ; ಇದ್ದಲ್ಲಿ, ಅದರ ಆದೇಶ ಪ್ರತಿ ಒದಗಿಸುವುದು ;

(ಈ) ಈ ರೀತಿಯ ದ್ವಂದ್ವ ಅಭಿಪ್ರಾಯಗಳಿಂದ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗಲು ಕಾರಣಕರ್ತರಾದ ಅಧಿಕಾರಿಗಳ ಮೇಲೆ ಕಾನೂನು ಕ್ರಮಕೈಗೊಳ್ಳಲು ಕಠಿಣ ಆದೇಶಗಳನ್ನು ಯಾವ ಕಾಲಮಿತಿಯಲ್ಲಿ ಹೊರಡಿಸಲಾಗುವುದು; ಪೂರ್ಣ ವಿವರಗಳನ್ನು ದಾಖಲೆಗಳೊಂದಿಗೆ ಒದಗಿಸುವುದು ?

## ಜಿ.ಬಿ.ಎ ವ್ಯಾಪ್ತಿಯಲ್ಲಿ ಖಾಲಿಯಿರುವ ಬಿ.ಡಿ.ಎ ಸ್ಥಳಗಳ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೦೦೦ (೨೧೮೦) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದ ಜಿ.ಬಿ.ಎ ವ್ಯಾಪ್ತಿಯಲ್ಲಿ ಯಾರಿಗೂ ಹಂಚಿಕೆಯಾಗದೆ ಯಾವುದೇ ಕಟ್ಟಡಗಳನ್ನು ಕಟ್ಟದೆ, ಖಾಲಿ ಇರುವ ಬಿ.ಡಿ.ಎ ಒಡೆತನದ ಜಾಗ ಎಷ್ಟು ; ಈ ಖಾಲಿ ಇರುವ ಜಾಗವನ್ನು ಯಾವುದಕ್ಕೆ ಮೀಸಲಿಟ್ಟಿದೆ ; ಜಾಗದ ಸ್ಥಳದ ಹೆಸರು ವಿಸ್ತೀರ್ಣಗಳೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು ;

(ಆ) ಬೆಂಗಳೂರು ನಗರದಲ್ಲಿ ಪಾರ್ಕಿಂಗ್ ಸಮಸ್ಯೆ ಇದ್ದು, ಜಿ.ಬಿ.ಎ ವ್ಯಾಪ್ತಿಯಲ್ಲಿ ಖಾಲಿ ಇರುವ ಬಿ.ಡಿ.ಎ ಆಸ್ತಿಗಳನ್ನು ಬಳಸಿಕೊಂಡು

ಹೆಚ್ಚಿನ ಬಂಡವಾಳ ಬಳಸದೆ ಪಿ.ಪಿ.ಪಿ ಮಾದರಿಯಲ್ಲಿ ಬಿ.ಡಿ.ಎ. ಖಾಲಿ ಜಾಗಗಳನ್ನು ಪಾರ್ಕಿಂಗ್ ಸ್ಥಳಗಳನ್ನಾಗಿ ಬಳಸಲು ಸರ್ಕಾರದ ನಿರ್ಧಾರಗಳೇನು ; ಯಾವ ಕಾಲಮಿತಿಯಲ್ಲಿ ಈ ವಿಷಯವಾಗಿ ನಿರ್ಧಾರ ಕೈಗೊಳ್ಳಲಾಗುವುದು ;

(ಇ) ಜಿ.ಬಿ.ಎ ವ್ಯಾಪ್ತಿಯಲ್ಲಿ ಖಾಲಿ ಇರುವ ಬಿ.ಡಿ.ಎ ಆಸ್ತಿಗಳನ್ನು ಪಿ.ಪಿ.ಪಿ ಮಾದರಿಯಲ್ಲಿ ಸಣ್ಣ ಸಣ್ಣ ಪಾರ್ಕಿಂಗ್ ಸ್ಥಳಗಳನ್ನಾಗಿ ಅಭಿವೃದ್ಧಿ ಪಡಿಸಿದ್ದಲ್ಲಿ ಬಿ.ಡಿ.ಎ.ಗೆ ಆದಾಯ ಬರುವುದಿಲ್ಲವೆ ; ಈ ನಿಟ್ಟಿನಲ್ಲಿ ಯಾಕೆ ನಿರ್ಧಾರಗಳನ್ನು ಕೈಗೊಳ್ಳಬಾರದು ? (ಮಾಹಿತಿ ಒದಗಿಸುವುದು)

## ಅಬಕಾರಿ ಸನ್ನದುಗಳ ಹರಾಜುಗಳ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೦೧ (೨೨೮೩) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸ್ಥಗಿತಗೊಂಡ ಅಬಕಾರಿ ಸನ್ನದುಗಳನ್ನು ಹರಾಜು ಮಾಡುವ ಕುರಿತು ಸರ್ಕಾರ ನಿರ್ಧಾರ ಮಾಡಿದ್ದು, ಸದರಿ ಸ್ಥಗಿತಗೊಂಡ ಸನ್ನದುಗಳು ಇಡೀ ರಾಜ್ಯದಲ್ಲಿ ಎಷ್ಟಿದೆ ; ಹರಾಜಿನಲ್ಲಿ ಸೇರಿಸಿರುವ ಈ ಸ್ಥಗಿತಗೊಂಡ ಸನ್ನದುಗಳ ಮಾಹಿತಿಯನ್ನು, ಸನ್ನದುದಾರರ ಮಾಹಿತಿ ಸಹಿತ ವಿವರ ನೀಡುವುದು ;

(ಆ) ಈ ಹಿಂದೆ ೪೬೩ ಸ್ಥಗಿತಗೊಂಡ ಸಿಎಲ್–೨, ಸಿ.ಎಲ್–೯ ಸನ್ನದುಗಳನ್ನು ಎಂ.ಎಸ್.ಐ.ಎಲ್ ಸಂಸ್ಥೆಗೆ ನೀಡಿರುವ ಬಗ್ಗೆ ಆದೇಶಗಳು ಲಭ್ಯವಿದ್ದು, ಎಂ.ಎಸ್.ಐ.ಎಲ್ ಸಂಸ್ಥೆಗೆ ನೀಡಿರುವ ಈ ಸ್ಥಗಿತಗೊಂಡ ೪೬೩ ಸನ್ನದುಗಳ ಜಿಲ್ಲಾವಾರು ವಿವರವನ್ನು, ಸನ್ನದುದಾರರ ವಿವರ ಸಹಿತ ಮಾಹಿತಿ ನೀಡುವುದು; ಎಂ.ಎಸ್.ಐ.ಎಲ್‌ಗೆ ನೀಡಿದ ಈ ಸ್ಥಗಿತಗೊಂಡ ಸನ್ನದುಗಳನ್ನು ಸಹ ಹರಾಜು ಪ್ರಕ್ರಿಯೆಯಲ್ಲಿ ಸೇರಿಸಲಾಗಿದೆಯೇ ; ಮಾಹಿತಿ ನೀಡುವುದು ;

(ಇ) ಸ್ಥಗಿತಗೊಂಡ ಸನ್ನದುಗಳನ್ನು ಹರಾಜು ಮಾಡಲು ನಿರ್ಧಾರ ಕೈಗೊಳ್ಳುವ ಪೂರ್ವದಲ್ಲಿ, ಇವುಗಳಿಗೆ ಯಾವ ಆಧಾರದ ಮೇಲೆ ಬಿಡ್ಡಿಂಗ್ ಹಣವನ್ನು ನಿಗಧಿ ಮಾಡಲಾಗಿದೆ ; ಮಾರುಕಟ್ಟೆ ಅಧ್ಯಯನ ಬೇಡಿಕೆ ಅಧ್ಯಯನ ಮಾಡಿದ್ದಲ್ಲಿ ಮಾಹಿತಿ ನೀಡುವುದು ;

(ಈ) ಸ್ಥಗಿತಗೊಂಡ ಹರಾಜು ಮಾಡಲು ಹೊರಡಿಸಿರುವ ತಿದ್ದುಪಡಿ ಅಧಿಸೂಚನೆ ಮತ್ತು ಹರಾಜು ಅಧಿಸೂಚನೆಗಳನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್ ವಿವಿಧ ಪೀಠಗಳಲ್ಲಿ ಸಾರ್ವಜನಿಕರು ಪ್ರಕರಣ ದಾಖಲು ಮಾಡಿದ್ದಾರೆಯೇ ; ಪ್ರಕರಣಗಳ ವಿವರ ನೀಡುವುದು ಮತ್ತು ಈ ಪ್ರಕರಣಗಳ ಸದ್ಯದ ಪರಿಸ್ಥಿತಿಯ ಮಾಹಿತಿ ನೀಡುವುದು ?

## ASI/HC/PC ಹುದ್ದೆಗಳ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೦೨ (೨೨೭೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಪೊಲೀಸ್ ಇಲಾಖೆಯ ವೈರ್‌ಲೆಸ್ ಘಟಕದಲ್ಲಿ ASI/HC/PC ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವವರಲ್ಲಿ ಎಷ್ಟು ಜನ BE/BSc/BA ಪಧವೀಧರರು ಇದ್ದಾರೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ವೈರ್‌ಲೆಸ್ ಘಟಕದಲ್ಲಿ೨೦೦೨ನೇ ಸಾಲಿನಿಂದ ಜನವರಿ ೨೦೨೬ ಅಂತ್ಯಕ್ಕೆ ಎಷ್ಟು SP/DYSP/PI/ASI/HC ವೈರ್‌ಲೆಸ್ ಹುದ್ದೆಗಳು ಹೊಸದಾಗಿ ಸೃಷ್ಟಿಸಲಾಗಿದೆಯೇ ; ಆಗಿದ್ದಲ್ಲಿ, ನೇಮಕಾತಿ ಆದವರ ಹೆಸರು, ಪದನಾಮ ಮತ್ತು ದೂರವಾಣಿ ಸಂಖ್ಯೆಯುನ್ನು

ನೀಡುವುದು ಹಾಗೂ ಎಷ್ಟು ASI/HC/PC ವೈರ್‌ಲೆಸ್ ಹುದ್ದೆಗಳು ಕಡಿತಗೊಳಿಸಲಾಗಿದೆ ; ಇದಕ್ಕೆ ಸರಿಯಾದ ಕಾರಣಗಳೇನು ; (ಮಾಹಿತಿ ನೀಡುವುದು)

(ಇ) ಕರ್ನಾಟಕ ಪೊಲೀಸ್ ಇಲಾಖೆಯ ವೈರ್‌ಲೆಸ್ ಕೆಎಸ್‌ಆರ್‌ಪಿ / ರೈಲ್ವೆ / ಎಫ್‌ಪಿಬಿ /ಕೆಎಸ್‌ಐಎಸ್‌ಎಫ್ ಘಟಕದ ಪಿಎಸ್‌ಐ ಹುದ್ದೆಗೆ ೫೦:೫೦ ಅನುಪಾತದಂತೆ ನೇರ ನೇಮಕಾತಿ/ ಮುಂಬಡ್ತಿ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಈ) ರಾಜ್ಯ ಪೊಲೀಸ್ ಇಲಾಖೆಯ ವೈರ್‌ಲೆಸ್ ಘಟಕದಲ್ಲಿ ಎಎಸ್‌ಐ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಗ್ನಿಶಾಮಕ ದಳದಂತೆ ವಾರದ ರಜೆ ಮತ್ತು ವಾರ್ಷಿಕ ವಿಶೇಷ ವೇತನ ೧೫ ದಿವಸಗಳ ಬದಲಾಗಿ ತಿಂಗಳ ವೇತನ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

## ಅಮಾನತ್ತುಗೊಂಡಿರುವ ನೌಕರರ ವಿವರ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೦೩ (೨೨೮೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯಾವ ಯಾವ ಇಲಾಖಾ ವ್ಯಾಪ್ತಿಯಲ್ಲಿ ಅಮಾನತ್ತುಗೊಂಡಿರುವವರ ಸಂಖ್ಯೆ ಎಷ್ಟು ; ಯಾವ ಕಾರಣದಿಂದ ಅವರನ್ನು ಅಮಾನತ್ತು ಮಾಡಲಾಗಿದೆ ; (ಜಿಲ್ಲಾವಾರು ಇಲಾಖಾವಾರು ಮಾಹಿತಿ ನೀಡುವುದು)

(ಆ) ಅಮಾನತ್ತಿಗೆ ಒಳಗಾದ ಸಿಬ್ಬಂದಿಗಳು ಎಷ್ಟು ತಿಂಗಳಿನಿಂದ ಅಮಾನತ್ತಿನಲ್ಲಿದ್ದಾರೆ ; ಎಷ್ಟು ಇಲಾಖಾ ಸಿಬ್ಬಂದಿಗಳು ತನಿಖೆಯಲ್ಲಿ ಇದ್ದಾರೆ ; ಅವರನ್ನು ಕರ್ತವ್ಯಕ್ಕೆ ಯಾವ ಕಾಲಮಿತಿಯೊಳಗೆ

ತೆಗೆದುಕೊಳ್ಳಲಾಗುವುದು ಮತ್ತು ಅವರನ್ನು ಇಲಾಖಾ ತನಿಖೆಯಲ್ಲಿ ಇಟ್ಟು ಅವರನ್ನು ಕರ್ತವ್ಯಕ್ಕೆ ಪಡೆಯಬಹುದಲ್ಲವೇ ; ಅದರಿಂದ ಸಿಬ್ಬಂದಿ ಕೊರತೆ ಕಡಿಮೆಯಾಗುವುದಿಲ್ಲವೇ ; ಇದರ ಬಗ್ಗೆ ಸರ್ಕಾರದ ಸಮರ್ಥ ಉತ್ತರವೇನು ; (ಸಂಪೂರ್ಣ ಮಾಹಿತಿ ಇಲಾಖಾ ತನಿಖೆಯಲ್ಲಿ ಇರುವವರ ಸಂಖ್ಯೆ, ಅಮಾನತ್ತಿನಲ್ಲಿರುವ ತಿಂಗಳು, ಅವರ ಹೆಸರು, ಪದನಾಮ, ತನಿಖೆಯ ವಿಷಯ ಒಳಗೊಂಡಂತೆ ಮಾಹಿತಿ ನೀಡುವುದು)

(ಇ) ಅಮಾನತ್ತಾದ ಇಲಾಖಾ ಸಿಬ್ಬಂದಿಗಳ ಮೇಲೆ ಪ್ರಕರಣ ದಾಖಲಾಗಿದೆಯೇ ; ದಾಖಲಾಗಿದ್ದಲ್ಲಿ ಎಷ್ಟು ಸಿಬ್ಬಂದಿಗಳ ಮೇಲೆ ಪ್ರಕರಣ ದಾಖಲಾಗಿದೆ ; (ಸಂಪೂರ್ಣ ಮಾಹಿತಿ ಜಿಲ್ಲಾವಾರು ಪ್ರಕರಣದ ವಿವರದೊಂದಿಗೆ ಮಾಹಿತಿಯನ್ನು ನೀಡುವುದು)

(ಈ) ಹೊರಗುತ್ತಿಗೆ ಆಧಾರ ಅಥವಾ ಪರವಾನಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ವರ್ಷಕ್ಕೆ ೩ ಬಾರಿ ತಮ್ಮನ್ನು ಖಾಯಂಗೊಳಿಸಲು ಹಾಗೂ ಇತರೆ ಬೇಡಿಕೆಗಳನ್ನು ಇಟ್ಟು ೧೦ ರಿಂದ ೧೫ ದಿನಗಳವರೆಗೆ ಪ್ರತಿಭಟನೆ ಮಾಡುತ್ತಿರುವ ಕಾರಣ, ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು ಪ್ರಗತಿ ಸಾಧಿಸುವಲ್ಲಿ ವಿಳಂಬವಾಗುತ್ತಿಲ್ಲವೇ; ಇದನ್ನು ತಡೆಯಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ; ಇದುವರೆಗೂ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ; ಇದಕ್ಕೆ ಪೂರ್ಣ ಪರಿಹಾರವನ್ನು ಯಾವ ಕಾಲಮಿತಿಯಲ್ಲಿ ತೆಗೆದುಕೊಳ್ಳಲಾಗುವುದು ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ನೂತನ ನೇಮಕಾತಿಯನ್ನು ಮಾಡುವ ಕುರಿತು ಸರ್ಕಾರದ ನಿಲುವೇನು ?

# ಗಾಂಜಾ ನಶೆಯಲ್ಲಿ ವಾಹನ ಮತ್ತು ಮನೆಗಳಿಗೆ ಕಲ್ಲು ತೂರಾಟ ಮಾಡುವ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೦೪ (೨೨೮೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಪಾಲಿಕೆ ಕುಮಾರಸ್ವಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಪ್ರಗತಿಪುರ ೩ನೇ ಅಡ್ಡ ರಸ್ತೆಯಲ್ಲಿ ೨೦೨೫ರ ರಂಜಾನ್ ಹಬ್ಬದ ದಿನಗಳಲ್ಲಿ ಅನ್ಯಧರ್ಮದ ಕಿಡಿಗೇಡಿ ಗುಂಪಿನಿಂದ ಹಿಂದೂ ಕುಟುಂಬಕ್ಕೆ ಕೇವಲ ಕ್ಷುಲ್ಲಕ ವಿಚಾರಕ್ಕೆ ಇಡಿ ಕುಟುಂಬದ ಮಹಿಳೆ, ಮಕ್ಕಳು ಸಹಿತ ಬೀದಿಯಲ್ಲಿ ಅಟ್ಟಾಡಿಸಿಕೊಂಡು ಸುಮಾರು ೨೦ ಜನರ ಗುಂಪು ದೌರ್ಜನ್ಯ ಎಸಗಿದ್ದು, ನಂತರ ಅದು ಪ್ರಕ್ಷುದ್ದು ವಾತಾವರಣವಾಗಿದ್ದರಿಂದ ಸುಮಾರು ಒಂದು ತಿಂಗಳುಗಳ ಕಾಲ ಪೊಲೀಸ್ ಬಿಗಿಭದ್ರತೆ ಒದಗಿಸಲಾಗಿತ್ತು ; ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಅವರ ಮೇಲೆ ಪ್ರಕರಣ ದಾಖಲಾಗಿದೆಯೇ ; ಅದು ಯಾವ ಹಂತದಲ್ಲಿದೆ ; ಆ ಪ್ರಕರಣದಲ್ಲಿ ದಾಖಲಾದವರ ಹೆಸರು, ವಿಳಾಸ ಸಹಿತ ಯಾವ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ ; ಸಂಪೂರ್ಣ ಮಾಹಿತಿ ನೀಡುವುದು ;

(ಆ) ಸದರಿ ಪ್ರದೇಶ ಹಿಂದೂ ಮತ್ತು ಮುಸ್ಲಿಂ ಅಲ್ಲದೇ ಎಲ್ಲಾ ವರ್ಗದ ಜನರು ಅನೇಕ ವರ್ಷಗಳಿಂದ ಸಾಮರಸ್ಯ ಜೀವನ ನಡೆಸುತ್ತಿದ್ದಾರೆ, ಆದರೆ ಕೆಲವು ಸಮಾಜ ಘಾತುಕ ವ್ಯಕ್ತಿಗಳಿಂದ ಇನ್ನು ಸಹ ಇಲ್ಲಿ ವಾಸಿಸುವ ನಾಗರೀಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಕ್ರಮ ಕೈಗೊಂಡಿಲ್ಲವೆಂದರೆ ಯಾವ ಕಾಲಮಿತಿಯೊಳಗೆ ಪರಿಹಾರ ಮಾಡಲಾಗುವುದು ;

(ಇ) ಪ್ರಗತಿಪುರ ೩ನೇ ಅಡ್ಡ ರಸ್ತೆಯಲ್ಲಿ ಕೆಲವು ಬಡ ಕುಟುಂಬದವರು ಚಿಲ್ಲರೆ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದು, ಕೆಲವು ಸಮಾಜ ಘಾತುಕ ಯುವಕರು ಬೇರೆ ನಗರ ಪ್ರದೇಶಗಳಿಂದ ಬಂದು ಇಲ್ಲಿ ಖಾಲಿ ಇರುವ ಜಾಗದಲ್ಲಿ ಗಾಂಜಾ ಸೇದುವುದು ಮತ್ತು ಮಧ್ಯಪಾನ ಮಾಡಿ ರಾತ್ರಿ ಎಲ್ಲಾ ಜನರಿಗೆ ತೊಂದರೆ ನೀಡುತ್ತಿರುವುದಲ್ಲದೆ ಜನರಿಗೆ ಜೀವಬೆದರಿಕೆ ಹಾಕುವುದಲ್ಲದೆ, ಮತ್ತು ಅಲ್ಲಿ ನಿಂತಿರುವ ವಾಹನಗಳನ್ನು ಜಕಂ ಮಾಡುವುದು, ಮನೆಗಳ ಕಿಟಕಿ ಗಾಜನ್ನು ಒಡೆದು ಹಾಕುವುದನ್ನು ಮಾಡುತ್ತಿದ್ದು ಹಲವಾರು ಭಾರಿ ದೂರು ನೀಡಿದರು ಸಹ ಪೊಲೀಸ್ ಇಲಾಖೆ ಯಾವ ಕ್ರಮ ಕೈಗೊಳ್ಳುತ್ತಿಲ್ಲ, ಇದಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ಯಾವ ಕಾಲಮಿತಿಯೊಳಗೆ ಮಾಡಲಾಗುವುದು; ಮಾದಕ ವಸ್ತುಗಳನ್ನು ಸೇವಿಸಿ ದಾಖಲಾದ ಪ್ರಕರಣಗಳ ೨ ವರ್ಷದ ಮಾಹಿತಿ ಜೊತೆಗೆ ವಿಳಾಸ, ಹೆಸರು, ದೂರುಗಳನ್ನು ನೀಡಿರುವ ಪ್ರತಿಗಳನ್ನು ನೀಡುವುದು ; ಯಾವ ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಮೆಟ್ರೋ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೦೫ (೨೨೮೨) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮೆಟ್ರೋ ಅಭಿವೃದ್ಧಿ ಕಾಮಗಾರಿ ಕೆ.ಎಸ್.ಆರ್ ಇಂದ ವಿಮಾನ ನಿಲ್ದಾಣದ ಕಾಮಗಾರಿಯವರೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; ಅದರದಲ್ಲಿ ರಾಜ್ಯದ ಸರ್ಕಾರದ ಅನುದಾನ ಎಷ್ಟು ; ಕೇಂದ್ರ ಸರ್ಕಾರದ ಅನುದಾನ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಯಾವ ಕಾಲಮಿತಿಯೊಳಗೆ ವಿಮಾನ ನಿಲ್ದಾಣದ ಮೆಟ್ರೋ ಕಾಮಗಾರಿಯನ್ನು ಪೂರ್ಣ ಮಾಡಲಾಗುತ್ತದೆ ; ಕಾಮಗಾರಿಯೂ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಳೆದ ೩ ವರ್ಷಗಳಲ್ಲಿ ಮೆಟ್ರೋ ದರ ಏರಿಕೆಯಾಗಿರುವ ಸಂಪೂರ್ಣ ಮಾಹಿತಿ ನೀಡುವುದು ; (ಒಂದು ನಿಲ್ದಾಣದಿಂದ ಇನ್ನೊಂದು ನಿಲ್ದಾಣದವರೆಗೆ)

(ಈ) ಚಲನಚಿತ್ರ ನಟ ದಿ: ಶಂಕರ್ ನಾಗ್ ಅವರ ಕನಸಿನ ಮಗು ಬೆಂಗಳೂರು ಮೆಟ್ರೋವಾಗಿದ್ದು ; ಯಾವುದಾದರೂ ನಿಲ್ದಾಣಕ್ಕೆ ಅವರ ಹೆಸರನ್ನಿಡುವುದಾಗಿ ಸರ್ಕಾರ ಚಿಂತಿಸಿದೆಯೇ ; ಚಿಂತಿಸಿದ್ದಲ್ಲಿ, ಯಾವ ನಿಲ್ದಾಣಕ್ಕೆ ಹೆಸರನ್ನಿಡಲು ಚಿಂತಿಸಿದೆ ?

## ರಾಷ್ಟ್ರ ಪ್ರಶಸ್ತಿ ಪಡೆದವರಿಗೆ ಸರ್ಕಾರದಿಂದ ಒದಗಿಸಿದ ಸೌಲಭ್ಯಗಳ ಕುರಿತು

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೬ (೨೨೪೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ರಾಜ್ಯದಲ್ಲಿ NSS ರಾಷ್ಟ್ರ ಪ್ರಶಸ್ತಿ ಪಡೆದವರು ಎಷ್ಟು ; ಸರ್ಕಾರದಿಂದ ಅವರಿಗೆ ಒದಗಿಸಲಾದ ಸೌಲಭ್ಯಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) NSS ರಾಷ್ಟ್ರ ಪ್ರಶಸ್ತಿ ಪಡೆದವರಿಗೆ ರಾಜ್ಯದಲ್ಲಿ ಟೋಲ್ ಉಚಿತವಾಗಿ ನೀಡಲಾಗುತ್ತಿದೆಯೇ ಮತ್ತು ಅವರಿಗೆ ರಾಜ್ಯದಲ್ಲಿ ಪ್ರವಾಸ ಮಾಡಲು ಸಾರಿಗೆ ನಿಗಮಗಳಲ್ಲಿ ಉಚಿತ ಪ್ರಯಾಣ

ಕಲ್ಪಿಸಲಾಗಿದೆಯೇ; ಕಲ್ಪಿಸದಿದ್ದಲ್ಲಿ, ಅವರಿಗೆ ಉಚಿತ ಪ್ರಯಾಣ ಕಲ್ಪಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ ; ಯಾವ ಕಾಲಮಿತಿಯೊಳಗೆ ಅವರಿಗೆ ಉಚಿತ ಪ್ರಯಾಣ ಕಲ್ಪಿಸಲು ಕ್ರಮ ಕೈಗೊಳ್ಳುವುದು ;

(ಇ) ಅನ್ಯ ರಾಜ್ಯಗಳಲ್ಲಿ NSS ರಾಷ್ಟ್ರ ಪ್ರಶಸ್ತಿ ಪಡೆದವರಿಗೆ ಉಚಿತ ಸಾರಿಗೆ ಪ್ರಯಾಣದ ವ್ಯವಸ್ಥೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

## ಅಕ್ರಮ ಬಾಂಗ್ಲಾ ವಲಸಿಗರ ಬಗ್ಗೆ

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೭ (೨೨೪೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಕಾಫಿ ತೋಟದಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಬಂದು ನೆಲೆಸಿದ್ದಾರೆಯೇ ; ಕಾಫಿ ತೋಟದಲ್ಲಿರುವ ಕೂಲಿ ಕಾರ್ಮಿಕರ ಆಧಾರ್ ಕಾರ್ಡ್ ಅಥವಾ ಅವರ ಬಗ್ಗೆ ಸರ್ಕಾರದಿಂದ ಸೂಕ್ತ ತನಿಖೆಯಾಗಿದೆಯೇ; (ಸಂಪೂರ್ಣ ಮಾಹಿತಿ ತಾಲ್ಲೂಕುವಾರು ನೆಲೆಸಿರುವ ತೋಟದ ಮಾಲೀಕರ ಹೆಸರು ಮತ್ತು ವಿಳಾಸದೊಂದಿಗೆ ನೀಡುವುದು)

(ಆ) ಬಾಂಗ್ಲಾ ವಲಸಿಗರು ಅಕ್ರಮವಾಗಿ ರಾಜ್ಯಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಕ್ರಮವಾಗಿ ಅವರಿಗೆ ಆಧಾರ್ ಕಾರ್ಡ್ ಇನ್ನಿತರ ಸ್ಥಳೀಯ ದಾಖಲಾತಿಯನ್ನು ಮಾಡುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ; ಅಂತವರ ವಿರುದ್ಧ ದಾಖಲಾದ ಪ್ರಕರಣಗಳು ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಹೊರ ರಾಜ್ಯದಿಂದ ಬಂದು ಕೂಲಿ ಕಾರ್ಮಿಕರಾಗಿ ಕಾಫಿ ತೋಟಕ್ಕೆ ಸೇರಿ ತೋಟದ ಮಾಲೀಕರ (ಎಸ್ಟೇಟ್ ಮ್ಯಾನೆಜರ್ ಅಥವಾ ನೋಡಿಕೊಳ್ಳುವವರ) ಮೇಲೆ ಮಾರಣಾಂತಿಕ ಹಲ್ಲೆಯಾದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ದಾಖಲಾದ ಪ್ರಕರಣಗಳು ಎಷ್ಟು; ಹಲ್ಲೆಗೋಳಗಾದವರ ಸಂಖ್ಯೆ ಎಷ್ಟು ; ಮರಣ ಹೊಂದಿದವರ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ತಾಲ್ಲೂಕುವಾರು ಹಲ್ಲೆಗೊಳಗಾದವರ ಹೆಸರು ದೂರವಾಣಿ ಸಂಖ್ಯೆ ಸಹಿತ ಮಾಹಿತಿ ನೀಡುವುದು)

(ಈ) ಈ ಜಿಲ್ಲೆಗಳಲ್ಲಿ ಹೊರರಾಜ್ಯಗಳಿಂದ ಬಂದು ಕೂಲಿ ಕಾರ್ಮಿಕರಾಗಿ ಕಾಫಿ ತೋಟದಲ್ಲಿ ನೆಲೆಸಿರುವವರ ಸಂಪೂರ್ಣ ದಾಖಲಾತಿಗಳು ಸ್ಥಳೀಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇದೆಯೇ; (ಅವರ ಭಾವಚಿತ್ರ ಆಧಾರ್ ಒಳಗೊಂಡಂತೆ ) ಪ್ರಸ್ತುತ ಈ ಜಿಲ್ಲೆಗಳಲ್ಲಿ ಎಷ್ಟು ಪ್ರಜೆಗಳು ಹೊರ ರಾಜ್ಯದಿಂದ ಬಂದಂತಹ ಕೂಲಿ ಕಾರ್ಮಿಕರ ಬಗ್ಗೆ ತೋಟದ ಮಾಲೀಕರಿಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಲು ತಿಳಿಸಲಾಗಿದೆಯೇ ?

## ರಾಜ್ಯದಲ್ಲಿ ಖಾಲಿ ಉಳಿದಿರುವ ಹುದ್ದೆಗಳ ಬಗ್ಗೆ

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೮ (೨೨೪೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯಾವ ಯಾವ ಇಲಾಖೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಉಳಿದಿವೆ; ಅಮಾನತ್ತಿನಲ್ಲಿರುವವರ ಸಂಖ್ಯೆ ಎಷ್ಟು; ಯಾವ ಕಾರಣದಿಂದ ಸಿಬ್ಬಂದಿಗಳನ್ನು ಅಮಾನತ್ತು ಮಾಡಲಾಗಿದೆ; ಇಲಾಖಾ ವ್ಯಾಪ್ತಿಯಲ್ಲಿ ತನಿಖೆ ನಡೆಯುತ್ತಿರುವವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಅಮಾನತ್ತುಗೊಂಡವರ ಹೆಸರು, ವಿಳಾಸ, ಪದನಾಮ ಮತ್ತು ಕಾರಣವನ್ನು ಒದಗಿಸುವುದು)

(ಆ) ಖಾಲಿ ಇರುವ ಹುದ್ದೆಗಳಿಗೆ ಯಾವ ಕಾಲಮಿತಿಯೊಳಗೆ ನೇಮಕಾತಿ ಪೂರ್ಣಗೊಳಿಸಲಾಗುವುದು: ನೇಮಕಾತಿ ಆದೇಶ ಹೊರಡಿಸಿ ವರ್ಷಗಳೇ ಕಳೆದರೂ ಹುದ್ದೆಗಳಿಗೆ ಪರೀಕ್ಷೆ ನಡೆಸದೇ ಇರುವ ಇಲಾಖೆಗಳು ಯಾವುವು ; (ಉದಾ: ಕೃಷಿ ಇಲಾಖೆ) ವಿಳಂಬವಾಗುತ್ತಿರುವುದಕ್ಕೆ ಸೂಕ್ತ ಕಾರಣವೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಹೊರ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಸರ್ಕಾರ ಖಾಯಂ ಮಾಡುವ ಬಗ್ಗೆ ಚಿಂತಿಸಿದೆಯೇ ; ಇಲ್ಲವಾದಲ್ಲಿ, ಅವರ ಬದಲಿಗೆ ನೂತನ ನೇಮಕಾತಿ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ: ಹೊರಗುತ್ತಿಗೆಯವರು ೫ ರಿಂದ ೧೦ ದಿನಗಳವರೆಗೆ ಪ್ರತಿಭಟನೆ ಮಾಡಿ ಸರ್ಕಾರಕ್ಕೆ ಖಾಯಂ ಮಾಡುವುದರ ಬಗ್ಗೆ ಹೋರಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಗಿರವಿ ಪರವಾನಿಗೆ ಮತ್ತು ಹಣಕಾಸು ಸಂಸ್ಥೆಗಳ ಬಗ್ಗೆ

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦೯ (೨೨೪೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗಿರವಿ ಪರವಾನಿಗೆ ನೀಡಲು ಇರುವ ಮಾನದಂಡಗಳೇನು ; ರಾಜ್ಯದಲ್ಲಿ ಪ್ರಸ್ತುತ ಅಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಪರವಾನಿಗೆಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹೊಸ ಪರವಾನಿಗೆ ಮತ್ತು ನವೀಕರಣದಿಂದ ಖಜಾನೆಗೆ ಬರುವ ಹಣ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಗಿರವಿ ಮತ್ತು ಹಣಕಾಸು ಸಂಸ್ಥೆಗಳಿಗೆ ಪರವಾನಿಗೆ ನೀಡುವ ಪ್ರಾಧಿಕಾರಿಗಳು ಯಾರು ; ಇವರಿಂದ ಈ ಸಂಸ್ಥೆಗಳ ವಾರ್ಷಿಕ ಪರಿವೀಕ್ಷಣೆ ನಡೆಸುವ ನಿಯಮ ಇಲಾಖೆಯಲ್ಲಿ ಇದೆಯೇ; ಇದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ನಡೆಸಿರುವ ಪರಿವೀಕ್ಷಣೆಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ಪರವಾನಿಗೆ ಪಡೆಯದೆ ಗಿರವಿ ಮತ್ತು ಹಣಕಾಸು ಸಂಸ್ಥೆಗಳು ಅಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಜಿಲ್ಲಾವಾರು, ಪ್ರಕರಣವಾರು ಮಾಹಿತಿ ನೀಡುವುದು)

(ಉ) ರಾಜ್ಯದಲ್ಲಿ ಗಿರವಿ ಮತ್ತು ಹಣಕಾಸು ಸಂಸ್ಥೆಗಳು ತಮ್ಮ ಸಾಲದ ಮೇಲೆ ವಿಧಿಸಬಹುದಾದ ನಿಗದಿತ ಬಡ್ಡಿ ಎಷ್ಟು; ರಾಜ್ಯದಲ್ಲಿ ಮೇಲಿನ ಸಂಸ್ಥೆಗಳು ವಾರ್ಷಿಕ ಸುಮಾರು ೨೫%ರ ಪ್ರಮಾಣದಲ್ಲಿ ಬಡ್ಡಿ ವಿಧಿಸಿ ರೈತರನ್ನು ಹಾಗೂ ಬಡವರನ್ನು ದೋಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಜಿಲ್ಲಾವಾರು ಮಾಹಿತಿ ನೀಡುವುದು) ಸದರಿ ಅಧಿಕೃತ ಪರವಾನಿಗೆ ಹಾಗೂ ಹೆಚ್ಚಿನ ಬಡ್ಡಿ ಪಡೆಯುವ ಕೃತ್ಯವನ್ನು ಪತ್ತೆಹಚ್ಚುವ ಸಲುವಾಗಿ ಅಳವಡಿಸಿಕೊಂಡಿರುವ ವಿಧಾನಗಳೇನು ;

(ಊ) ಮುತ್ತೂಟ್, ಮಣಿಪುರಂ ಮತ್ತು ಇತರೆ ಹಣಕಾಸು ಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಸರ್ಕಾರದ ಖಜಾನೆಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ;

(ಋ) ಗಿರವಿ ಅಡವಿಟ್ಟ ಅವಧಿ ಮೀರಿದ ಆಭರಣಗಳನ್ನು ವಿಲೇ ಮಾಡುವ ವಿಧಾನವೇನು ; ಅವಧಿ ಮೀರಿದ ಆಭರಣಗಳು ಹರಾಜು

ಪರವಾನಿಗೆ ನೀಡಲು ಇರುವ ಮಾನದಂಡಗಳೇನು ; ಹರಾಜು ಪರವಾನಿಗೆ ಇಲ್ಲದ ವ್ಯಕ್ತಿಗಳು ಹರಾಜು ಪ್ರಕ್ರಿಯೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? (ಜಿಲ್ಲಾವಾರು ಮಾಹಿತಿ ನೀಡುವುದು)

## K.C ವ್ಯಾಲಿ ಯೋಜನೆಯ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೧೦ (೨೧೭೪) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಸಿ ವ್ಯಾಲಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು ; ಪ್ರಸ್ತುತ ಯೋಜನೆಗೆ ಸರ್ಕಾರ ಪ್ರತಿ ವರ್ಷ ಎಷ್ಟು ಹಣ ಖರ್ಚು ಮಾಡುತ್ತಿದೆ ; ಯಾವ ಉದ್ದೇಶಗಳಿಗೆ ಖರ್ಚು ಮಾಡುತ್ತಿದೆ ಎನ್ನುವುದರ ಸಂಪೂರ್ಣ ಮಾಹಿತಿ ನೀಡುವುದು ; (ಪ್ರಾರಂಭದಿಂದ ವರ್ಷವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಆ) ಕೆ.ಸಿ. ವ್ಯಾಲಿ ಯೋಜನೆಯಡಿಯಲ್ಲಿ ಪ್ರಸ್ತುತ ಎಷ್ಟು ಹಂತಗಳಲ್ಲಿ ನೀರನ್ನು ಸಂಸ್ಕರಿಸಲಾಗುತ್ತಿದೆ ; ಮೂರನೇ ಹಂತದ ಸಂಸ್ಕರಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಯಾವ ಕಾಲ ಮಿತಿಯಲ್ಲಿ ಜಾರಿ ಮಾಡಲಾಗುವುದು ; ಇಲ್ಲದಿದ್ದಲ್ಲಿ, ೩ ನೇ ಹಂತದ ಸಂಸ್ಕರಣೆ ಮಾಡದಿರಲು ಕಾರಣಗಳೇನು ;

(ಇ) ಸಂಸ್ಕರಿಸಿದ ನೀರಿನ ಗುಣಮಟ್ಟದ ಬಗ್ಗೆ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಮಾಡುತ್ತಿರುವ ಸಂಸ್ಥೆ ಯಾವುದು ; ಸದರಿ ಸಂಸ್ಥೆಯು ನೀಡಿರುವ ದತ್ತಾಂಶ/ವರದಿಯ ಮಾಹಿತಿ ನೀಡುವುದು ; ನಿರ್ವಹಣೆಯನ್ನು ಅದೇ ಸಂಸ್ಥೆಗೆ ವಹಿಸಲು ಕಾರಣಗಳೇನು ;

(ಈ) ಸದರಿ ಯೋಜನೆಯಡಿಯಲ್ಲಿ ಎನ್.ಜಿ.ಟಿ ನೀಡಿದ ನಿರ್ದೇಶನದಂತೆ ಎಷ್ಟು ಎಸ್.ಟಿ.ಪಿ ಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ ಹಾಗೂ

ಮೇಲ್ದರ್ಜೆಗೆ ಏರಿಸಲು ಎಷ್ಟು ಬಾಕಿ ಇವೆ ; ಬಾಕಿಗೆ ಕಾರಣಗಳು ಮತ್ತು ಯಾವ ಕಾಲಮಿತಿಯಲ್ಲಿ ಮೇಲ್ದರ್ಜೆಗೆ ಏರಿಸಲಾಗುವುದು ?

## ಗುರು ರಾಘವೇಂದ್ರ ಬ್ಯಾಂಕ್‌ನಲ್ಲಾದ ಹಣ ದುರುಪಯೋಗದ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೧೧ (೨೧೭೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುರು ರಾಘವೇಂದ್ರ ಬ್ಯಾಂಕಿನಲ್ಲಿ ಆದ ಒಟ್ಟು ದುರುಪಯೋಗವಾದ ಮೊತ್ತ ಎಷ್ಟು ; ಲೆಕ್ಕ ಪರಿಶೋಧನ ವರದಿ ನೀಡಿದ ಕಂಪನಿ/ ವ್ಯಕ್ತಿಗಳು ಯಾರು ; ಯಾವಾಗ ನೀಡಲಾಗಿದೆ ; (ವರ್ಷವಾರು ಮಾಹಿತಿ ನೀಡುವುದು)

(ಆ) ಮೂಲ ಲೆಕ್ಕ ಪರಿಶೋಧನೆ ಹಾಗೂ ಪರಿಷ್ಕೃತ ಲೆಕ್ಕ ಪರಿಶೋಧನೆಗಳಲ್ಲಿ ವ್ಯತ್ಯಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಲೆಕ್ಕ ಪರಿಶೋಧನೆಯಲ್ಲಿ ವ್ಯತ್ಯಾಸವಾಗಲು ಕಾರಣಗಳೇನು ;

(ಇ) ಸರ್ಕಾರ ಯಾವ ಲೆಕ್ಕ ಪರಿಶೋಧನೆ ವರದಿಯನ್ನು ಅಂಗೀಕರಿಸುವುದು ; ಮೂಲ/ಪರಿಷ್ಕೃತ ಲೆಕ್ಕ ಪರಿಶೋಧನೆ ವರದಿಯೆ ಎನ್ನುವುದನ್ನು ಸ್ಪಷ್ಟಪಡಿಸುವುದು ಸದರಿ ವರದಿಯನ್ನು ಅಂಗೀಕರಿಸಲು ಕಾರಣಗಳೇನು ?

## ಇಲಾಖಾವಾರು ಬಿಡುಗಡೆ ಮಾಡಿದ ಅನುದಾನ ಮತ್ತು ಉಳಿಕೆ ಅನುದಾನದ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೧೨ (೨೧೭೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫-೨೬ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾವಿತ ಅನುದಾನ ಹಾಗೂ ಬಿಡುಗಡೆ ಮಾಡಿದ ಅನುದಾನವೆಷ್ಟು ; (ಜನವರಿ-೨೦೨೬ರ ಅಂತ್ಯದ ವರೆಗೆ ಇಲಾಖಾವಾರು ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು)

(ಆ) ೨೦೨೬ರ ಜನವರಿ ಅಂತ್ಯಕ್ಕೆ ಎಲ್ಲಾ ಇಲಾಖೆಗಳು ಖರ್ಚು ಮಾಡಿದ ಮೊತ್ತ ಹಾಗೂ ಉಳಿಕೆ ಮೊತ್ತವೆಷ್ಟು ; (ಇಲಾಖಾವಾರು ಪ್ರತ್ಯೇಕ ಸಂಪೂರ್ಣ ಮಾಹಿತಿ ನೀಡುವುದು)

(ಇ) ಸರ್ಕಾರದ ಹಲವು ಇಲಾಖೆಗಳಲ್ಲಿ ಅನುದಾನ ಬಾಕಿ ಉಳಿಯಲು ಕಾರಣಗಳೇನು ; ಉಳಿಕೆ ಅನುದಾನವನ್ನು ಯಾವ ಕಾಲ ಮಿತಿಯಲ್ಲಿ ಖರ್ಚು ಮಾಡಲಾಗುವುದು ?

## ರಾಜ್ಯದಲ್ಲಿ ಗುತ್ತಿಗೆದಾರರಿಗೆ ಸರ್ಕಾರದ ವಿವಿಧ ಇಲಾಖೆಗಳಿಂದ ಪಾವತಿಸಲು ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :-**

೨೦೧೩ (೨೨೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಅನುದಾನವನ್ನು ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ;

(ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಗುತ್ತಿಗೆದಾರರಿಗೆ ಇಲ್ಲಿಯವರೆಗೂ ಬಾಕಿ ಅನುದಾನವನ್ನೂ ಪಾವತಿ ಮಾಡದೇ ಇರಲು ಕಾರಣವೇನು ;

ಇದರಿಂದಾಗಿ ಆರ್ಥಿಕ ಸಮಸ್ಯೆಯನ್ನು ಅನುಭವಿಸುತ್ತಿರುವ ಗುತ್ತಿಗೆದಾರರು ಆತ್ಮಹತ್ಯೆಗಳ ದಾರಿ ಹಿಡಿಯುತ್ತಿದ್ದು ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿರುವ ಗುತ್ತಿಗೆದಾರರಿಗೆ ವಿವಿಧ ಇಲಾಖೆಗಳಿಂದ ಪಾವತಿ ಮಾಡಲು ಬಾಕಿ ಇರುವ ಅನುದಾನವೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು)

(ಈ) ಆರ್ಥಿಕ ದಿವಾಳಿತನ ಎದುರಿಸುತ್ತಿರುವ ಗುತ್ತಿಗೆದಾರರಿಗೆ ಯಾವ ಕಾಲಮಿತಿಯಲ್ಲಿ ಬಾಕಿ ಉಳಿದಿರುವ ಅನುದಾನವನ್ನು ಪಾವತಿ ಮಾಡಲಾಗುವುದು ?

## ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ೫೬,೪೩೨ ಹುದ್ದೆಗಳ ನೇಮಕಾತಿಗೆ ಅಧಿಸೂಚನೆಯನ್ನು ಹೊರಡಿಸುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೨೦೧೪ (೨೨೯೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರವು ಅಧಿಕೃತವಾಗಿ ನೀಡಿರುವ ದಾಖಲೆಯ ಪ್ರಕಾರ ೫೬,೪೩೨ ಹುದ್ದೆಗಳಿಗೆ ಆರ್ಥಿಕ ಇಲಾಖೆಯಿಂದ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅನುಮೋದನೆ ಪಡೆದಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಇವುಗಳಲ್ಲಿ ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುವ ೩೨.೧೩೨ ಹುದ್ದೆಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಗ್ರೂಪ್ 'ಎ' ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ಹುದ್ದೆಗಳು ಯಾವುವು ; ಇಲಾಖೆಗಳ ಸಮೇತ ಎಲ್ಲಾ ಹುದ್ದೆಗಳ ಹಾಗೂ ಪದನಾಮಗಳ ಸಮೇತ ಸಂಪೂರ್ಣ ವಿವರ ನೀಡುವುದು ;

(ಇ) ಇವುಗಳಲ್ಲಿ ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುವ ೨೪,೩೦೦ ಹುದ್ದೆಗಳಲ್ಲಿ ಉಳಿಕೆ ಮೂಲ ವೃಂದದ ಗ್ರೂಪ್ 'ಎ'

ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ಹುದ್ದೆಗಳು ಯಾವುವು: ಇಲಾಖೆಗಳ ಸಮೇತ ಎಲ್ಲಾ ಹುದ್ದೆಗಳ ಹಾಗೂ ಪದನಾಮಗಳ ಸಮೇತ ಸಂಪೂರ್ಣ ವಿವರ ನೀಡುವುದು ;

(ಈ) ಆರ್ಥಿಕ ಇಲಾಖೆಯಿಂದ ಪ್ರಸ್ತುತ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಎಷ್ಟು ಕೆ.ಎ.ಎಸ್ ಗೆಜೆಟೆಡ್ ಪ್ರೋಬೆಷನರ್ಸ್ ಹುದ್ದೆಗಳ ನೇಮಕಾತಿಗಾಗಿ ಅನುಮೋದನೆ ಪಡೆಯಲಾಗಿದೆ ;

(ಉ) ಸರ್ಕಾರದ ವಿವಿಧ ಇಲಾಖೆಗಳು ಸಲ್ಲಿಸಿರುವ ಪ್ರಸ್ತಾವನೆಗಳು ಎಷ್ಟು ಇವುಗಳಲ್ಲಿ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದಿರುವ ಹುದ್ದೆಗಳ ಸಂಖ್ಯೆ ಎಷ್ಟು ; ಇಲಾಖೆಗಳು ಹಾಗೂ ಅನುಮೋದನೆ ಪಡೆದಿರುವ ಹುದ್ದೆಗಳ ಸಮೇತ ಪೂರ್ಣ ವಿವರವನ್ನು ಒದಗಿಸುವುದು ;

(ಊ) ಯಾವ ಕಾಲಮಿತಿಯಲ್ಲಿ ಈ ಮೇಲಿನ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗುವುದು ?

## ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಚುನಾವಣೆಯ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೨೦೧೫ (೨೨೯೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವಾರ್ಷಿಕ ಚುನಾವಣೆಯ ಕುರಿತು ಉಚ್ಚ ನ್ಯಾಯಾಲಯದಲ್ಲಿರುವ ಪ್ರಕರಣ ವಿಲೇವಾರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಆಡಳಿತ ಅಧಿಕಾರಿಯ ಅವಧಿಯನ್ನು ಎಷ್ಟು ಬಾರಿ ವಿಸ್ತರಿಸಲಾಗಿದೆ ;

(ಇ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿಗೆ ನೀಡಿರುವ ಅನುದಾನ ಎಷ್ಟು ; ಅನುದಾನದ ಬಳಕೆಯ ಸಂಪೂರ್ಣ ವಿವರವನ್ನು ನೀಡುವುದು ;

(ಈ) ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಆಡಳಿತ ಅಧಿಕಾರಿಯು ಪರಿಷತ್ತಿನಲ್ಲಿನ ಆರ್ಥಿಕ ಸಂಪನ್ಮೂಲ ಬಳಸಲು ಸರ್ಕಾರದ ಅನುಮತಿ ಪಡೆದಿದ್ದಾರೆಯೇ ;

(ಉ) ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಚುನಾವಣೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿನ ಪ್ರಕರಣ ಕುರಿತು ವಾದಿಸಲು ನ್ಯಾಯವಾದಿಗಳನ್ನು ನೇಮಿಸಲಾಗಿದೆಯೇ ; ನೇಮಿಸದಿದ್ದರೆ ಕಾರಣವೇನು ?

## ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೨೦೧೬ (೨೨೯೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸೇವೆ ಸಲ್ಲಿಸಿದ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು ; ಈ ಕಾರ್ಯದರ್ಶಿಗಳನ್ನು ಯಾವಾಗ ವರ್ಗಾವಣೆ ಮಾಡಲಾಗಿತ್ತು ; (ವಿವರ ನೀಡುವುದು)

(ಆ) ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಐಎಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು ;

(ಇ) ಆಯೋಗದಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಪರೀಕ್ಷಾ ನಿಯಂತ್ರಕರು ಎಷ್ಟು ವರ್ಷಗಳಿಂದ ಅದೇ ಹುದ್ದೆಯಲ್ಲಿ ಮುಂದುವರೆದಿದ್ದಾರೆ ;

(ಈ) ಈಗಿನ ಪರೀಕ್ಷಾ ನಿಯಂತ್ರಕರು ಕೆಎಎಸ್ ಮತ್ತು ಇನ್ನಿತರೆ ಪರೀಕ್ಷೆಗಳು ಸೇರಿ ಸರಿಯಾಗಿ ಕಾರ್ಯನಿರ್ವಹಿಸದೆ ನಿರ್ಲಕ್ಷ್ಯವಹಿಸಿದ್ದರೂ ಸಹ ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಅದೇ ಹುದ್ದೆಯಲ್ಲಿ ಮುಂದುವರೆಸಲು ಕಾರಣವೇನು ; ಈ ಕುರಿತು ಸರ್ಕಾರವು ಮಾಹಿತಿ ನೀಡುವುದು ?

## ಕೆಪಿಎಸ್‌ಸಿ ವತಿಯಿಂದ ನಡೆಸಿರುವ ೩೮೪ ಕೆಎಎಸ್ ಗೆಜೆಟೆಡ್ ಪ್ರೋಬೆಷನರ್ಸ್ ಹುದ್ದೆಗಳ ಮುಖ್ಯ ಪರೀಕ್ಷೆಯಲ್ಲಿ ಹಗರಣ ನಡೆದಿರುವ ಆರೋಪದ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೨೦೧೬ (೨೭೯೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇದೇ ಮಾರ್ಚ್ ೦೨ ರಂದು ಕರ್ನಾಟಕ ಲೋಕಸೇವಾ ಆಯೋಗವು ೩೮೪ ಕೆಎಎಸ್ ಗೆಜೆಟೆಡ್ ಪ್ರೋಬೆಷನರ್ಸ್ ಹುದ್ದೆಗಳ ನೇಮಕಾತಿಗಾಗಿ ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ್ದು, ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯಲ್ಲಿ ಪರೀಕ್ಷಾ ಕೇಂದ್ರವೊಂದರ ಒಂದೇ ಬ್ಲಾಕ್‌ನ ಹತ್ತಾರು ಅಭ್ಯರ್ಥಿಗಳು ಅನುಮಾನಾಸ್ಪದ ರೀತಿಯಲ್ಲಿ ಆಯ್ಕೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒಂದೇ ಪರೀಕ್ಷಾ ಕೇಂದ್ರದಲ್ಲಿನ ಒಂದೇ ಅಡ್ಡ ಹೆಸರು ಹೊಂದಿರುವ (ನಧಾಫ್) ಅಭ್ಯರ್ಥಿಗಳು (ದಾಖಲಾತಿ ಸಂಖ್ಯೆ : – ೨೫೦೦೦೪೮೮೧, ೨೫೦೦೦೪೮೮೪, ೨೫೦೦೦೧೫೨೬, ೨೫೦೦೦೧೫೬೦. ೨೫೦೦೦೦೧೫೬೫, ೨೫೦೦೦೧೬೦೮) ಆಯ್ಕೆಯಾಗಲು ಹೇಗೆ ಸಾಧ್ಯ ;

(ಇ) ಕ್ರಮ ಸಂಖ್ಯೆಗಳಿಗನುಗುಣವಾಗಿ ಹಾಗೂ ಕ್ರಮಾನುಗತವಾಗಿ ಸ್ಥಾನ ಪಡೆದ ಅಭ್ಯರ್ಥಿಗಳು (೨೫೦೦೦೪೯೬೦, ೬೧,೬೨,೬೩,೬೪,೬೫,೬೯) ಹಾಗೂ ದಾಖಲಾತಿ ಕ್ರಮ ಸಂಖ್ಯೆ– ೨೫೦೦೦೪೮೯.೧೦.೧೧.೧೨.೧೩.೧೪.೧೫.೧೬.೧೮.೧೯ ಹೀಗೆ ಸ್ಥಾನ ಪಡೆಯಲು ಹೇಗೆ ಸಾಧ್ಯ ;

(ಈ) ಇದರಿಂದ ಅನ್ಯಾಯಕೊಳ್ಳಗಾದ ಅಭ್ಯರ್ಥಿಗಳು ಆಕ್ರೋಶ ವ್ಯಕ್ತಪಡಿಸಿ ಉನ್ನತ ಮಟ್ಟದ ತನಿಖೆಗೆ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಈ ದೊಡ್ಡ ಮಟ್ಟದ ಕೆಎಎಸ್ ಪರೀಕ್ಷೆಯ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಉನ್ನತ ಮಟ್ಟದ ತನಿಖೆಗೆ ವಹಿಸಲಾಗುವುದು; ಈ ಕುರಿತು ಸ್ಪಷ್ಟನೆಯನ್ನು ನೀಡುವುದು ;

(ಊ) ಈ ಅಕ್ರಮದ ಕುರಿತು ತನಿಖೆ ಪೂರ್ಣಗೊಂಡು ಇತ್ಯರ್ಥವಾಗುವರೆಗೂ ವ್ಯಕ್ತಿತ್ವ ಪರೀಕ್ಷೆಯನ್ನು ತಡೆ ಹಿಡಿಯಲು ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು ?

## ರಾಜ್ಯದ ಪೊಲೀಸ್ ಇಲಾಖೆಯ ASI TO PSI ಮಾಹಿತಿ ನೀಡುವುದು

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೨೦೧೮ (೨೨೭೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಮತ್ತು ರಾಜ್ಯ ಪೊಲೀಸ್ ಇಲಾಖೆಯಲ್ಲಿ ೩೧ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು, ೭ ವರ್ಷಗಳಿಂದ ಸಿವಿಲ್ ASI ಆಗಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ಸಾರಿಗೆ ASI ಇಂದ PSI ಗೆ ಯಾವ ಕಾಲಮಿತಿಯೊಳಗೆ ಮುಂಬಡ್ತಿ ನೀಡುತ್ತೀರಿ ;

(ಆ) ರಾಜ್ಯದಲ್ಲಿ ಬೇರೆ ಬೇರೆ ಸರ್ಕಾರಿ ಇಲಾಖೆಯಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳು ಶೇಕಡ ೫೦/೫೦ ರಷ್ಟು ಇದ್ದು, ಪೊಲೀಸ್ ಇಲಾಖೆಯಲ್ಲಿ ಮಾತ್ರ ೭೦/೩೦ ರಷ್ಟಿರುತ್ತದೆ ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರದಿಂದ ಸಾಧ್ಯವಿಲ್ಲವೆ ಅಥವಾ ಯಾವ ಕಾಲಮಿತಿಯೊಳಗೆ ಈ ತಾರತಮ್ಯವನ್ನು ಸರಿಪಡಿಸಲಾಗುವುದು ;

(ಇ) ಬೆಂಗಳೂರು ನಗರದ ಆಯುಕ್ತರ ಕಛೇರಿಗೆ ರೈಲ್ವೆ ಪೊಲೀಸ್ ಮತ್ತು ವಿವಿಧ ಘಟಕಗಳಿಂದ ೧೯೯೯ನೇ ಸಾಲಿನಲ್ಲಿ ನೇಮಕಾತಿ ಹೊಂದಿ ನಗರಕ್ಕೆ ವರ್ಗಾವಣೆಯಾಗಿ ಬಂದು ೧೯೯೬ ರಲ್ಲಿ ನೇಮಕಾತಿ ಹೊಂದಿ ಬೆಂಗಳೂರು ನಗರದ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ASI ಗಳ ಜೇಷ್ಠತಾ ಪಟ್ಟಿಯಲ್ಲಿ ಮುಂದೆ ಇದ್ದು ಇನ್ನು ಕೆಲವರು PSI ಆಗಿ ಮುಂಬಡ್ತಿ ಹೊಂದಿದ್ದಿ, ಯಾವ ಆದೇಶದಂತೆ ಮುಂಬಡ್ತಿ ನೀಡಲಾಗಿದೆ ; ಈ ವಿಷಯ ಸರ್ಕಾರ ಮತ್ತು ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದಿದೆಯೇ ;

(ಈ) ಬೆಂಗಳೂರು ನಗರ ಮತ್ತು ರಾಜ್ಯ ದಲ್ಲಿ ASI ಗಳು ಪ್ರತಿ ನಿತ್ಯ ೧೨ ರಿಂದ ೧೮ ಗಂಟೆಗಳ ವರಗೆ ಕರ್ತವ್ಯ ನಿರ್ವಹಿಸುತ್ತಿದ್ದು ಇವರಿಗೆ ವಾರದ ರಜೆ ಇಲ್ಲವೇ ? (ಪೂರ್ಣ ಮಾಹಿತಿ ಒದಗಿಸುವುದು)

## ರಾಜ್ಯದ ವಿವಿಧ ನೀರಾವರಿ ಯೋಜನೆಗಳ ಬಗ್ಗೆ

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೨೦೧೯ (೨೨೭೫) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿವಿಧ ನೀರಾವರಿ ಯೋಜನೆಗಳಿಂದ, ಎಷ್ಟು ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿಯನ್ನು ನೀಡಲಾಗಿದೆ ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಯಾವ ಯಾವ ನೀರಾವರಿ ಯೋಜನೆಯಿಂದ ಯಾವ ಯಾವ ನಗರಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಸಲಾಗಿದೆ ; ಎಷ್ಟು ಪ್ರಮಾಣದ ನೀರನ್ನು ಕುಡಿಯುವ ಉದ್ದೇಶಕ್ಕೆ ಬಳಸಲಾಗುತ್ತಿದೆ ;

(ಇ) ಪ್ರಸ್ತುತಯಿರುವ ನೀರಿನ ಯೋಜನೆಗಳಲ್ಲಿ ಕೃಷಿಗೆ ಮತ್ತು ಕುಡಿಯುವ ನೀರಿನ ಯೋಜನೆಗೆ ನೀರು ಸಾಕಾಗುತ್ತದೆಯೇ ; ಇಲ್ಲದೇ ಇದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಚೌಡದನಾಪುರದಲ್ಲಿ ನೀರಾವರಿ ಇಲಾಖೆಯಿಂದ ಕಟ್ಟಿದ ಕಟ್ಟಡಗಳ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೨೦೨೦ (೨೨೯೨) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಚೌಡದಾನಪುರದಲ್ಲಿ ನೀರಾವರಿ ಇಲಾಖೆಯಿಂದ ಕಟ್ಟಿದ ಕಟ್ಟಡಗಳ ಸಂಖ್ಯೆ ಎಷ್ಟು; ಮತ್ತು ವೆಚ್ಚ ಮಾಡಿದ ಹಣ ವೆಷ್ಟು ;

(ಆ) ಈ ಕಟ್ಟಡಗಳು ಈಗ ಯಾವ ಸಂಘಟನೆ/ಸಂಘದ ಸುಪರ್ಧಿಗೆ ಒಪ್ಪಿಸಲಾಗಿದೆ ;

(ಇ) ಕೋಲಿ/ಕಬ್ಬಲಿಗ/ಅಂಬಿಗ/ಬೆಸ್ತ ಸಮುದಾಯಕ್ಕೆ ಅನುಕೂಲ ಮಾಡಿಕೊಡಲು ಕಟ್ಟಿದ ಕಟ್ಟಡ ಅವೈಜ್ಞಾನಿಕವಾಗಿದ್ದು ಇಂದು ಯಾವುದೇ ಉಪಯೋಗವಿಲ್ಲದೆ ಖಾಲಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಕಟ್ಟಡಗಳನ್ನು ಕಟ್ಟುವಾಗ ಸಾಕಷ್ಟು ಅವ್ಯವಹಾರವಾಗಿದೆ ಮತ್ತು ಮಳೆ ಬಂದಾಗ ಕಟ್ಟಡಗಳ ಸುತ್ತಲು ಎರಡು–ಮೂರು ಅಡಿಯಷ್ಟು ನೀರು ನಿಲ್ಲುತ್ತದೆ ಎಂದು ಸಮಾಜದ ಪ್ರಮುಖರು ಆರೋಪಿಸುತ್ತಿರುವ ಸಂಬಂಧ ಸೂಕ್ತ ತನಿಖೆ ಕೈಗೊಳ್ಳಲು ಕ್ರಮ ವಹಿಸಲಾಗಿದೆಯೇ ;

(ಉ) ಈ ಕಟ್ಟಡಗಳಿಂದ ಒಂದು ಕಿಲೋ ಮೀಟರ್ ದೂರದಲ್ಲಿರುವ ನರಸೀಪುರದ ನಿಜಶರಣ ಅಂಬಿಗರ ಚೌಡಯ್ಯನವರ ಮಠಕ್ಕೆ ಈ ಕಟ್ಟಡಗಳ ನಿರ್ವಹಣೆ ಮತ್ತು ಬಳಕೆಗೆ ಕೊಟ್ಟರೆ ಸೂಕ್ತವಲ್ಲವೇ ?

## ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೨೦೨೧ (೨೨೭೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಬೇಕಾದ ಪೊಲೀಸ್ ಇಲಾಖೆಯ ಸಿಬ್ಬಂದಿಗಳೇ ಕಳೆದ ಸಾಲಿನಲ್ಲಿ ೮೮ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಸಿಬ್ಬಂದಿಗಳು ಯಾವ ಯಾವ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ; (ವಿವರ ನೀಡುವುದು)

(ಆ) ಈ ರೀತಿ ಪ್ರಕರಣಗಳಲ್ಲಿ ಭಾಗಿಯಾಗಿರುವವರ ಮೇಲೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ ;

(ಇ) ರಾಜ್ಯದ ಕೆಲವು ಠಾಣೆಗಳಲ್ಲಿ ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣ ಜನರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಂತಹ ಠಾಣೆಗಳು ಯಾವುವು; ಈ ಠಾಣೆಗಳಲ್ಲಿ ಸರಿಯಾಗಿ ಕರ್ತವ್ಯ ನಿರ್ವಹಿಸದೆ ಇರುವ ಅಧಿಕಾರಿ/ಸಿಬ್ಬಂದಿಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿದೆ ?

# ರಾಜೀವ್ ಗಾಂಧಿ ಸಿಗ್ನಲ್ ಮುಕ್ತ ಅಷ್ಟಪಥ ರಸ್ತೆಯ ಕಾಮಗಾರಿ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೨೦೨೨ (೨೨೭೮) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಓಕಳಿಪುರಂ ನಿಂದ ರೈಲ್ವೆ ನಿಲ್ದಾಣದವರೆಗೂ ನಿರ್ಮಾಣ ಮಾಡಲಾಗಿರುವ ರಾಜೀವ್ ಗಾಂಧಿ ಸಿಗ್ನಲ್ ಮುಕ್ತ ಅಷ್ಟಪಥ ರಸ್ತೆಯ ಕಾಮಗಾರಿಯು ಎಂದು ಪ್ರಾರಂಭವಾಯಿತು ; ಪ್ರಸ್ತುತ ಯಾವ ಹಂತದಲ್ಲಿದೆ ;

(ಆ) ಈ ಕಾಮಗಾರಿಯು ಯಾವ ಯಾವ ಗುತ್ತಿಗೆದಾರರಿಗೆ ಪೂರ್ಣಗೊಳಿಸಲು ನೀಡಲಾದ ಕಾಲವಧಿ ಎಷ್ಟು ; ನೀಡಲಾಗಿರುವ ಕಾಲವಾಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದಾರೆಯೇ ;

(ಇ) ಸರ್ಕಾರ ನೀಡಿರುವ ಸಮಯಕ್ಕೆ ಸರಿಯಾಗಿ ಕಾಮಗಾರಿ ಪೂರೈಸದಿದ್ದರೇ, ಸರ್ಕಾರದ ನಿಯಮದಡಿ ಗುತ್ತಿಗೆದಾರರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ ;

(ಈ) ಈ ಯೋಜನೆಗೆ ಪ್ರಾರಂಭದಲ್ಲಿ ಎಷ್ಟು ಕೋಟಿ ರೂಪಾಯಿಗೆ ಟೆಂಡರ್‌ಗೆ ಅನುಮತಿ ನೀಡಲಾಗಿದೆ ; ತದನಂತರ ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು ; (ಕಾರಣಗಳೊಂದಿಗೆ ಪೂರ್ಣ ವಿವರ ಒದಗಿಸುವುದು)

(ಉ) ಈ ಯೋಜನೆಯು ಅವೈಜ್ಞಾನಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಒಂದು ಕಡೆಯಿಂದ ರಸ್ತೆ ದೊಡ್ಡದಾಗಿದ್ದು, ತದನಂತರ ರಸ್ತೆ ಕಿರಿದಾಗಿರುವುದರಿಂದ, ಟ್ರಾಫಿಕ್ ಜಾಮ್ ಅಗುತ್ತಿರುವುದು ಹಾಗೂ ಮಳೆಯ ನೀರಿನಿಂದ ಸಂಚಾರ ಮಾಡಲು ಕಷ್ಟವಾಗುತ್ತಿರುವುದನ್ನು ಅಧಿಕಾರಿಗಳು ಗಮನಹರಿಸಿಲ್ಲವೇ ; ಇದನ್ನು ಸರಿಪಡಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ;

(ಊ) ಸದರಿ ಕಾಮಗಾರಿ ಇದುವರೆಗೂ ಪೂರ್ಣಗೊಳಿಸಿದಿರಲು ಇರುವ ಕಾರಣಗಳೇನು ; ವಾಹನ ಸವಾರರಿಗೆ ಈ ರಸ್ತೆಯಲ್ಲಿ ಸಂಚಾರಿಸುವುದು ತುಂಬಾ ಕಷ್ಟವಾಗಿರುವುದನ್ನು ಅಧಿಕಾರಿಗಳು ಗಮನಿಸಿದ್ದಾರೆಯೇ ; ಸದಾಕಾಲ ಈ ರಸ್ತೆ ಟ್ರಾಫಿಕ್ ಜಾಮ್‌ನಿಂದ ಕೂಡಿರಲು ಕಾರಣಗಳೇನು ?

## ಬಿ–ಖಾತಾ ಆಸ್ತಿಗಳನ್ನು ಎ–ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸುವ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨೩ (೨೧೬೪) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ(ಜಿ.ಬಿ.ಎ) ವ್ಯಾಪ್ತಿಯಲ್ಲಿ ಎಷ್ಟು ಲಕ್ಷ ಬಿ–ಖಾತಾ ಆಸ್ತಿಗಳಿವೆ ; (ಈ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಪಾಲಿಕೆವಾರು ವಿವರವಾದ ಮಾಹಿತಿ ನೀಡುವುದು)

(ಆ) ಈ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬಿ–ಖಾತಾ ಆಸ್ತಿಗಳನ್ನು ಎ–ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸಲು ೨೦೨೫ರ ನವೆಂಬರ್ ೧ ರಿಂದ ಕೈಗೊಂಡಿರುವ ೧೦೦ ದಿನಗಳ ಅಭಿಯಾನಕ್ಕೆ ಮಾಲೀಕರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ನಗರ ಪಾಲಿಕೆಗಳವಾರು ಮಾಹಿತಿ ಒದಗಿಸುವುದು)

(ಇ) ಬಂದ ಅರ್ಜಿಗಳಲ್ಲಿ ಎಷ್ಟು ಜನ ಮಾಲೀಕರಿಗೆ ಎ–ಖಾತಾ ನೀಡಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಈ) ಯಶವಂತಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿ–ಖಾತಾ ಇರುವ ಆಸ್ತಿಗಳ ಸಂಖ್ಯೆ ಎಷ್ಟು: ಈ ಕ್ಷೇತ್ರದಲ್ಲಿ ಎ–ಖಾತೆಗೆ ಸ್ವೀಕೃತಿಗೊಂಡ ಆಸ್ತಿಗಳ ಸಂಖ್ಯೆ ಎಷ್ಟು: ಸ್ವೀಕೃತಿಗೊಂಡ ಅರ್ಜಿಗಳಲ್ಲಿ ಎಷ್ಟು ಆಸ್ತಿ ಮಾಲೀಕರಿಗೆ ಎ–ಖಾತೆ ನೀಡಲಾಗಿದೆ ; (ಮಾಹಿತಿ ಒದಗಿಸುವುದು)

(ಉ) ಇ–ಸ್ವತ್ತು ೨.೦ ತಂತ್ರಾಂಶದಲ್ಲಿ ತಾಂತ್ರಿಕ ದೋಷಗಳ ಸಮಸ್ಯೆ ಇರುವುದರಿಂದ ಸರ್ಕಾರಕ್ಕೆ ಇ–ಸ್ವತ್ತು ಆದಾಯ ನಷ್ಟವಾಗಿರುವುದು ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ತುರ್ತು ಕ್ರಮಗಳೇನು ? (ವಿವರ ನೀಡುವುದು)

## ಕಾವೇರಿ ೫ನೇ ಹಂತ ಯೋಜನೆ ಜಾರಿಯಾಗಿದ್ದರು ೧೧೦ ಹಳ್ಳಿಗಳಲ್ಲಿ ಒಳಚರಂಡಿ ಆಗದಿರುವ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨೪ (೨೧೬೬) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ ೫ನೇ ಹಂತದ ಯೋಜನೆ ಜಾರಿಯಾಗಿ ವರ್ಷ ಕಳೆದರೂ ಸಹ ಇನ್ನು ೧೧೦ ಹಳ್ಳಿಗಳ ವ್ಯಾಪ್ತಿಯಲ್ಲಿ ಪೂರ್ಣ ಪ್ರಮಾಣದ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸಾಧ್ಯವಿಲ್ಲದಿರುವುದು ಹಾಗೂ ಇನ್ನು ೧೦–೧೫ ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಕಾಮಗಾರಿಯು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ವಿವರಣೆ ನೀಡುವುದು)

(ಆ) ೫ನೇ ಹಂತದ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ವಿಶ್ವ ಬ್ಯಾಂಕ್ ನೆರವಿನ ಯೋಜನೆಯಡಿ ಕರ್ನಾಟಕ ಜಲಭದ್ರತಾ ಮತ್ತು ವಿಪತ್ತು ನಿರ್ವಹಣೆ ಯೋಜನೆಯಡಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆಯೇ ; (ಆಗಿಲ್ಲದಿದ್ದರೆ, ಸದ್ಯ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ ನೀಡುವುದು)

(ಇ) ಈ ಕಾಮಗಾರಿಗಳನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ; ಈ ಕಾಮಗಾರಿಗಾಗಿ ಒಟ್ಟಾರೆಯಾಗಿ

ಇಲ್ಲಿಯವರೆಗೆ ಖರ್ಚು ಮಾಡಿರುವ ಮೊತ್ತವೆಷ್ಟು ? (ವಿವರ ನೀಡುವುದು)

## ಎತ್ತಿನಹೊಳೆ ಯೋಜನೆ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨೫ (೨೧೬೭) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಎತ್ತಿನಹೊಳೆ ಯೋಜನೆಯಡಿ ೨೦೨೭ರ ಅಂತ್ಯದೊಳಗೆ ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕುಡಿಯುವ ನೀರಿಗಾಗಿ ಅಲ್ಲಿನ ಕೆರೆಗಳಿಗೆ ನೀರು ತುಂಬಿಸುವ ಕಾರ್ಯ ಸರ್ಕಾರ ಕೈಗೊಂಡಿದೆಯೇ ; (ಹಾಗಿದ್ದಲ್ಲಿ, ಈ ಬಗ್ಗೆ ಆಗಿರುವ ಪ್ರಗತಿಯ ವಿವರಗಳನ್ನು ಒದಗಿಸುವುದು)

(ಆ) ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಿಗೆ ಎತ್ತಿನಹೊಳೆ ಯೋಜನೆಯು ಮೂಲಕ ಕುಡಿಯುವ ನೀರು ಹರಿಸುವ ಯೋಜನೆಯು ಸೇರಿದೆಯೇ ; ಸೇರಿದ್ದಲ್ಲಿ, ಈ ಬಗ್ಗೆ ವಿವರ ನೀಡುವುದು ;

(ಇ) ಯೋಜನೆ ಕಾಮಗಾರಿಯಿಂದ ಎತ್ತಿನಹೊಳೆ ಯೋಜನೆಯ ಮೂಲ ನದಿ ಕೆಂಪುಹೊಳೆ ನೀರಿನ ಸಾಮರ್ಥ್ಯ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೆಂಪುಹೊಳೆಯಲ್ಲಿ ನೀರು ಶೇಖರಣಾ ಸಾಮರ್ಥ್ಯವೆಷ್ಟು ; (ವಿವರ ನೀಡುವುದು)

(ಈ) ಈ ಯೋಜನೆಗೆ ಮುಂಚೆ ನಿಗದಿಪಡಿಸಿದ ಮೊತ್ತವೆಷ್ಟು ; ಹಾಲಿ ಹೆಚ್ಚಿಗೆ ಮಾಡಿರುವ ಮೊತ್ತವೆಷ್ಟು ; (ವಿವರವಾದ ಮಾಹಿತಿ ಒದಗಿಸುವುದು)

(ಉ) ಇಲ್ಲಿಯವರೆಗೆ ಎಷ್ಟು ಮೊತ್ತವನ್ನು ಈ ಯೋಜನೆಗೆ ಖರ್ಚು ಮಾಡಲಾಗಿದೆ ; (ವಿವರ ಒದಗಿಸುವುದು) ಬಾಕಿ ಉಳಿದಿರುವ

ಕಾಮಗಾರಿಗಳು ಯಾವುವು ; ಅವುಗಳನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)

## ಸೈಬರ್ ಅಪರಾಧ ಕೃತ್ಯಗಳ ಬಗ್ಗೆ

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨೬ (೨೧೬೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದೇಶದ ೧೯ ಮೆಟ್ರೋ ನಗರಗಳ ಸೈಬರ್ ಅಪರಾಧ ಕೃತ್ಯಗಳಲ್ಲಿ ಅರ್ಧದಷ್ಟು ಸಿಲಿಕಾನ್ ಸಿಟಿ ಬೆಂಗಳೂರಿನಲ್ಲೇ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಇಲ್ಲಿಯವರೆಗೆ ಯಾವ ಯಾವ ರೀತಿಯ ಕಾನೂನು ಕ್ರಮಗಳನ್ನು ತೆಗೆದುಕೊಂಡಿದೆ ; (ವಿವರ ನೀಡುವುದು)

(ಆ) ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ಸೈಬರ್ ಅಪರಾಧ ಪ್ರಕರಣಗಳ ದೂರುಗಳನ್ನು ಸ್ವೀಕರಿಸಲಾಗಿದೆ ; ಇವುಗಳಲ್ಲಿ ಪತ್ತೆ ಹಚ್ಚಲಾಗಿರುವ ಪ್ರಕರಣಗಳೆಷ್ಟು ; (ವಿವರದೊಂದಿಗೆ ಮಾಹಿತಿ ಒದಗಿಸುವುದು)

(ಇ) ಈ ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲು ಅತ್ಯಾಧುನಿಕ ತಂತ್ರಜ್ಞಾನದಿಂದ ಕೂಡಿದ ವಿಶೇಷ ಟೀಂ ರಚನೆ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಇದರ ಕಾರ್ಯವೈಖರಿ ಏನು ? (ವಿವರ ನೀಡುವುದು)

## ಸಾರ್ವಜನಿಕ ಉದ್ಯಮ ವ್ಯಾಪ್ತಿಗೆ ಬರುವ ನಿಗಮ/ಕಂಪನಿಗಳ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೨೭ (೨೧೬೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ಯಮದ ವ್ಯಾಪ್ತಿಗೆ ಬರುವ ನಿಗಮ/ಮಂಡಳಿ/ಕಂಪನಿಗಳಾವುವು ; (ಮಾಹಿತಿ ನೀಡುವುದು)

(ಆ) ಲಾಭದಲ್ಲಿ ನಡೆಯುತ್ತಿರುವ ನಿಗಮ/ಕಂಪನಿಗಳು/ಮಂಡಳಿಗಳು ಯಾವುವು ; (ವಿವರವಾದ ಮಾಹಿತಿ ಒದಗಿಸುವುದು)

(ಇ) ನಷ್ಟದಲ್ಲಿರುವ ನಿಗಮ/ಕಂಪನಿ/ಮಂಡಳಿಗಳಿಗೆ ರಾಜ್ಯ ಸರ್ಕಾರ ಇಲ್ಲಿಯವರೆಗೆ ಒದಗಿಸಿರುವ ಆರ್ಥಿಕ ನೆರವು ಎಷ್ಟು ; (ವಿವರ ಒದಗಿಸುವುದು)

(ಈ) ನಷ್ಟದಲ್ಲಿರುವ ಇಂತಹ ನಿಗಮ/ಕಂಪನಿ/ಮಂಡಳಿಗಳನ್ನು ಖಾಯಂ ಆಗಿ ಮುಚ್ಚುವುದಾಗಲಿ, ಲಾಭದಲ್ಲಿರುವ ಕಂಪನಿಗಳ ಜೊತೆ ವಿಲೀನ ಮಾಡುವುದಾಗಲಿ ಅಥವಾ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಅಂತರ್ ಜಿಲ್ಲಾ ವರ್ಗಾವಣೆಯ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೨೮ (೨೧೬೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೊಲೀಸ್ ಇಲಾಖೆಯಲ್ಲಿ ಬರುವ ಎಲ್ಲಾ ವಿಭಾಗಗಳಲ್ಲಿನ ಮುಖ್ಯ ಪೇದೆಗಳು ಮತ್ತು ಅದಕ್ಕೂ ಮೇಲ್ಪಟ್ಟ ಸಿಬ್ಬಂದಿ/ಅಧಿಕಾರಿಗಳ ಅಂತರ್ ಜಿಲ್ಲಾ ವರ್ಗಾವಣೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಇನ್ನಿತರ ಇಲಾಖೆಗಳಲ್ಲಿ ಅಧಿಕಾರಿಗಳು/ಸಿಬ್ಬಂದಿಗಳಿಗೆ ನೀಡುವ ಸಾಮಾನ್ಯ ವರ್ಗಾವಣೆಯನ್ನು ಪೊಲೀಸ್ ಇಲಾಖೆಯ ಎಲ್ಲಾ ವಿಭಾಗಗಳ ಸಿಬ್ಬಂದಿ/ಅಧಿಕಾರಿಗಳಿಗೆ ನೀಡದಿರಲು ಕಾರಣಗಳೇನು ;

(ಇ) ಹಲವು ವರ್ಷಗಳಿಂದ ಒಂದೇ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಇಲಾಖೆಯ (ಸಿವಿಲ್, ಸಿ.ಎ.ಆರ್. ಡಿ.ಎ.ಆರ್.) ಸಿಬ್ಬಂದಿ/ಅಧಿಕಾರಿಗಳು ತಮ್ಮ ಸ್ವ-ಇಚ್ಛೆಯ ಜಿಲ್ಲೆಗಳಿಗೆ ವರ್ಗಾವಣೆ ಬಯಸುತ್ತಿದ್ದು, ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?

## ಕೊಡಗು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ ಕೈಗೊಂಡಿರುವ ಕಾಮಗಾರಿಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೦೨೯ (೨೧೬೧) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ ೦೨ ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಒದಗಿಸುವುದು ;

(ಆ) ಅವುಗಳಿಗೆ ಮಂಜೂರಾದ ಹಾಗೂ ಅನುದಾನ ಹಾಗೂ ಬಿಡುಗಡೆಯಾದ ಅನುದಾನ ಮತ್ತು ಬಿಡುಗಡೆಯಾಗಬೇಕಾಗಿರುವ ಅನುದಾನಗಳ ವಿವರಗಳನ್ನು ಒದಗಿಸುವುದು ;

(ಇ) ಪ್ರಸ್ತುತ ಆ ಕಾಮಗಾರಿಗಳು ಯಾವ ಹಂತದಲ್ಲಿವೆ; ಮುಕ್ತಾಯಗೊಂಡಿರುವ ಹಾಗೂ ಚಾಲ್ತಿಯಲ್ಲಿರುವ ಕಾಮಗಾರಿಗಳ ವಿವರ ಎಷ್ಟು ? (ಅನುದಾನ ಸಹಿತ ಕಾಮಗಾರಿಗಳನ್ನು ಕೈಗೊಂಡಿರುವ ಗುತ್ತಿಗೆದಾರರ ವಿವರಗಳನ್ನು ನೀಡುವುದು)

## ಬಾರ್ ಲೈಸೆನ್ಸ್‌ಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೦೩೦ (೨೧೬೨) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ರಸ್ತುತ ಅಬಕಾರಿ ಇಲಾಖೆಯಿಂದ ನೀಡಲಾಗುತ್ತಿರುವ ಬಾರ್ ಲೈಸೆನ್ಸ್‌ಗಳು ಯಾವುವು ; ಯಾವ ಯಾವ ವಿಧದ ಬಾರ್ ಲೈಸೆನ್ಸ್‌ಗಳು ಇಲಾಖೆಯಿಂದ ಕಾರ್ಯನಿರ್ವಹಿಸುತ್ತಿವೆ ; ಆ ಲೈಸೆನ್ಸ್ ಪಡೆಯಲು ಇರುವ ನಿಯಮಾವಳಿಗಳೇನು ;

(ಆ) ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿರುವ ಒಟ್ಟು ಬಾರ್‌ಗಳ ಸಂಖ್ಯೆ ಎಷ್ಟು ; ಯಾವ ವಿಧದ ಬಾರ್‌ಗಳು ಕಾರ್ಯನಿರ್ವಹಿಸುತ್ತಿವೆ ; (ಮಾಲೀಕರ ವಿವರ ನೀಡುವುದು)

(ಇ) ಅಕ್ರಮವಾಗಿ ಕಳ್ಳಬಟ್ಟಿ ಸಾರಾಯಿ ಸರಬರಾಜನ್ನು ತಡೆಯಲು ಹಾಗೂ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು ? (ವಿವರ ನೀಡುವುದು)

## ಪ್ರವಾಸೋದ್ಯಮ ಇಲಾಖೆಯ ವಿವಿಧ ಯೋಜನೆಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೩೧ (೨೧೬೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರವಾಸೋದ್ಯಮ ಇಲಾಖೆಯಡಿ ಇರುವ ಯೋಜನೆಗಳ ವಿವರಗಳನ್ನು ಹಾಗೂ ಅವುಗಳನ್ನು ಪಡೆಯಲು ಇರುವ ನಿಯಮಾವಳಿಗಳು ಏನು ; (ಪ್ರತಿಯೊಂದು ಯೋಜನೆವಾರು ವಿವರ ಒದಗಿಸುವುದು)

(ಆ) ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ ೦೩ ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿ ಯೋಜನೆಗಳಿಗೆ / ಕಾಮಗಾರಿಗಳಿಗೆ ಮಂಜೂರಾದ ಅನುದಾನ. ಬಿಡುಗಡೆಯಾದ ಅನುದಾನ ಹಾಗೂ ಬಾಕಿ ಇರುವ ಅನುದಾನ ಎಷ್ಟು ; (ಕಾಮಗಾರಿವಾರು ವಿವರ ನೀಡುವುದು)

(ಇ) ಬಾಕಿ ಇರುವ ಅನುದಾನವನ್ನು ಯಾವ ಕಾಲಮಿತಿಯ ಒಳಗೆ ಒದಗಿಸಲಾಗುವುದು ? (ವಿವರ ನೀಡುವುದು)

## ಹೊಸ ಯೋಜನೆಗಳು, ಅಭಿವೃದ್ಧಿ ಹಾಗೂ ಆಡಳಿತ ವ್ಯವಸ್ಥೆ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೩೨ (೨೩೦೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ಸಹಕಾರಿ ಸಕ್ಕರೆ ಕಾರ್ಖಾನೆ/ಹಾಲು ಉತ್ಪಾದಕ ಸಂಘ ಸ್ಥಾಪನೆ ಕುರಿತು ಸರ್ಕಾರದ ಯೋಜನೆಗಳಿವೆಯೇ ; ಇದ್ದಲ್ಲಿ, ಮಾಹಿತಿ ಒದಗಿಸುವುದು ;

(ಆ) ಯುವಕರನ್ನು ಸಹಕಾರಿ ಕ್ಷೇತ್ರಕ್ಕೆ ಆಕರ್ಷಿಸಲು ಕೈಗೊಂಡ ವಿಶೇಷ ಕಾರ್ಯಕ್ರಮಗಳು ಯಾವುವು ;

(ಇ) ಸಹಕಾರಿ ಕ್ಷೇತ್ರದ ಡಿಜಿಟಲೀಕರಣಕ್ಕೆ ಅನುದಾನ ಮೀಸಲಾತಿ ಎಷ್ಟು ;

(ಈ) ಸಹಕಾರಿ ಸಂಘಗಳ ಚುನಾವಣೆಗಳನ್ನು ಸಮಯಕ್ಕೆ ನಡೆಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ಆಡಳಿತಾಧಿಕಾರಿಗಳ ನೇಮಕಾತಿಯಲ್ಲಿ ಪಾರದರ್ಶಕತೆ ಖಚಿತಪಡಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡ ಕಾಮಗಾರಿ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೩೩ (೨೩೦೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಒಂದು ವರ್ಷದಿಂದ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡ ಕಾಮಗಾರಿ ಯಾವುವು ; ಮಾಹಿತಿ ನೀಡುವುದು ;

(ಆ) ಸದರಿ ಹೊಸ ಕಾಮಗಾರಿಗಳಿಗಾಗಿ ಪ್ರಸ್ತಾವನೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಯಾವ ಕಾಮಗಾರಿಗಳಿಗೆ ಬಂದಿವೆ ? (ಮಾಹಿತಿ ನೀಡುವುದು)

## ಗುತ್ತಿಗೆದಾರರ ಬಾಕಿ ಬಿಲ್ ಪಾವತಿಯ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೩೪ (೨೩೦೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಲಸಂಪನ್ಮೂಲ, ಲೋಕೋಪಯೋಗಿ, ಸಣ್ಣ ನೀರಾವರಿ. ನಗರಾಭಿವೃದ್ಧಿ ಮತ್ತು ಇತರೆ ಇಲಾಖೆಗಳಲ್ಲಿ ಟೆಂಡರ್ ಪಡೆದು ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಸರ್ಕಾರ ಪಾವತಿಸಲು ಬಾಕಿ ಇರುವ ಬಿಲ್‌ಗಳ ಮೊತ್ತ ಎಷ್ಟು ; (ಇಲಾಖಾವಾರು ಸಂಪೂರ್ಣ ವಿವರ ನೀಡುವುದು)

(ಆ) ಕಳೆದ ೨ ವರ್ಷಗಳಿಂದ ಪಾವತಿಸಿರುವ ಬಿಲ್‌ಗಳ ಮೊತ್ತ ಎಷ್ಟು ; ರೂ.೫.೦೦ ಕೋಟಿಗಿಂತ ಹೆಚ್ಚು ಬಿಲ್ ಪಾವತಿಸಿರುವ ಗುತ್ತಿಗೆದಾರರ ಸಂಖ್ಯೆಯೆಷ್ಟು ; ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿ ಸಹಿತ ಇಲಾಖಾವಾರು ವಿವರ ಒದಗಿಸುವುದು ;

(ಇ) ಬಾಕಿ ಇರುವ ಬಿಲ್‌ಗಳ ಮೊತ್ತ ಪಾವತಿಸದ ಕಾರಣ ಗುತ್ತಿಗೆದಾರರು ಸರ್ಕಾರಕ್ಕೆ ಅಂತಿಮ ಗಡುವು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಗುತ್ತಿಗೆದಾರರಿಗೆ ಬಾಕಿ ಇರುವ ಬಿಲ್ ಪಾವತಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇದಕ್ಕಾಗಿ ಅಗತ್ಯ ಅನುದಾನವನ್ನು ಹೊಂದಿಸಲಾಗಿದೆಯೇ ?

# ವಿವಿಧ ಇಲಾಖೆಗಳಿಗೆ ಮೀಸಲಿಟ್ಟ, ಬಿಡುಗಡೆಗೊಳಿಸಿದ ಮತ್ತು ಖರ್ಚಾದ ಅನುದಾನದ ವಿವರ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೩೫ (೨೩೦೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಆರ್ಥಿಕ ಇಲಾಖೆಯಿಂದ ಮೇ ೨೦೨೩ ರಿಂದ ಫೆಬ್ರವರಿ ೨೦೨೬ರ ಅಂತ್ಯದವರೆಗೆ ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಸಣ್ಣ ನೀರಾವರಿ, ಮುಜರಾಯಿ, ನಗರಾಭಿವೃದ್ಧಿ, ಜಲಸಂಪನ್ಮೂಲ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ, ವೈದ್ಯಕೀಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವಸತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮತ್ತು ಯೋಜನೆ, ಸಾಂಖ್ಯಿಕ ಇಲಾಖೆಗಳಲ್ಲಿ ಹಾಗೂ ಇತರೆ ಇಲಾಖೆಗಳಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಆರ್ಥಿಕ ಇಲಾಖೆ ವ್ಯಾಪ್ತಿಯ ಈ ಇಲಾಖೆಗಳಲ್ಲಿ ಹಾಗೂ ಇತರೆ ಇಲಾಖೆಗಳಲ್ಲಿ ಮೇ ೨೦೨೩ ರಿಂದ ಫೆಬ್ರವರಿ ೨೦೨೬ರ ಅಂತ್ಯದವರೆಗೆ ಬಾಕಿ ಇರುವ ಬಿಲ್ಲುಗಳೆಷ್ಟು ; (ಇಲಾಖಾವಾರು, ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು) ಈ ಬಿಲ್ಲುಗಳ ಪಾವತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಇಲಾಖೆಗಳಿಗೆ ಮಾರ್ಚ್ ೨೦೨೩ರ ಆಯವ್ಯಯದಲ್ಲಿ ೨೦೨೩-೨೪, ೨೦೨೪-೨೫ ಮತ್ತು ೨೦೨೫-೨೬ರ ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನವೆಷ್ಟು ;

ಬಿಡುಗಡೆಗೊಳಿಸಿರುವ ಅನುದಾನವೆಷ್ಟು ; ಖರ್ಚಾದ ಅನುದಾನವೆಷ್ಟು ? (ವರ್ಷವಾರು, ಇಲಾಖಾವಾರು ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸುತ್ತಿರುವ ವ್ಯಾಟ್/ತೆರಿಗೆ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೩೬ (೨೩೦೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಪ್ರಸ್ತುತ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಶೇಕಡವಾರು ಎಷ್ಟು ತೆರಿಗೆ/ವ್ಯಾಟ್‌ನ್ನು ವಿಧಿಸುತ್ತಿದೆ ;

(ಆ) ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ/ವ್ಯಾಟ್‌ನ್ನು ಯಾವಾಗ ಹೆಚ್ಚಿಸಲಾಗಿದೆ ; ಶೇಕಡವಾರು ಎಷ್ಟು ಏರಿಕೆ ಮಾಡಲಾಗಿದೆ ; ಏರಿಕೆ ಮಾಡಲು ಕಾರಣಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪ್ರಸ್ತುತ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಶೇಕಡವಾರು ಎಷ್ಟು ತೆರಿಗೆ/ವ್ಯಾಟ್‌ನ್ನು ವಿಧಿಸುತ್ತಿವೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ೨೦೧೯–೨೦, ೨೦೨೦–೨೧, ೨೦೨೧–೨೨, ೨೦೨೨–೨೩ ನೇ ಸಾಲಿನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ/ವ್ಯಾಟ್‌ನ್ನು ಹೆಚ್ಚಿಸಲಾಗಿದೆಯೇ ; ಹೆಚ್ಚಿಸಲಾಗಿದ್ದರೆ, ಶೇಕಡವಾರು ಎಷ್ಟು ಏರಿಕೆ ಮಾಡಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ನಿಗಮ ಮಂಡಳಿಗಳಿಗೆ ಒದಗಿಸಲಾದ ಅನುದಾನದ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೩೭ (೨೩೦೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೇ ೨೦೨೩ ರಿಂದ ಸರ್ಕಾರದ ಅಧೀನದ ನಿಗಮ ಮತ್ತು ಮಂಡಳಿಗಳಿಗೆ ನೀಡಿರುವ ಗುರಿ ಎಷ್ಟು ; ಬಿಡುಗಡೆಗೊಳಿಸಿದ ಅನುದಾನವೆಷ್ಟು ; (ನಿಗಮವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ನಿಗಮ ಮತ್ತು ಮಂಡಳಿಗಳ ಮುಖ್ಯಸ್ಥರ/ವ್ಯವಸ್ಥಾಪಕ ನಿರ್ದೇಶಕರ ಖಾತೆಗಳಲ್ಲಿ ಪ್ರಸಕ್ತ ಲಭ್ಯವಿರುವ ಮೊತ್ತವೆಷ್ಟು ; (ನಿಗಮ ಮಂಡಳಿವಾರು ಪ್ರತ್ಯೇಕ ಮಾಹಿತಿ ನೀಡುವುದು) ಈ ನಿಗಮ ಮಂಡಳಿಗಳ ಅನುದಾನವನ್ನು ಯಾವ ಯಾವ ಉದ್ದೇಶಗಳಿಗಾಗಿ ಉಪಯೋಗಿಸಲಾಗಿದೆ ; ಪ್ರಸ್ತುತ ಲಭ್ಯವಿರುವ ಮೊತ್ತವನ್ನು ಯಾವ ಯಾವ ಬ್ಯಾಂಕ್‌ಗಳಲ್ಲಿ ಠೇವಣಿ ಇಡಲಾಗಿದೆ ; ಠೇವಣಿ ಇಡುವಾಗ ಸರ್ಕಾರದ ಆರ್ಥಿಕ ಇಲಾಖೆಯು ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಲಾಗಿದೆಯೇ ; ಅನುಸರಿಸಿದ್ದರೆ, ಮಾರ್ಗಸೂಚಿಗಳೇನು ; (ವಿವರ ನೀಡುವುದು)

(ಇ) ಆರ್ಥಿಕ ಇಲಾಖೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ಬೇರೆ ಬ್ಯಾಂಕ್ ಖಾತೆಗಳಲ್ಲಿ ಠೇವಣೀಕರಿಸಿದ್ದಲ್ಲಿ, ಕಾರಣೀಕರ್ತರಾದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಉನ್ನತ ಮಟ್ಟದ ತನಿಖೆಗೆ ಸರ್ಕಾರ ಆದೇಶ ಹೊರಡಿಸುವುದೇ ?

## ಸೈಬರ್ ಕ್ರೈಂ ಠಾಣೆಗಳಲ್ಲಿ ವರದಿಯಾಗಿರುವ ದೂರುಗಳ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೩೮ (೨೩೧೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೨೩-೨೪, ೨೦೨೪-೨೫, ೨೦೨೫-೨೬ನೇ ಸಾಲಿನಲ್ಲಿ ಫೆಬ್ರವರಿ ೨೦೨೬ರ ಅಂತ್ಯದವರೆಗೆ ವರದಿಯಾದ ಸೈಬರ್ ಅಪರಾಧ ಪ್ರಕರಣಗಳೆಷ್ಟು ; (ವರ್ಷವಾರು ವರ್ಗೀಕರಣದೊಂದಿಗೆ ವಿವರ ನೀಡುವುದು) ಈ ಪೈಕಿ ೫ ಲಕ್ಷ ರೂಪಾಯಿಗಿಂತ ಹೆಚ್ಚಿನ ವಂಚನೆಗೊಳಗಾದ ಪ್ರಕರಣಗಳು ಎಷು ;

(ಆ) ಸೈಬರ್ ಅಪರಾಧ ಪ್ರಕರಣಗಳಲ್ಲಿ ದಾಖಲಾಗಿರುವ ಎಫ್ಐಆರ್ ವರ್ಷವಾರು ವಿವರ ಮತ್ತು ಫೆಬ್ರವರಿ-೨೦೨೬ ರವರೆಗೆ ಮಾಡಿದ ಬಂಧನಗಳ ವಿವರ ನೀಡುವುದು ; ಸೈಬರ್ ಕ್ರೈಂ ವಿಭಾಗದಲ್ಲಿ ಸಿಬ್ಬಂದಿ ಕೊರತೆ ಇದೆ ಎಂಬ ದೂರು ಇದ್ದು, ಸೈಬರ್ ಅಪರಾಧವನ್ನು ತಡೆಗಟ್ಟಲು ಮತ್ತು ಪರಿಹರಿಸಲು ಸೈಬರ್ ಕ್ರೈಂ ವಿಭಾಗವನ್ನು ಬಲಪಡಿಸಲು ಸರ್ಕಾರ ಯೋಚಿಸುತ್ತಿದೆಯೇ ;

(ಇ) ಆರೋಪಿಗಳನ್ನು ಬಂಧಿಸಲು ಪೊಲೀಸರು ಇತರ ನಗರಗಳಿಗೆ ವಿಮಾನದಲ್ಲಿ ಪ್ರಯಾಣಿಸಲು ಅನುಮತಿ ನೀಡಲು ಸರ್ಕಾರ ವಿಳಂಬ ಮಾಡುತ್ತಿರುವುದು ನಿಜವೇ ; ಸೈಬರ್ ಅಪರಾಧದಲ್ಲಿ ಅಪರಾಧಿಗಳು ಅತ್ಯಾಧುನಿಕ ವಿಧಾನಗಳನ್ನು ಬಳಸುತ್ತಿದ್ದಾರೆ, ಇದನ್ನು ನಿಭಾಯಿಸಲು ಸೈಬರ್ ಅಪರಾಧ ಇಲಾಖೆ ಯಾವ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ತೆರಿಗೆ ಸಂಗ್ರಹ ಮತ್ತು ರಾಜ್ಯದ ಮೇಲಿರುವ ಸಾಲದ ಪ್ರಮಾಣ ಕುರಿತು

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೦೫೯ (೨೩೧೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ವಿವಿಧ ಮೂಲಗಳಿಂದ ಎಷ್ಟು ತೆರಿಗೆ ಸಂಗ್ರಹವಾಗುತ್ತಿದೆ ; ೨೦೨೫-೨೬ ರಲ್ಲಿ (ಫೆಬ್ರವರಿ ಅಂತ್ಯದವರೆಗೆ) ಗುರಿ

ಹೊಂದಲಾಗಿದ್ದ/ಸಂಗ್ರಹವಾಗಿರುವ ಮತ್ತು ಕೊರತೆಯಾಗಿರುವ ತೆರಿಗೆ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಗ್ಯಾರಂಟಿ ಯೋಜನೆಗಳಿಗಾಗಿ ಪ್ರತೀ ತಿಂಗಳು ಅಗತ್ಯವಿರುವ ಹಣ ಎಷ್ಟು; ಗ್ಯಾರಂಟಿ ಯೋಜನೆಗಳು ಅಸ್ತಿತ್ವಕ್ಕೆ ಬಂದಾಗಿನಿಂದ ಸದರಿ ಯೋಜನೆಗಳಿಗೆ (ಫೆಬ್ರವರಿ ೨೦೨೬ರ ಅಂತ್ಯದವರೆಗೆ) ವೆಚ್ಚವಾಗಿರುವ ಹಣ ಎಷ್ಟು ; (ಗ್ಯಾರಂಟಿ ಯೋಜನೆವಾರು ಸಮಗ್ರ ಮಾಹಿತಿಯನ್ನು ಮಾಹೆಯಾನ ಒದಗಿಸುವುದು)

(ಇ) ಗ್ಯಾರಂಟಿ ಯೋಜನೆಗಳನ್ನು ಹೊರತುಪಡಿಸಿ ಇಲಾಖೆಗಳ ಕಾರ್ಯನಿರ್ವಹಣೆಗೆ ಮತ್ತು ನೌಕರರ ವೇತನ/ಪಿಂಚಣಿ ಸೇರಿದಂತೆ ಇನ್ನಿತರೆ ಸರ್ಕಾರಿ ವೆಚ್ಚಗಳಿಗೆ ಪ್ರತೀ ತಿಂಗಳು ಅಗತ್ಯವಿರುವ ಹಣ ಎಷ್ಟು ; ಕಳೆದ ೨ ವರ್ಷದಿಂದ ಈ ಉದ್ದೇಶಗಳಿಗೆ ವೆಚ್ಚವಾಗಿರುವ ಹಣ ಎಷ್ಟು ; (ಇಲಾಖೆವಾರು ವಿವರ ನೀಡುವುದು)

(ಈ) ರಾಜ್ಯ ಸರ್ಕಾರದ ಮೇಲಿರುವ ಒಟ್ಟು ಸಾಲ ಎಷ್ಟು ; ದಿನಾಂಕ:೦೧.೦೬.೨೦೨೩ ರಿಂದ ೨೮.೦೨.೨೦೨೬ ರವರೆಗೆ ರಾಜ್ಯ ಸರ್ಕಾರ ಯಾವ ಯಾವ ಸಂಸ್ಥೆಯಿಂದ ಎಷ್ಟು ಬಾಹ್ಯ ಮತ್ತು ಆಂತರಿಕ ಸಾಲ ಪಡೆದಿದೆ ; ಸಾಲಕ್ಕೆ ಪ್ರತೀ ತಿಂಗಳು ಪಾವತಿಸುತ್ತಿರುವ ಅಸಲು ಮತ್ತು ಬಡ್ಡಿ ಎಷ್ಟು ? (ಸಮಗ್ರ ವಿವರ ನೀಡುವುದು)

## ರಸ್ತೆ ಅಗಲೀಕರಣ ಕಾರ್ಯಗಳಿಗಾಗಿ ಭೂಮಿ ಹಸ್ತಾಂತರಿಸಿದ ಭೂ ಮಾಲೀಕರಿಗೆ ಪರಿಹಾರ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪೦ (೨೩೧೨) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾರ್ಯಗಳಿಗಾಗಿ ಭೂಮಿ ಅಥವಾ ಜಮೀನು ಹಸ್ತಾಂತರಿಸಿದ ಭೂ ಮಾಲೀಕರಿಗೆ ಇದುವರೆಗೆ ಒಟ್ಟು ಎಷ್ಟು ಮೊತ್ತವನ್ನು ನಗದು ಪರಿಹಾರವಾಗಿ ಪಾವತಿಸಲಾಗಿದೆ ; (ವರ್ಷವಾರು ವಿವರ ಸಮೇತ), ಪರಿಹಾರಕ್ಕಾಗಿ ಇನ್ನೂ ಕಾಯುತ್ತಿರುವ ಭೂಮಾಲೀಕರ ಒಟ್ಟು ಸಂಖ್ಯೆ ಎಷ್ಟು ; ಅವರಲ್ಲಿ ನಗದು ಪರಿಹಾರ ಬಾಕಿ ಇರುವವರು, ಟಿಡಿಆರ್/ಡಿಆರ್‌ಸಿ ಮಂಜೂರು ಬಾಕಿ ಇರುವವರ ವಿವರ ಒದಗಿಸುವುದು ; ಪರ್ಯಾಯ ಜಾಗ ಮಂಜೂರು ಬಾಕಿ ಇರುವವರು ಮತ್ತು ಬಾಕಿ ಪರಿಹಾರ ಪಾವತಿಗಾಗಿ ಸಂಬಂಧಿತ ಪ್ರಾಧಿಕಾರಕ್ಕೆ ಇರುವ ಒಟ್ಟು ಆರ್ಥಿಕ ಬಾಧ್ಯತೆ ಎಷ್ಟು ಎಂಬುದರ ವಿವರ ನೀಡುವುದು ;

(ಆ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾರ್ಯಗಳಿಗೆ ಸಂಬಂಧಿಸಿ ಜಾರಿಗೊಳಿಸಲಾದ/ವರ್ಗಾಯಿಸಬಹುದಾದ ಪ್ರಮಾಣ ಪತ್ರಗಳು/ಟಿಡಿಆರ್‌ಗಳ ಪೈಕಿ ಮರುಮಾನ್ಯತೆ (revalidation/ renewal) ಒಂದು ವರ್ಷಕ್ಕಿಂತ ಹೆಚ್ಚು ಕಾಲ, ಎರಡು ವರ್ಷಕ್ಕಿಂತ ಹೆಚ್ಚು ಕಾಲ ಹಾಗೂ ಮೂರು ವರ್ಷಕ್ಕಿಂತ ಹೆಚ್ಚು ಕಾಲದಿಂದ ಬಾಕಿ ಇರುವ ಪ್ರಮಾಣಪತ್ರಗಳ ಸಂಖ್ಯೆ ಎಷ್ಟು ; ಮಾಹಿತಿ ನೀಡುವುದು ;

(ಇ) ಕಳೆದ ಐದು ವರ್ಷಗಳಲ್ಲಿ ರಸ್ತೆ ಅಗಲೀಕರಣ/ಭೂಸ್ವಾಧೀನಕ್ಕೆ ಬದಲಾಗಿ ಟಿಡಿಆರ್ ಸ್ವೀಕರಿಸಲು ಸ್ವಯಂಪ್ರೇರಿತವಾಗಿ ಮುಂದೆ ಬಂದ ಭೂಮಾಲೀಕರ ಸಂಖ್ಯೆ ಎಷ್ಟು ; ಜಾರಿಗೊಳಿಸಲಾದ ಒಟ್ಟು ಟಿಡಿಆರ್ ಪ್ರಮಾಣಪತ್ರಗಳಲ್ಲಿ ಎಷ್ಟು ಪ್ರಮಾಣವು ಬಳಕೆಯಾಗಿದೆ ; ಎಷ್ಟು ಪ್ರಮಾಣವು ಇನ್ನೂ ಬಳಕೆಯಾಗದೆ ಉಳಿದಿದೆ; ವಿವರ ನೀಡುವುದು ;

(ಈ) ನಗರಾಭಿವೃದ್ಧಿ ಇಲಾಖೆಯ "ಪ್ರೀಮಿಯಂ ನೆಲ ವಿಸ್ತೀರ್ಣ ಅನುಪಾತ ನೀತಿ" (ಎಫ್‌ಎಆರ್) ಯನ್ನು ಕರ್ನಾಟಕ ಪಟ್ಟಣ

ಮತ್ತು ಗ್ರಾಮಾಂತರ ಯೋಜನೆ–೨೦೧೫ ರನ್ವಯ ಪರಿಷ್ಕರಿಸಲಾಗಿದ್ದು, ಇದರ ಪ್ರಕಾರ ನಿವೇಶನ ಮಾರ್ಗಸೂಚಿ ದರದ ಶೇ.೨೮ಕ್ಕೆ ಶುಲ್ಕ ಪಾವತಿಸಿಕೊಂಡು ಶೇ.೬೦ ರವರೆಗೂ ಪ್ರೀಮಿಯಂ ಎಫ್‌ಎಆರ್ ನೀಡಲು ಅವಕಾಶ ಕೊಡಲಾಗಿದೆ ; ಇದರಿಂದ ರಾಜಧಾನಿಯಲ್ಲಿ ಹೈರೈಸಿಂಗ್ ಬಿಲ್ಡಿಂಗ್ ನಿರ್ಮಿಸಲಾಗುತ್ತಿದೆ ; ಈ ಬಗ್ಗೆ ಸರ್ಕಾರ ಯಾವ ರೀತಿ ಅಧ್ಯಯನ ನಡೆಸಿ "ಪ್ರೀಮಿಯಂ ಎಫ್‌ಎಆರ್ ನೀತಿ" ಹೊರಡಿಸಿದೆ ; ಮಾಹಿತಿ ನೀಡುವುದು ?

## PLD ಬ್ಯಾಂಕ್ ಮತ್ತು DCC ಬ್ಯಾಂಕ್ ಸಾಲಗಳ ಬಗ್ಗೆ

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪೧ (೨೧೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕ್, ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಿಂದ ರೈತರು ಪಡೆದ ಸಾಲದ ಪ್ರಮಾಣವೆಷ್ಟು ; ಅದರಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲವೆಷ್ಟು ; ತಾಲ್ಲೂಕುವಾರು ಮಾಹಿತಿ ನೀಡುವುದು ;

(ಆ) ಸಹಕಾರಿ ಬ್ಯಾಂಕ್‌ನಿಂದ ಪಡೆದ ಸಾಲಕ್ಕೆ ಎಷ್ಟು ಲಕ್ಷದವರೆಗೆ ಶೂನ್ಯ ಬಡ್ಡಿದರ ಇದೆ ಮತ್ತು ನಂತರದ ಮೊತ್ತಕ್ಕೆ ವಿಧಿಸಲಾಗುವ ಬಡ್ಡಿ ಎಷ್ಟು ;

(ಇ) ಪ್ರಸಕ್ತ ಸಾಲಿನಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾದ ಅನುದಾನವೆಷ್ಟು ; ಖರ್ಚಾದ ಮೊತ್ತವೆಷ್ಟು ; ತಾಲ್ಲೂಕುವಾರು ಮಾಹಿತಿ ನೀಡುವುದು ;

(ಈ) ಯಶಸ್ವಿನಿ ಯೋಜನೆಯು ಮರುಜಾರಿಯಾದಾಗಿನಿಂದ ಇಲ್ಲಿಯವರೆಗೆ ನೋಂದಣಿಯಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ತಾಲ್ಲೂಕುವಾರು ಮಾಹಿತಿ ನೀಡುವುದು ?

## ಸಹಕಾರ ಇಲಾಖೆಗಳಲ್ಲಿನ ಯೋಜನೆಗಳ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪೨ (೨೧೫೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಹಕಾರ ಇಲಾಖೆ ವ್ಯಾಪ್ತಿಗೆ ಬರುವ ಯೋಜನೆಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ೨ ವರ್ಷಗಳಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಕಳೆದ ೨ ವರ್ಷಗಳಿಂದ ಭೂ ಉಪಯೋಗ ಬದಲಾವಣೆ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪೩ (೨೧೫೭) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಿವಿಧ ಉದ್ದೇಶಗಳಿಗಾಗಿ ಭೂ ಉಪಯೋಗ ಬದಲಾವಣೆಗೆ ಬಂದಿರುವ ಪ್ರಸ್ತಾವನೆಗಳೆಷ್ಟು ; (ವಿವರ ನೀಡುವುದು)

(ಆ) ಸ್ವೀಕೃತಗೊಂಡ ಪ್ರಸ್ತಾವನೆಗಳ ಪೈಕಿ ಎಷ್ಟು ಪ್ರಸ್ತಾವನೆಗಳಿಗೆ ಭೂ ಉಪಯೋಗ ಬದಲಾವಣೆಗೆ ಅನುಮೋದನೆ ನೀಡಲಾಗಿದೆ ; (ಗ್ರಾಮವಾರು, ಸರ್ವೆ ನಂ.ವಾರು, ಹೆಸರುವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ತಿರಸ್ಕೃತಗೊಂಡಿರುವ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳೆಷ್ಟು ? (ಕಾರಣಗಳೊಂದಿಗೆ ವಿವರ ನೀಡುವುದು)

## ವಿನ್ಯಾಸ ನಕ್ಷೆ ಅನುಮೋದನೆ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪೪ (೨೧೫೮) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೆ ಸಲ್ಲಿಸಿರುವ ಪ್ರಸ್ತಾವನೆಗಳೆಷ್ಟು ; (ವಿವರ ನೀಡುವುದು)

(ಆ) ಸ್ವೀಕೃತಗೊಂಡ ಪ್ರಸ್ತಾವನೆಗಳ ಪೈಕಿ ಎಷ್ಟು ಪ್ರಸ್ತಾವನೆಗಳಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲಾಗಿದೆ ; (ಗ್ರಾಮವಾರು, ಸರ್ವೆ ನಂ.ವಾರು, ಹೆಸರುವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ತಿರಸ್ಕೃತಗೊಂಡಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ಪ್ರಸ್ತಾವನೆಗಳೆಷ್ಟು ? (ಕಾರಣಗಳೊಂದಿಗೆ ವಿವರ ನೀಡುವುದು)

## ಕಟ್ಟಡಗಳಿಗೆ ಅನುಮೋದನೆ ನೀಡುವ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪೫ (೨೧೫೯) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಕಳೆದ ೨ ವರ್ಷಗಳಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಎಷ್ಟು ವಸತಿ ಸಮುಚ್ಚಯ ಕಟ್ಟಡಗಳಿಗೆ ಅನುಮೋದನೆ ನೀಡಲಾಗಿದೆ ? (ಅನುಮೋದನೆ ನೀಡಿರುವ ಪ್ರತಿ ವಸತಿ ಸಮುಚ್ಚಯ ಕಟ್ಟಡಗಳು ಹೊಂದಿರುವ ಫ್ಲೋರ್‌ಗಳ ಸಂಖ್ಯೆ ಮತ್ತು ಯುನಿಟ್ಸ್‌ಗಳ ವಿವರ ನೀಡುವುದು)

# ರಾಜ್ಯದಲ್ಲಿ ಸಂಘ ಸಂಸ್ಥೆಗಳ ಪಥಸಂಚಲನ, ಸಾರ್ವಜನಿಕ ಕಾರ್ಯಕ್ರಮಗಳು ಮತ್ತು ಕಾನೂನು ಪಾಲನೆ ಕುರಿತು

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪೬ (೨೨೧೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫ನೇ ಸಾಲಿನಲ್ಲಿ ರಾಜ್ಯದಾದ್ಯಂತ ರಾಷ್ಟ್ರೀಯ ಸ್ವಯಂಸೇವಕ ಸಂಘದ ವತಿಯಿಂದ ನಡೆದ ಪಥಸಂಚಲನ ಮತ್ತು ಸಭೆಗಳಿಗೆ ಪೊಲೀಸ್ ಇಲಾಖೆಯಿಂದ ಅಧಿಕೃತವಾಗಿ ಅನುಮತಿ ಪಡೆಯಲಾಗಿದೆಯೇ ; (ಠಾಣಾವಾರು ವಿವರ ನೀಡುವುದು)

(ಆ) ಯಾವುದೇ ಪೂರ್ವಾನುಮತಿ ಅಥವಾ ಮಾಹಿತಿ ನೀಡದೆ ಬಹಿರಂಗವಾಗಿ ಪಥಸಂಚಲನ ಮತ್ತು ಸಮಾಜೋತ್ಸವ ನಡೆಸಿದ ಪ್ರಕರಣಗಳೆಷ್ಟು: ಅಂತಹವರ ಮೇಲೆ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ನೋಂದಾಯಿತವಲ್ಲದ ಸಂಘಟನೆಗಳು ಸಾರ್ವಜನಿಕವಾಗಿ ಹಣ ಸಂಗ್ರಹಣೆ ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ ; ಈ ಸಂಘಟನೆಗಳು ಪ್ರಚೋದನಾತ್ಮಕ ಭಾಷಣಗಳಿಂದ ರಾಜ್ಯದ ಶಾಂತಿ ಸುವ್ಯವಸ್ಥೆಗೆ ಧಕ್ಕೆ ಉಂಟಾಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಈ ಸಂಘಟನೆಗಳ ಚಟುವಟಿಕೆಗಳ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ (RTI) ಮಾಹಿತಿ ನೀಡಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

# ಗೃಹ ರಕ್ಷಕರಿಗೆ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಸಮಾನ ವೇತನ ಭತ್ಯೆ ಹಾಗೂ ಸೇವಾ ಭದ್ರತೆ ನೀಡುವ ಬಗ್ಗೆ

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪೭ (೨೨೧೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಗೃಹರಕ್ಷಕ ದಳವು ಸ್ವಯಂಸೇವಕ ಪಡೆಯಾಗಿರುವುದರಿಂದ ಈಗಾಗಲೇ ಬೇರೆಡೆ ಉದ್ಯೋಗದಲ್ಲಿರುವವರು (ಸರ್ಕಾರಿ/ಖಾಸಗಿ) ಗೃಹರಕ್ಷಕರಾಗಿ ಸೇವೆ ಸಲ್ಲಿಸಲು ಇರುವ ಮಾನದಂಡಗಳೇನು ; ಇಂತಹ ಉದ್ಯೋಗಿಗಳಿಗೆ ವಿಶೇಷ ರಜೆ ಅಥವಾ ಪ್ರೋತ್ಸಾಹಧನ ನೀಡುವ ಬಗ್ಗೆ ಸರ್ಕಾರ ನೀತಿ ರೂಪಿಸಿದೆಯೇ ;

(ಆ) ಸಂಚಾರ ನಿಯಂತ್ರಣ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಸಿಬ್ಬಂದಿಯಷ್ಟೇ ಶ್ರಮಿಸುತ್ತಿರುವ ಗೃಹರಕ್ಷಕರಿಗೆ ನೀಡಲಾಗುತ್ತಿರುವ ಪ್ರಸ್ತುತ ದಿನಭತ್ಯೆ (Honorarium) ಎಷ್ಟು; ಸುಪ್ರೀಂಕೋರ್ಟ್‌ನ ನಿರ್ದೇಶನದಂತೆ (Grah Rakshak vs State of NCR Delhi) ಪೊಲೀಸರ ಕನಿಷ್ಠ ವೇತನಕ್ಕೆ ಸಮನಾದ ಭತ್ಯೆಯನ್ನು ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ ; ಇಲ್ಲದಿದ್ದಲ್ಲಿ, ಈ ತಾರತಮ್ಯಕ್ಕೆ ಕಾರಣಗಳೇನು ;

(ಇ) ಕರ್ತವ್ಯ ನಿರತ ಗೃಹರಕ್ಷಕರಿಗೆ ಪೊಲೀಸ್ ಆರೋಗ್ಯ ಭಾಗ್ಯದ ಮಾದರಿಯಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆಯೇ ; ಕರ್ತವ್ಯದ ವೇಳೆ ಸಂಭವಿಸುವ ಅಪಘಾತ ಅಥವಾ ಸಾವು–ನೋವುಗಳಿಗೆ ನೀಡುವ ಪರಿಹಾರ ಮೊತ್ತವು ಪೊಲೀಸ್ ಸಿಬ್ಬಂದಿಗೆ ನೀಡುವ ಪರಿಹಾರಕ್ಕೆ ಸಮನಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹವಾಮಾನ ವೈಪರೀತ್ಯಗಳ ನಡುವೆಯೂ ರಸ್ತೆಯಲ್ಲಿ ನಿಂತು ಕೆಲಸ ಮಾಡುವ ಗೃಹರಕ್ಷಕರಿಗೆ ಸಮವಸ್ತ್ರ ಭತ್ಯೆ, ಮಳೆಕೋಟು

(Raincoats) ಮತ್ತು ಸುಸಜ್ಜಿತ ವಿಶ್ರಾಂತಿ ಕೊಠಡಿಗಳಂತಹ ಕನಿಷ್ಠ ಮಾನವೀಯ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಮೀಸಲಿಟ್ಟಿರುವ ಅನುದಾನವೆಷ್ಟು ;

(ಊ) ಗೃಹರಕ್ಷಕರನ್ನು ಕೇವಲ 'ಅಗತ್ಯವಿದ್ದಾಗ ಬಳಸುವ' (On-call) ಸಿಬ್ಬಂದಿಯಾಗಿ ಪರಿಗಣಿಸದೆ ವರ್ಷದ ೩೬೫ ದಿನಗಳೂ ನಿರಂತರ ಉದ್ಯೋಗ ಮತ್ತು ಸೇವಾ ಭದ್ರತೆ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ ?

## ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳ್ಳತನ ಮತ್ತು ದರೋಡೆ ಪ್ರಕರಣಗಳ ಬಗ್ಗೆ

**ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೪೮ (೨೨೧೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳ್ಳತನ ಮತ್ತು ದರೋಡೆ ಪ್ರಕರಣಗಳ ಸಂಖ್ಯೆ ಎಷ್ಟು ; (ಕಳೆದ ೩ ವರ್ಷಗಳ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಜಿಲ್ಲಾ ವ್ಯಾಪ್ತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಕಳ್ಳತನ ಮತ್ತು ದರೋಡೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಕಳ್ಳತನ ಮತ್ತು ದರೋಡೆ ಪ್ರಕರಣಗಳನ್ನು ನಿಯಂತ್ರಣ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

# ರಾಯಚೂರು ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಕೆರೆಗಳ ಅಭಿವೃದ್ಧಿ ಕುರಿತು

**ಶ್ರೀ ಎ. ವಸಂತಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೪೯ (೨೨೯೦) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು ;

(ಆ) ಕಳೆದ ೩ ವರ್ಷಗಳಲ್ಲಿ ಎಷ್ಟು ಕೆರೆಗಳ ಹೂಳು ತೆಗೆದು ಅಭಿವೃದ್ಧಿಪಡಿಸಲಾಗಿದೆ ;

(ಇ) ಬಳಕೆಯಲ್ಲಿಲ್ಲದ/ಒಣಗಿರುವ ಕೆರೆಗಳ ಸಂಖ್ಯೆ ಎಷ್ಟು ;

(ಈ) ಕೆರೆಗಳ ಪುನರುಜ್ಜೀವನಕ್ಕೆ ಮಂಜೂರಾದ ಅನುದಾನ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0–215 /500 ಪ್ರತಿಗಳು/09–03–2026